

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 13 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 354 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ನಾಳೆ ಮೈಸೂರಲ್ಲಿ ಒಂದೇ ವೇದಿಕೆ ಏರಲಿರುವ

ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ದೇವೇಗೌಡರು

■ ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಗಳ ಪರ ಪ್ರಚಾರ ■ ನಂತರ ಮಂಗಳೂರಲ್ಲಿ ರೋಡ್ ಶೋ ನಡೆಸಲಿರುವ ಪ್ರಧಾನಿ ಮೋದಿ ■ ಇಬ್ಬರು ಧುರೀಣರು ಕಾಂಗ್ರೆಸ್ ವಿರುದ್ಧ ಗುಡುಗುವ ಸಾಧ್ಯತೆ





ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಪ್ರಧಾನಿ ಮೋದಿ ಚುನಾವಣಾ ಪ್ರಚಾರಕ್ಕೆ ಸಿದ್ಧತೆ.

ಬೆಂಗಳೂರು, ಏ.12(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರುಗಳು ಕಾಂಗ್ರೆಸ್ ವಿರುದ್ಧ ಸಮರ ಸಾರಲು ಒಂದೇ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ.

ಕರ್ನಾಟಕದಲ್ಲಿ ನಡೆಯುತ್ತಿರುವ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಲು ಮೋದಿ ಅವರು ಇದೇ 14 ರಂದು ಒಂದು ದಿನದ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.

ಅಂದು ಮೈಸೂರು ಹಾಗೂ ಮಂಗಳೂರಿನಲ್ಲಿ ಏಳು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲಿದ್ದಾರೆ. ಜೆಡಿಎಸ್, ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಗೊಂಡ ನಂತರ ಇದೇ ಮೊದಲ ಬಾರಿಗೆ ಮೋದಿ ಹಾಗೂ ಗೌಡರು ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ಚುನಾವಣಾ ಪ್ರಚಾರದ ವೇದಿಕೆಯಲ್ಲಿ ಕಾಂಗ್ರೆಸ್ ವಿರುದ್ಧ ಗುಡುಗಲಿದ್ದಾರೆ. ಅಂದು ಸಂಜೆ 4 ಗಂಟೆಗೆ ನಡೆಯುವ ಬಿಜೆಪಿ–ಜೆಡಿಎಸ್ ಮೈತ್ರಿ ಸಮಾವೇಶದಲ್ಲಿ ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಲೋಕಸಭಾ ಕ್ಷೇತ್ರಗಳ ಮೈತ್ರಿ ಅಭ್ಯರ್ಥಿಗಳ ಪರ ಉಭಯ ನಾಯಕರು ಮತ ಯಾಚಿಸಲಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆವರೆಗೂ ಸಿದ್ಧಾಂತದ ಆಧಾರದ ಮೇಲೆ ರಾಜಕೀಯ ಮಾಡಿಕೊಂಡು ಬಂದ ಈ ನಾಯಕರು, ಇಂದು ತಮ್ಮ ಹಳೆಯ ಎಲ್ಲಾ ರಾಜಕೀಯ ವೈಮನಸ್ಸನ್ನು ದೂರವಿಟ್ಟು ಎನ್‌ಡಿಎ ಅಭ್ಯರ್ಥಿಗಳ ಪರ ಮತ ಯಾಚಿಸುತ್ತಿದ್ದಾರೆ.

ಚುನಾವಣೆಗೆ ಸಂಬಂಧಿಸಿದಂತೆ ಈ ಇಬ್ಬರು ನಾಯಕರು ಇದೇ ಪ್ರಥಮ ಬಾರಿಗೆ ವೇದಿಕೆ ಹಂಚಿಕೊಂಡು ಕಾಂಗ್ರೆಸ್ ವಿರುದ್ಧ ರಾಜಕೀಯ ಟೀಕಾಸ್ತ್ರಗಳನ್ನು ನಡೆಸಿ ಪಕ್ಷದ ಅಭ್ಯರ್ಥಿಗಳ ಪರ ಮತ ನೀಡುವಂತೆ ಮನವಿ ಮಾಡಿಕೊಳ್ಳಲಿದ್ದಾರೆ.

ಮೈಸೂರಿನಲ್ಲಿ ನಡೆಯುವ ಸಮಾರಂಭ ಬಿಜೆಪಿ–ಜೆಡಿಎಸ್ ಜಂಟಿ ಸಮಾವೇಶವಾಗಿದ್ದು, ಇದರಲ್ಲಿ ಮೋದಿ ಹಾಗೂ ದೇವೇಗೌಡರಲ್ಲದೆ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ● 10ನೇ ಪುಟಕ್ಕೆ

ಭಾರತಾಂಬೆ ಹೆಸರೇಳಲು ಬಿಜೆಪಿಗರಿಗೆ ಯಾವ ಹಕ್ಕಿಲ್ಲ

ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಆರ್‌ಎಸ್‌ಎಸ್ ನಾಯಕರ ಹೆಸರೇಳಿದರೆ ರಾಜಕೀಯ ನಿವೃತ್ತಿ: ಮುಖ್ಯಮಂತ್ರಿ ಸಿದ್ದರಾಮಯ್ಯ



ನಂಜನಗೂಡು, ಏ.12– ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್ ಪಕ್ಷ. ಭಾರತಾಂಬೆ ಹೆಸರೇಳುವ ಹಕ್ಕಿರುವುದು ಕಾಂಗ್ರೆಸ್‌ಗೇ ಹೊರತು ಬಿಜೆಪಿಗಲ್ಲ. ದೇಶಭಕ್ತಿ, ಭಾರತ ಮಾತೆ ಬಗ್ಗೆ ಮಾತನಾಡುವ ಬಿಜೆಪಿಗರು, ಆರ್‌ಎಸ್‌ಎಸ್‌ನ ಒಬ್ಬರು ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾಗಿರುವ ಕುರುಹು ತೋರಿಸಿದಲ್ಲಿ ನಾನು ರಾಜಕೀಯದಿಂದಲೇ ನಿವೃತ್ತಿ ಹೊಂದುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲೆಸೆದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಕಳಲೆ ಗೇಟ್‌ನಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಬೃಹತ್ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಯಾವುದೇ ಸಿದ್ಧಾಂತಗಳಿಲ್ಲ. ಈ ಮಾತನ್ನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಬಿಜೆಪಿಯವರಿಗೆ ಸಂವಿಧಾನ, ಪ್ರಜಾತಂತ್ರ ವ್ಯವಸ್ಥೆ, ದೇಶಭಕ್ತಿ, ಭಾರತಾಂಬೆ ಬಗ್ಗೆ ಮಾತನಾಡುವ ಯಾವ ನೈತಿಕತೆ ಇದೆ. ಅವರು ಭಾರತಾಂಬೆ ಹೆಸರು ಹೇಳಲು ನಮ್ಮ ತಕರಾರು ಇಲ್ಲ. ಆದರೆ ನಮ್ಮನ್ನು ದೇಶಭಕ್ತರಲ್ಲ ಎನ್ನಲು ಅವರಿಗೆ ಯಾವ ನೈತಿಕತೆಯೂ ಇಲ್ಲ. ಜೊತೆಗೆ ಅವರು ದೇಶ ಭಕ್ತರಾಗಿದ್ದರೆ ಏಕೆ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲಿಲ್ಲ ಎಂದು ಪ್ರಶ್ನಿಸಿದ ಅವರು, ಮೋದಿ, ಅಡ್ವಾನಿ, ಹೆಡಗೇವಾರ್ ● 10ನೇ ಪುಟಕ್ಕೆ

> “ ಕ್ಷೇತ್ರದಲ್ಲಿ ಬಿಜೆಪಿ ಯಾವ ಅಭಿವೃದ್ಧಿ ಕೆಲಸ ಮಾಡಿಲ್ಲ. ಕಾಂಗ್ರೆಸ್ ಅವಧಿಯಲ್ಲಿ ಉಪ ಚುನಾವಣೆ ಸಂದರ್ಭ 600 ಕೋಟಿಗೂ ಹೆಚ್ಚಿನ ಅಭಿವೃದ್ಧಿ ಕೆಲಸವಾಗಿದೆ. ಈ ಚುನಾವಣೆ ಬರೀ ಲೋಕಸಭೆ ಅಭ್ಯರ್ಥಿ ಆಯ್ಕೆಯ ವಿಷಯವಾಗಿಲ್ಲ. ಅಭಿವೃದ್ಧಿಯಲ್ಲಿ ನಂಬಿಕೆ ಇಲ್ಲದ ಕೋಮುವಾದವನ್ನು ಅಳಿಸಿ ಹಾಕಿ ದೇಶದ ಭದ್ರತೆ ಕಾಪಾಡುವಂತಹ ಚುನಾವಣೆಯಾಗಿದೆ. ಆದ್ದರಿಂದ ಕೋಮುವಾದ ಅಳಿಸಿ ಸಂವಿಧಾನ ಸಂರಕ್ಷಿಸಲು ಈ ಚುನಾವಣೆ ಸವಾಲೆಂದು ಸ್ವೀಕರಿಸಿ ಬಿಜೆಪಿಗೆ ತಕ್ಕ ಪಾಠ ಕಲಿಸಿ.
>
> – ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

SITE FOR SALE
In Yesh Smart city (Beerihundi)
1517 Sq.Ft, N/E Corner Site
@27 LAKHS
(Non-Negotiable)
9916844857
Broker Excuse

AFFORDABLE SITES
Kote Road @ Jayapura
Narsipura Road
Yelwala, Hunsur Road
Loan Avbl | Ready to build
Yesh 9538885595

FLAT FOR SALE
2 BHK Apartment for sale at Lakshmipuram for Rs. 80 Lakhs.
East Facing, 2nd Floor, 1411 Sqft., built up area.
9986332303 / 9886832514



HOUSE FOR SALE
KUVEMPUNAGAR
DIRECT OWNER
Meeting
Ph 94833 95638

WALK IN INTERVIEW
SAI GURUKULA PRESCHOOL
JP NAGAR
Requires Only Female Staff With Experience and good Communication skill
Counselor and Teacher-1 post
Teachers - 3 Post
Asst Teachers - 2 Post
Care Taker Post - 1Post
9686862606

ಮೇ 29ರಿಂದ ಶಾಲೆಗಳು ಪುನರಾರಂಭ

2024–25ನೇ ಸಾಲಿನ ಮೊದಲ ಅವಧಿ; ಮೇ 29–ಅ.2
2024–25ನೇ ಸಾಲಿನ ಎರಡನೇ ಅವಧಿ;ಅ. 21–ಏ.10



ಬೆಂಗಳೂರು: ರಾಜ್ಯ ಪಠ್ಯಕ್ರಮದ ಎಲ್ಲ ಸರ್ಕಾರಿ, ಅನುದಾನಿತ, ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮೇ 29ರಿಂದ ಪುನರಾರಂಭವಾಗಲಿವೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 2024–25ನೇ ಸಾಲಿನ ಶೈಕ್ಷಣಿಕ ವರ್ಷದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದು, 18 ದಿನಗಳು ದಸರಾ ರಜೆ, 48 ದಿನಗಳು ಬೇಸಿಗೆ ರಜೆ ನೀಡಿದೆ. ಒಟ್ಟು 244 ದಿನಗಳನ್ನು ಶಾಲಾ ಕರ್ತವ್ಯದ ದಿನಗಳೆಂದು ನಿಗದಿ ಮಾಡಲಾಗಿದೆ. ಮಕ್ಕಳು ಹಾಗೂ ಶಿಕ್ಷಕರಿಗೆ 121 ದಿನಗಳ ಒಟ್ಟಾರೆ ರಜೆ ದೊರಕಲಿದೆ. ಶಾಲಾ ಅವಧಿಯ 244 ದಿನಗಳಲ್ಲಿ ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆಗೆ 180 ದಿನಗಳು, ಪರೀಕ್ಷೆ ಹಾಗೂ ಮೌಲ್ಯಾಂಕನ ಕಾರ್ಯಕ್ಕಾಗಿ 26, ಪಠ್ಯೇತರ ಚಟುವಟಿಕೆಗಳಿಗೆ 24, ಫಲಿತಾಂಶ ವಿಶ್ಲೇಷಣೆಗಾಗಿ 10 ದಿನಗಳನ್ನು ಮೀಸಲಿಡಲಾಗಿದೆ. ಉಳಿದ 4 ದಿನಗಳನ್ನು ಸ್ಥಳೀಯ ರಜೆಗಳಾಗಿ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ.

ಕೋಲ್ಕತ್ತಾದಲ್ಲಿ ಬೆಂಗಳೂರು ರಾಮೇಶ್ವರಂ ಕೆಫೆ ಸ್ಫೋಟದ ಆರೋಪಿಗಳ ಬಂಧನ





ಅಬ್ದುಲ್ ಮತೀನ್



ಮುಸಾವೀರ್ ಹುಸೇನ್

ಬೆಂಗಳೂರು,ಏ.12–ರಾಮೇಶ್ವರಂ ಕೆಫೆ ಸ್ಫೋಟ ಸಂಭವಿಸಿ ಬರೋಬ್ಬರಿ 42 ದಿನಗಳ ಬಳಿಕ ಪಶ್ಚಿಮ ಬಂಗಾಳದ ಕೋಲ್ಕತ್ತಾದ ಹೊರವಲಯದಲ್ಲಿ ಬಾಂಬರ್ ಮುಸಾವೀರ್ ಹುಸೇನ್ ಶಜೀಬ್ ಹಾಗೂ ಮಾಸ್ಟರ್ ಮೈಂಡ್ ಅಬ್ದುಲ್ ಮತೀನ್ ತಹಾ ಅನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ.

ಮಾರ್ಚ್ 1 ರಂದು ಬೆಂಗಳೂರಿನ ವೈಟ್ ಫೀಲ್ಡ್ ಬಳಿಯಿರುವ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ ಸಂಭವಿಸಿತ್ತು. ಬಾಂಬ್ ಸ್ಫೋಟದಲ್ಲಿ 10 ಮಂದಿ ಗಾಯಗೊಂಡಿದ್ದರು. ಅಲ್ಲಿಂದ ಅಖಾಡಕ್ಕೆ ಇಳಿದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಾಂಬರ್ ಹಿಂದೆ ಬಿದ್ದಿತ್ತು. ಈಗ ಬಾಂಬರ್ ಅನ್ನು ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ.

ವಿವರ: ಗುಪ್ತಚರ ಇಲಾಖೆ ಹಾಗೂ ಎನ್‌ಐಎ ಅಧಿಕಾರಿಗಳು 42 ದಿನಗಳಿಂದ ಟ್ರಾಕ್ ಮಾಡುತ್ತಿದ್ದ ಪ್ಯಾಟರ್ನ್ ಅನ್ನು ಫಾಲೋ ಮಾಡಿದ್ದರಿಂದ ಬಾಂಬ್ ಸ್ಫೋಟದ ಆರೋಪಿಗಳು ಸಿಕ್ಕಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸ್ಫೋಟದ ಬಳಿಕ ಈ ಇಬ್ಬರು ಗೆಸ್ಟ್ ಹೌಸ್ ● 10ನೇ ಪುಟಕ್ಕೆ

ಆರೋಪಿಗಳಿಗೆ ಮೂರು ದಿನಗಳ ಟ್ರಾನ್ಸಿಟ್ ರಿಮಾಂಡ್

ಕೊಲ್ಕತ್ತಾ: ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದ ಇಬ್ಬರು ಆರೋಪಿಗಳಿಗೆ ಕೊಲ್ಕತ್ತಾ ಕೋರ್ಟ್ ಶುಕ್ರವಾರ ಮೂರು ದಿನಗಳ ಟ್ರಾನ್ಸಿಟ್ ರಿಮಾಂಡ್ ನೀಡಿದ್ದು, ಹೆಚ್ಚಿನ ತನಿಖೆಗಾಗಿ ಅವರನ್ನು ಬೆಂಗಳೂರಿಗೆ ಕರೆದೊಯ್ಯಲು ಎನ್‌ಐಎಗೆ ಅನುಮತಿ ನೀಡಿದೆ ಬಂಧಿತ ಆರೋಪಿಗಳಾದ ಮುಸಾವಿರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ತಾಹಾನನ್ನು ವೈದ್ಯಕೀಯ ಪರೀಕ್ಷೆ ಮಾಡಿಸಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ರಾಷ್ಟ್ರೀಯ ತನಿಖಾ ಸಂಸ್ಥೆಯ ಮನವಿ ಮೇರೆಗೆ ಸಿಟಿ ಸೆಷನ್ಸ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮೂರು ದಿನಗಳ ಟ್ರಾನ್ಸಿಟ್ ರಿಮಾಂಡ್‌ಗೆ ಅನುಮತಿ ನೀಡಿದ್ದಾರೆ. ಕೋರ್ಟ್‌ನಿಂದ ವಶಕ್ಕೆ ಪಡೆದು ಆರೋಪಿಗಳನ್ನು ಎನ್‌ಐಎ ತಂಡ ಬೆಂಗಳೂರಿಗೆ ತಡರಾತ್ರಿ ಕರೆತರಲಾಗಿದೆ.





ಮತ್ತೊಮ್ಮೆ ಮೋದಿ ಪ್ರಧಾನಿ ಮಾಡಲು ಒಕ್ಕಲಿಗ ಸಮುದಾಯ ಕಂಕಣ ಕಟ್ಟಿದೆ

● ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿ ಯದುವೀರ್ ವಿಶ್ವಾಸ ● ದೇಶಕ್ಕಾಗಿ ಒಕ್ಕಲಿಗ ಸಮುದಾಯ ಸದಾ ಸಜ್ಜಾಗಿದೆ

ಮೈಸೂರು, ಏ.12(ಎಂಕೆ)- ಸದಾ ಕಾಲ ಭಾರತಕ್ಕಾಗಿ ನಿಂತಿರುವ ಒಕ್ಕಲಿಗ ಸಮುದಾಯ ಮತ್ತೊಮ್ಮೆ ಮೋದಿಯವರನ್ನು ಪ್ರಧಾನಿಯನ್ನಾಗಿಸುವ ಮೂಲಕ ಮುಂದೆಯೂ ದೇಶದ ಬೆನ್ನೆಲುಬಾಗಿ ನಿಲ್ಲಲಿದೆ ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಎನ್.ಆರ್.ಮೊಹಲ್ಲಾದಲ್ಲಿರುವ ಶ್ರೀ ರೈತ ಗಂಗಡಕಾರ ಒಕ್ಕಲಿಗರ ಶ್ರೀರಾಮ ಮಂದಿರ ಸಂಘದ ಭವನದಲ್ಲಿ ಶುಕ್ರವಾರ ಸಂಜೆ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಹಿಂದಿನ ಕಾಲದಿಂದಲೂ ಭಾರತಕೋಸ್ಕರ, ಭಾರತಕ್ಕಾಗಿ ಒಕ್ಕಲಿಗ ಸಮುದಾಯ ನಿಂತಿದೆ. ಮುಂದೆಯೂ ನಿಲ್ಲಲಿದೆ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರಲ್ಲದೆ ವಿಕಸಿತ ಭಾರತ ನಿರ್ಮಾಣ ದೃಷ್ಟಿಯಿಂದ ಒಕ್ಕಲಿಗ ಸಮುದಾಯ ಸೇರಿದಂತೆ ನಮ್ಮೆಲ್ಲರ ಕರ್ತವ್ಯವೂ ಮತ್ತೆ ಮೋದಿಯವರನ್ನು ಪ್ರಧಾನಿಯನ್ನಾಗಿ ಮಾಡುವುದಾಗಿ ಎಂದರು.

ಮೈಸೂರು ಸಂಸ್ಥಾನದ ಒಡೆಯರ್ ಸಾಮಾಜಿಕ ಸೇವೆ ಜೊತೆಗೆ ಕಳೆದ ಹತ್ತು ವರ್ಷದಲ್ಲಿ ಕೇಂದ್ರ ಸರ್ಕಾರ ಮಾಡಿರುವ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವರಿಸಿದ ಯದುವೀರ್, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಮ್ಮೆಲ್ಲರ ಮನೆ ಮಗನಾಗಿ ಕೆಲಸ ಮಾಡಲು ಒಂದು ಅವಕಾಶ ಮಾಡಿಕೊಡಿ. ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ನಿಮ್ಮೊಂದಿಗೆ ಸೇರಿ ಕೆಲಸ ಮಾಡುತ್ತೇನೆ ಎಂದು ಮನವಿ ಮಾಡಿದರು. ಬಿಜೆಪಿ ರಾಜ್ಯ ಕಾರ್ಯದರ್ಶಿ ಪ್ರೀತಂಗೌಡ ಮಾತನಾಡಿ, ನಿಮ್ಮೆಲ್ಲರ ಸೇವೆ ಮಾಡಲು ಅರಮನೆಯಿಂದ ಯದುವೀರ್ ಅವರು ಹೊರಗೆ ಬಂದಿದ್ದಾರೆ. ಪ್ರಧಾನಿಗಳ ಸಾಧನೆಯಲ್ಲಿ ನನ್ನದು ಪಾತ್ರವಿರಲಿ ಎಂದು ರಾಜಕೀಯ ಕ್ಷೇತ್ರಕ್ಕೆ ಬಂದಿರುವ ಅವರನ್ನು ಸುಮಾರು 3 ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲ್ಲಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಕರೆ ನೀಡಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವು ಸಾಧಿಸುವ ಮೂಲಕ ಮೋದಿಯವರು ಮತ್ತೊಮ್ಮೆ ದೇಶದ ಪ್ರಧಾನಿಯಾಗಲಿದ್ದಾರೆ. ಇದು ದೇಶದ ಜನತೆಯ ತೀರ್ಮಾನವೂ ಆಗಿದೆ. ಆದ್ದರಿಂದ ನಿಮ್ಮ ನಿಮ್ಮ ಸಂಬಂಧಿಕರು, ಸ್ನೇಹಿತರಿಗೂ ಬಿಜೆಪಿ ಅಭ್ಯರ್ಥಿಗಳಿಗೆ ಮತ ನೀಡುವಂತೆ ಮನವೊಲಿಸಿ ಎಂದು ಸಲಹೆ ನೀಡಿದರು.

ಜಾತಿ-ಭೇದವಿಲ್ಲ: ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮಾತನಾಡಿ, ಒಕ್ಕಲಿಗರಲ್ಲಿ ಜಾತಿ-ಭೇದ ಎಂಬುದಿಲ್ಲ. ಸ್ವಾಭಿಮಾನಿಗಳಾದ ಒಕ್ಕಲಿಗರು ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಒಕ್ಕಲುತನ ಮಾಡಿಕೊಂಡು ಬಂದಿದ್ದಾರೆ. ಆದರೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ಜಾತಿ ಚೌಕಟ್ಟಿನಲ್ಲಿ ಒಕ್ಕಲಿಗರನ್ನು ಗುರ್ತಿಸುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ. ಒಕ್ಕಲಿಗರನ್ನು ಕಾಂಗ್ರೆಸ್‌ನವರು ಯಾವ ರೀತಿ ಅವಮಾನಿಸಿದ್ದಾರೆ ಎಂಬದನ್ನು ಒಮ್ಮೆ ಯೋಚಿಸಿ, ನಂತರ ಮತದಾನ ಮಾಡಿ. ಮೈಸೂರು ಮಹಾರಾಜರು ನೀಡಿದ ಸಾವಿರಾರು ಎಕರೆ ಭೂಮಿಯನ್ನು ಉಚಿತವಾಗಿ ನೀಡಿ, ವ್ಯವಸಾಯಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಯದುವೀರ್ ಅವರಿಗೆ ಮತ ನೀಡುವ ಮೂಲಕ ಮೈಸೂರು ಒಡೆಯರ ಋಣ ತೀರಿಸಿ. ಎನ್.ಆರ್ ಕ್ಷೇತ್ರದಲ್ಲಿ ಅತೀ ಹೆಚ್ಚು ಮತ ನೀಡಿ ಅವರನ್ನು ಜಯಶೀಲರನ್ನಾಗಿ ಮಾಡಿ ಎಂದು ಮನವಿ ಮಾಡಿದರು.

ಯದುವೀರ್‌ಗೆ ಆಶೀರ್ವಾದ: ಇದೇ ವೇಳೆ ವೇದಿಕೆ ಆಗಮಿಸಿದ ಎನ್.ಆರ್. ಮೊಹಲ್ಲಾದ ಹಿರಿಯ ಜೀವ ಚಿಕ್ಕಿರಮ್ಮ ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿ ಯದುವೀರ್ ಅವರಿಗೆ ಯಶಸ್ಸು ಲಭಿಸುವಂತೆ ಆಶೀರ್ವಾದ ಮಾಡಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಎನ್.ಆರ್ ಕ್ಷೇತ್ರದ ಮಂಡಲ ಅಧ್ಯಕ್ಷ ಸ್ಮಾರ್ಟ್ ಮಂಜು, ಕಾರ್ಯದರ್ಶಿಗಳಾದ ಮಂಜು ಸಿ.ಗೌಡ, ಪದ್ಮನಾಭ್, ಎನ್.ಆರ್ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಎಂ.ಎನ್. ರಾಮು, ಮೊಹಲ್ಲಾ ಮುಖಂಡ ರಾಮಣ್ಣ, ಮುಖಂಡರಾದ ಪುಟ್ಟಲಿಂಗು, ಕೃಷ್ಣಪ್ಪ, ಸು.ಮುರಳಿ, ಲತಾ, ಸವಿತಾ ಮತ್ತಿತರರು ಉಪಸ್ಥಿತರಿದ್ದರು.



ಎನ್.ಆರ್.ಮೊಹಲ್ಲಾದಲ್ಲಿರುವ ಶ್ರೀ ರೈತ ಗಂಗಡಕಾರ ಒಕ್ಕಲಿಗರ ಶ್ರೀರಾಮಮಂದಿರ ಸಂಘದ ಭವನದಲ್ಲಿ ಶುಕ್ರವಾರ ಸಂಜೆ ನಡೆದ ಪ್ರಚಾರ ಸಭೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿ ಯದುವೀರ್ ಮಾತನಾಡಿದರು. ಮಾಜಿ ಶಾಸಕರಾದ ಎಲ್.ನಾಗೇಂದ್ರ, ಪ್ರೀತಂಗೌಡ ಮತ್ತಿತರರಿದ್ದರು.

> "ಕಳೆದ ಲೋಕಸಭಾ ಚುನಾವಣೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರಿಗೆ ಟಿಕೆಟ್ ನೀಡಬೇಕೆಂದು ಜೆಡಿಎಸ್‌ನವರು ಪ್ರಯತ್ನಿಸಿದರು. ಆದರೆ ಈ ಭಾಗದಲ್ಲಿ ಒಕ್ಕಲಿಗರ ಪ್ರಾಬಲ್ಯವಿಲ್ಲವೆಂದು ಕಾಂಗ್ರೆಸ್ ಟಿಕೆಟ್ ಕೊಡಲಿಲ್ಲ. ಅವರನ್ನು ತುಮಕೂರಿನಲ್ಲಿ ನಿಲ್ಲಿಸಿ, ಸೋಲಿಸಿದರು. 35 ವರ್ಷದ ಬಳಿಕ ಮೈಸೂರು-ಕೊಡಗು ಕ್ಷೇತ್ರದಲ್ಲಿ ಒಕ್ಕಲಿಗರಿಗೆ ಟಿಕೆಟ್ ಕೊಟ್ಟಿದ್ದೇವೆ ಎಂದು ಹೇಳುತ್ತಿರುವ ಕಾಂಗ್ರೆಸ್‌ನವರ ಉದ್ದೇಶ ವೇನು ಎಂಬುದರ ಕುರಿತು ಒಕ್ಕಲಿಗ ಸಮುದಾಯ ಯೋಚನೆ ಮಾಡಬೇಕಿದೆ.
> -ಸಂದೇಶ್‌ಸ್ವಾಮಿ, ಮಾಜಿ ಮೇಯರ್

> "ಒಕ್ಕಲಿಗರು ದೇಶ ಭಕ್ತರು. ದೇಶವೇ ಮೊದಲು ಎಂದು ಒಕ್ಕಲುತನ ಮಾಡುವ ಒಕ್ಕಲಿಗರು, ಟಿಪ್ಪು ಸುಲ್ತಾನ್ ಮೈಸೂರು ಸಂಸ್ಥಾನದ ಮೇಲೆ ಆಕ್ರಮಣ ಮಾಡಲು ಬಂದಾಗ ಉರೀಗೌಡ್ರು, ನಂಜೇಗೌಡ್ರು ಹೋರಾಟ ಮಾಡಿ ಸಂಸ್ಥಾನ ಉಳಿಸಿಕೊಂಡಿದ್ದರು. ಹೋರಾಟ ಮಾಡಿ ನಮ್ಮ ಸಂಸ್ಥಾನ ಉಳಿಸಿಕೊಂಡ ಒಕ್ಕಲಿಗ ಮನೆತನದವರು, ಮಹಾರಾಜರು ಅಭ್ಯರ್ಥಿಯಾಗಿರುವಾಗ ಜಾತಿ ನೋಡುತ್ತಾರಾ... ಹಾಗಾಗಿ ಎನ್.ಆರ್.ಕ್ಷೇತ್ರದ ಎಲ್ಲಾ ಸ್ವಾಭಿಮಾನಿ ಹಿಂದು ಸಮಾಜದ ಬಂಧುಗಳು ಒಗ್ಗಟ್ಟಾಗಿ ಜಾತಿಯನ್ನು ಮೀರಿ ಕನಿಷ್ಠ 70-80 ಸಾವಿರ ಮತಗಳ ಲೀಡ್ ಕೊಡಬೇಕು.
> -ಪ್ರೀತಂಗೌಡ, ಬಿಜೆಪಿ ರಾಜ್ಯ ಕಾರ್ಯದರ್ಶಿ

ಇಂದಿನಿಂದ ರಾಜ್ಯದಲ್ಲಿ ಆರು ದಿನ ಮಳೆ ಸಾಧ್ಯತೆ



ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ಅಲ್ಲಲ್ಲಿ ಏಪ್ರಿಲ್ 13ರಿಂದ 18ರವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

13ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಸಾಧ್ಯತೆಯಿದೆ.

ಬಾಗಲಕೋಟೆ, ಧಾರವಾಡ, ಗದಗ, ವಿಜಯಪುರ, ಹಾವೇರಿ, ಕೊಪ್ಪಳ, ಕೊಡಗು, ಯಾದಗಿರಿ, ಶಿವಮೊಗ್ಗ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಉಳಿದ, ಜಿಲ್ಲೆಗಳಲ್ಲಿ ಒಣಹವೆ ಇರುವ ಬಹಳಷ್ಟು ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ. ಏಪ್ರಿಲ್ 14ರಿಂದ ಮೂರು ದಿನಗಳ ಕಾಲ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉಷ್ಣಾಂಶ ತುಸು ಏರಿಕೆ ಕಾಣಲಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಗಾಳಿಯು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ಹಾಗೂ 30ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ. ದಕ್ಷಿಣ ಒಳನಾಡು ಒಳನಾಡು ಪ್ರದೇಶದಲ್ಲಿ ಗಾಳಿ ಪ್ರತಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಎರಡು ದಿನಗಳ ಕಾಲ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗುವ ಸಾಧ್ಯತೆಯಿದೆ.

ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ, ಬೀದರ್ ಜಿಲ್ಲೆಯ ಮಂಠಾಳ, ಕಲಬುರಗಿ ಜಿಲ್ಲೆ ನಿಂಬರ್ಗಾ ತಾಂಡಾದಲ್ಲಿ 3 ಸೆಂ.ಮೀ, ವಿಜಯಪುರ ಜಿಲ್ಲೆಯ ಇಂಡಿ, ಕಲಬುರಗಿ ಆಳಂದ, ಬಾಗಲಕೋಟೆಯ ಇಳಕಲ್, ಯಾದಗಿರಿಯ ನಾರಾಯಣಪುರ, ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ 2 ಸೆಂ.ಮೀ ಹಾಗೂ ಬೀದರ್ ಜಿಲ್ಲೆಯ ಭಾಲ್ಕಿ, ಕಲಬುರಗಿಯ ಯಡ್ರಾಮಿ, ಬೆಳಗಾವಿಯ ಯಡ್ವಾಡ, ವಿಜಯಪುರದ ಮುದ್ದೇಬಿಹಾಳ, ಚಿಕ್ಕಮಗಳೂರಿನ ಕಳಸದಲ್ಲಿ 1 ಸೆಂ.ಮೀ ಮಳೆಯಾಗಿತ್ತು.

ಅನಾರೋಗ್ಯದಿಂದ ಖ್ಯಾತ ಜ್ಯೋತಿಷಿ ಎಸ್.ಕೆ.ಜೈನ್ ನಿಧನ



ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಖ್ಯಾತ ಜ್ಯೋತಿಷಿ ಎಸ್.ಕೆ. ಜೈನ್ (67) ಅವರು ಶುಕ್ರವಾರ ಸಂಜೆ ನಿಧನರಾದರು. ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಅವರನ್ನು ನಗರದಲ್ಲಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಿಸದೆ ಅವರು ಕೊನೆಯುಸಿರೆಳೆದಿದ್ದಾರೆ.

ಎಸ್.ಕೆ. ಜೈನ್ ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ. ಡಾ ಸುರೇಂದ್ರ ಕುಮಾರ್ ಜೈನ್ (ಎಸ್.ಕೆ.ಜೈನ್) ಅವರು 1957ರ ಅಕ್ಟೋಬರ್ 13ರಂದು ಜನಿಸಿದ್ದರು. ಮೂಲತಃ ದಕ್ಷಿಣ ಕನ್ನಡದವರಾದ ಇವರು, ಬೆಳೆದಿದ್ದು ಮಾತ್ರ ಬೆಂಗಳೂರಿನಲ್ಲಿ. ಶ್ವಾಸಕೋಶದಲ್ಲಿ ನೀರು ಶೇಖರಣೆಗೊಂಡು ದೇಹಕ್ಕೆಲ್ಲಾ ಹರಡಿದ್ದರಿಂದ ಮಾರ್ಚ್ 18ರಂದು ಸಂಜೆ ಅವರಿಗೆ ಎದೆ ನೋವು ಕಾಣಿಸಿಕೊಂಡಿತ್ತು. ಹೀಗಾಗಿ ಅವರನ್ನು ಸಂತೋಷ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿ ಪ್ರಥಮ ಚಿಕಿತ್ಸೆ ನಂತರ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಏಪ್ರಿಲ್ ಎರಡನೇ ವಾರದಲ್ಲಿ ಅವರನ್ನು ಡಿಸ್ಚಾರ್ಜ್ ಮಾಡಲಾಗಿತ್ತು.

ಮತ್ತೆ ಅಸ್ವಸ್ಥರಾಗಿದ್ದರಿಂದ ಅವರನ್ನು 4 ದಿನಗಳ ಹಿಂದೆ ಭಗವಾನ್ ಮಹಾವೀರ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಬಿಳಿರಕ್ತ ಕಣಗಳು ಕಡಿಮೆಯಾಗಿ, ಲೋಬಿಪಿ ಆಗಿದ್ದರಿಂದ ಸೋಂಕು ದೇಹದ ಇತರ ಭಾಗಗಳಿಗೆ ಹರಡಿ ಜೈನ್ ಅವರು ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಹಬ್ಬ-ಹರಿದಿನ, ಗ್ರಹಣ ಸೇರಿದಂತೆ ವಿಶೇಷ ದಿನಗಳಂದು ನ್ಯೂಸ್ ಚಾನೆಲ್‌ಗಳಲ್ಲಿ ರಾಶಿ ಫಲಾಫಲ ಸೇರಿ ದಿನದ ವಿಶೇಷತೆಗಳ ಬಗ್ಗೆ ಜ್ಯೋತಿಷ ಹೇಳುತ್ತಿದ್ದ ಇವರು, ಉದಯ ವಾಹಿನಿಯಲ್ಲಿ ಜ್ಯೋತಿಷ ಕಾರ್ಯಕ್ರಮ ನಡೆಸಿಕೊಡುವುದರ ಮೂಲಕ ಕನ್ನಡ ವಿದ್ಯುನ್ಮಾನ ಮಾಧ್ಯಮದ ಮೊಟ್ಟಮೊದಲ ಜ್ಯೋತಿಷಿ ಎಂಬ ಖ್ಯಾತಿ ಹೊಂದಿದ್ದರು.

ಇವರ ತಂದೆ ಬಿ.ಜಿ. ಶಶಿಕಾಂತ್ ಜೈನ್ ಹೆಸರಾಂತ ಜ್ಯೋತಿಷಿಗಳಾಗಿದ್ದರು. ಎಸ್.ಕೆ.ಜೈನ್ ಅವರು ಮೊದಲಿಗೆ ಇಂಜಿನಿಯರ್ ಆಗಬೇಕೆಂದುಕೊಂಡಿದ್ದರು. ಆದರೆ ನಂತರ ತಂದೆ ಬಳಿಯಲ್ಲಿ ಜ್ಯೋತಿಷ ಕಲಿತು ದೇಶ ವಿದೇಶಗಳಲ್ಲಿ ಹೆಸರು ಮಾಡಿದರು. ಡಾ.ಜೈನ್ ಅವರ ಕೊಡುಗೆಯನ್ನು ಗುರುತಿಸಿ ರಾಜ್ಯ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

ಎಂಎಲ್‌ಸಿ ಟಿ.ಎ.ಶರವಣಗೆ ಲಘು ಹೃದಯಾಘಾತ



ಬೆಂಗಳೂರು: ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಅವರಿಗೆ ಲಘು ಹೃದಯಾಘಾತವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆಂದು ಶುಕ್ರವಾರ ತಿಳಿದುಬಂದಿದೆ. ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ಶರವಣ ಅವರು ಚಿಕಿತ್ಸೆ ಪಡೆಯುತ್ತಿದ್ದು, ಅಭಿಮಾನಿಗಳೂ ಹಾಗೂ ಆತ್ಮೀಯರು ಆತಂಕ ಪಡುವ ಅಗತ್ಯವಿಲ್ಲವೆಂದು ಟ್ವೀಟ್ ಮೂಲಕ ಟಿ.ಎ.ಶರವಣ ಅವರು ಹೇಳಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಶರವಣ ಅವರು ತಮ್ಮ ಆರೋಗ್ಯದ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಲಘು ಹೃದಯಾಘಾತದಿಂದ ಜಯದೇವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಇದೀಗ ಗುಣಮುಖನಾಗಿದ್ದೇನೆ. ಹೃದಯದಲ್ಲಿ ಸ್ಟೆಂಟ್ ಅಳವಡಿಸಲಾಗಿದೆ. ಅಭಿಮಾನಿಗಳು ಹಾಗು ಆತ್ಮೀಯರು ಯಾರು ಆತಂಕ ಪಡುವ ಅವಶ್ಯಕತೆ ಇಲ್ಲ, ನಿಮ್ಮೆಲ್ಲರ ಪ್ರೀತಿ, ಹಾರೈಕೆ, ಪ್ರಾರ್ಥನೆಯಿಂದ ಮತ್ತು ಭಗವಂತನ ಕೃಪೆಯಿಂದ ಚೇತರಿಸಿಕೊಳ್ಳುತ್ತಿದ್ದೇನೆ ಎಂದರು.



ಕೊಡಗು ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಪೂರ್ವ ಭಾಗದ ಮಾಜಿ ಸೈನಿಕರ ಸಂತೋಷ ಕೂಟ ಬನ್ನೂರು ರಸ್ತೆಯಲ್ಲಿರುವ ಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಿತು. ಕುಪ್ಪಂಡ ಅಚ್ಚಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಘದ ಅಧ್ಯಕ್ಷ ಕಂಜಿತಂಡ ಕೆ. ಅಯ್ಯಪ್ಪ, ಅಪ್ಪಚಂಗಡ ಪಿ. ಮೋಟಯ್ಯ, ಕೊಂಬಂಡ ಭೀಮಯ್ಯ, ಇಗ್ಗುಡ ಚಿತ್ರ ಸುಬ್ಬಯ್ಯ ಇನ್ನಿತರರಿದ್ದರು.

ದಾವಣಗೆರೆ, ರಾಮನಗರದಲ್ಲಿ ಚುನಾವಣಾಧಿಕಾರಿಗಳ ಭರ್ಜರಿ ಬೇಟೆ; 22 ಕೋಟಿ ಮೌಲ್ಯದ ಚಿನ್ನ, ವಜ್ರ ಜಪ್ತಿ



ದಾವಣಗೆರೆ/ರಾಮನಗರ: ಲೋಕಸಭೆ ಚುನಾವಣೆಗೆ ದಿನಗಣನೆ ಶುರುವಾಗುತ್ತಿದ್ದಂತೆ ಚುನಾವಣಾಧಿಕಾರಿಗಳು ಅಲರ್ಟ್ ಆಗಿದ್ದು ಅಕ್ರಮ ಸಾಗಾಣೆ ಮೇಲೆ ನಿಗಾ ಇಟ್ಟಿದ್ದು ರಾಮನಗರ ಮತ್ತು ದಾವಣಗೆರೆಯಲ್ಲಿ ತಪಾಸಣೆ ವೇಳೆ ಬರೋ ಬ್ಬರಿ 22 ಕೋಟಿ ಮೌಲ್ಯದ ಚಿನ್ನ ಮತ್ತ ವಜ್ರ ಗಳನ್ನು ವಶಪಡಿಸಿಕೊಂಡಿದ್ದಾರೆ. ದಾಖಲೆ ಇಲ್ಲದೆ ಸಾಗಿಸುತ್ತಿದ್ದ 10 ಕೋಟಿ ಮೌಲ್ಯದ ಚಿನ್ನವನ್ನು ರಾಮನಗರದಲ್ಲಿ ಜಪ್ತಿ ಮಾಡಿದ್ದರೆ, ದಾವಣ ಗೆರೆಯಲ್ಲಿ 12.50 ಕೋಟಿ ಮೌಲ್ಯದ ಚಿನ್ನ, ವಜ್ರ, ಹಾಗೆ ತುಮಕೂರಿನಲ್ಲಿ 70 ಲಕ್ಷ ಹಣವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ದಾವಣಗೆರೆಯ ಲೋಕಿಕೆರೆ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಅಧಿಕಾರಿ ಲೋಕೇಶ್ ನೇತೃತ್ವದಲ್ಲಿ ತಪಾಸಣೆ ನಡೆಸಿದ್ದು ಈ ವೇಳೆ ಸೂಕ್ತ ದಾಖಲೆಗಳು ಇಲ್ಲದ ಕಾರಣ 12.50 ಕೋಟಿ ರೂ. ಮೌಲ್ಯದ ಚಿನ್ನ, ವಜ್ರವನ್ನು ಜಪ್ತಿ ಮಾಡಲಾಗಿದೆ. ಈ ಚಿನ್ನ ಮತ್ತು ವಜ್ರವನ್ನು ವಿವಿಧ ಆಭರಣ ಅಂಗಡಿಗಳಿಗೆ ಸಾಗಿಸಲಾಗುತ್ತಿತ್ತು ಎಂದು ತಿಳಿಬಂದಿದೆ.

ರಾಮನಗರದ ಬಿಡದಿ ಪೊಲೀಸರು ದಾಖಲೆ ಇಲ್ಲದೆ ಸಾಗಿಸುತ್ತಿದ್ದ 10 ಕೋಟಿ ಮೌಲ್ಯದ ಚಿನ್ನವನ್ನು ಜಪ್ತಿ ಮಾಡಿದ್ದಾರೆ. ಬೆಂಗಳೂರು-ಮೈಸೂರು ಹೆದ್ದಾರಿ ಮೂಲಕ ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ವಾಹನವನ್ನು ಬಿಡದಿ ಬಳಿಯ ಹೆಜ್ಜಾಲಟೋಲ್ ಬಳಿ ಪೊಲೀಸರು ತಪಾಸಣೆ ನಡೆಸಿದಾಗ ಚಿನ್ನ ಪತ್ತೆಯಾಗಿದೆ.

ಕಾಂಗ್ರೆಸ್‌ನ ಹಿರಿಯ ಮುಖಂಡ ಚಂದೂಪುರದ ಪಾಪಣ್ಣ ನಿಧನ



ಭಾರತೀನಗರ (ಮಂಡ್ಯ), ಏ.12-ಕಾಂಗ್ರೆಸ್‌ನ ಹಿರಿಯ ಮುಖಂಡರು, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರು ಹಾಗೂ ಭಾರತಿ ಶಿಕ್ಷಣ ಸಂಸ್ಥೆಗಳ ಟ್ರಸ್ಟಿಗಳು ಆಗಿದ್ದ ಚಂದೂಪುರದ ಪಾಪಣ್ಣ (ಕೆ.ಲಿಂಗೇಗೌಡ) ವಯೋಸಹಜ ಕಾಯಿಲೆಯಿಂದ ಶುಕ್ರವಾರ (ಏ.12) ಸ್ವಗೃಹದಲ್ಲಿ ನಿಧನರಾದರು. ಮೃತರು ಮದ್ದೂರು ಎಪಿಎಂಸಿಯ ಪ್ರಥಮ ಅಧ್ಯಕ್ಷರಾಗಿ, ದೆಹಲಿಯ ಇಫ್ಕೊ ಸಂಸ್ಥೆಯ ಸದಸ್ಯರು, ನೈರುತ್ಯ ರೈಲ್ವೆ ಮಂಡಳಿಯ ಮಾಜಿ ಸದಸ್ಯರು, ಕಾಂಗ್ರೆಸ್ ಪಕ್ಷದ ಮಂಡ್ಯ ಜಿಲ್ಲಾ ಉಪಾಧ್ಯಕ್ಷರು ಆಗಿ ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿ, ಜನರ ಮನ್ನಣೆಗೆ ಪಾತ್ರರಾಗಿದ್ದರು. ಅಲ್ಲದೆ ಸರ್ಕಾರಿ ಶಾಲಾ ಕಾಲೇಜು, ಹಾಸ್ಟೆಲ್‌ಗಳು, ಆಸ್ಪತ್ರೆ, ಅಂಚೆ ಕಚೇರಿಯಲ್ಲಿ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಅನೇಕ ಜನಪರ ಸೇವಾ ಕಾರ್ಯಗಳೊಂದಿಗೆ ಉಚಿತ ಸೇವೆಗಳನ್ನು ಸಲ್ಲಿಸಿದ್ದರು.

ಮೃತರಿಗೆ 78 ವರ್ಷ ವಯಸ್ಸಾಗಿದ್ದು, ಇವರು ಪತ್ನಿ ಸಾವಿತ್ರಮ್ಮ, ಓರ್ವ ಪುತ್ರ ಹಾಗೂ ನಾಲ್ವರು ಪುತ್ರಿಯರು, ಅಪಾರ ಸಂಖ್ಯೆಯ ಬಂಧು-ಬಳಗ ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ. ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಮಳವಳ್ಳಿ ಶಾಸಕ ಪಿ.ನರೇಂದ್ರಸ್ವಾಮಿ, ಮಾಜಿ ಶಾಸಕ ಅಂದಾನಿ, ಮದ್ದೂರು ಶಾಸಕ ಉದಯ್, ಗೆಜ್ಜಲಗೆರೆ ಜಿ.ಟಿ.ಪುಟ್ಟಸ್ವಾಮಿ, ಹಾಗಲಹಳ್ಳಿಯ ಪುಟ್ಟ ಲಿಂಗಯ್ಯ, ಕೆಂಬೂತಕೆರೆ ಬಸವರಾಜು, ಎನ್.ಸಿ.ಪುಟ್ಟಸ್ವಾಮಿ, ಪುಟ್ಟಸ್ವಾಮೇಗೌಡ, ತಿಪ್ಪರೇಗೌಡ, ಇಂದ್ರಕುಮಾರ್, ಹಾಗಲಹಳ್ಳಿ ಶಿವಕುಮಾರ್, ಹೊಸೂರು ಮಹೇಶ್, ಚಂದೂಪುರದ ಶಿವಲಿಂಗೇಗೌಡ, ಶಿವಮಾದು, ಸಂಪತ್ ಕುಮಾರ್, ಸುರೇಂದ್ರ, ಪುಟ್ಟಸ್ವಾಮಿ ಸೇರಿದಂತೆ ಸಾವಿರಾರು ಜನರು, ಅಭಿಮಾನಿಗಳು ಅಂತಿಮ ದರ್ಶನ ಪಡೆದರು. ಮೃತರ ಅಂತ್ಯಕ್ರಿಯೆ ಚಂದೂಪುರದ ತೋಟದಲ್ಲಿ ನೆರವೇರಿತು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9481853752 ಸಂಪರ್ಕಿಸಬಹುದು.

ಎಂ.ವಿ.ನಾಗರತ್ನಮ್ಮ



ಮೈಸೂರು, ಏ. 12- ಮೈಸೂರಿನ ಕೃಷ್ಣಮೂರ್ತಿಪುರಂ ನಿವಾಸಿ ಶ್ರೀಮತಿ ಎಂ.ವಿ.ನಾಗರತ್ನಮ್ಮ (93) ವಯೋಸಹಜ ಕಾಯಿಲೆಯಿಂದ ತಮ್ಮ ಸ್ವಗೃಹದಲ್ಲಿ ಗುರುವಾರ ನಿಧನರಾದರು. ಮೃತರು ಪುತ್ರರಾದ ಎಂ.ವಿ.ಶ್ರೀನಿವಾಸ್, ಎಂ.ವಿ.ರಮೇಶ್, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ಹರೀಶ್ಚಂದ್ರ ಘಾಟ್‌ನಲ್ಲಿ ನಿನ್ನೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ಆರ್.ನಾಗಮಣಿ




ಮೈಸೂರು, ಏ. 12- ಮೈಸೂರಿನ ಅಗ್ರಹಾರದ ವೀಣೆ ಶೇಷಣ್ಣ ರಸ್ತೆ ನಿವಾಸಿ ದಿವಂಗತ ಸಿ.ಆರ್.ರಾಮದಾಸ್ ಅವರ ಪತ್ನಿ ಸಿ.ಆರ್. ನಾಗಮಣಿ (85) ಶುಕ್ರವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪುತ್ರರಾದ ಸಿ.ಆರ್. ಯೋಗನರಸಿಂಹ, ನೋಟರಿ ಸಿ.ಆರ್. ಸೀತಾರಾಮ್ ಮತ್ತು ಸಿ.ಆರ್.ರಾಜಗೋಪಾಲ್, ಸೋದರ ಮಾವ ಸಿ.ಆರ್. ಸತ್ಯಪ್ರಕಾಶ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅನೀಸ್ ಫಾರೂಕ್



ಮೈಸೂರಿನ ಉದಯಗಿರಿಯ ಬಿಲಾಲ್ ಮಸೀದಿ ರಸ್ತೆ ನಿವಾಸಿ ಮೆಕ್ಯಾನಿಕಲ್ ಇಂಜಿನಿಯರ್ ಅನೀಸ್ ಫಾರೂಕ್ (59) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಪ್ರೊ ಸಫಿನಾಜ್, ಮಹಾರಾಣಿ ಕಾಲೇಜಿನಲ್ಲಿ ಉರ್ದು ವಿಭಾಗದ ಮುಖ್ಯಸ್ಥೆ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.04.2024 ಶನಿವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024
ಕ್ರೋಧಿ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿ.ಎಫ್.ಟಿ.ಆರ್.ಐ ಶೋಧ ಅನುಶೋಧ -ಪ್ರಾಯೋಜಿತ ಕಾರ್ಯಕ್ರಮ, 6.40 ಪದಸಂಸ್ಕೃತಿ-ಕೆಲ್. ಎ. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 "ಸೌಹಾರ್ದತೆಯ ಸಂಕೇತಗಳು" ಮಾಲಿಕೆಯಲ್ಲಿ ಹುಣಸೂರು ತಾಲೂಕಿನ ರತ್ನಪುರಿಯ ಪರಿಚಯ ಡಾ. ಎಂ. ಭೈರಪ್ಪ ಅವರಿಂದ, 10.00 ವಿ.ವಿ. ಸುಬ್ರಹ್ಮಣ್ಯಂ-ವೈಯೋಲಿನ್ ವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆ, 3.30 ಮಕ್ಕಳ ಮಂಟಪ-ಶ್ರೀ ಗುರು ಮಹಾಂತೇಶ್ವರ ಆಂಗ್ಲ ಮಾಧ್ಯಮ ಶಾಲೆ, ಹೊಸಕೋಟೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ-ಜುಗ್ಗನಂದಸ್ವಾಮಿ, ರಚನೆ-ಬೇಲೂರು ರಾಮಮೂರ್ತಿ, ನಿರ್ಮಾಣ-ಉಮೇಶ್ ಎಸ್. ಎಸ್., 4.30 ನೆನಪಿನಂಗಳ-ಹೆಸರಾಂತ ಚಿತ್ರ ಕಲಾವಿದರಾದ ವಿ. ನಾಗರಾಜು ಅವರೊಂದಿಗೆ ಎಂ. ರಾಮನರಸಯ್ಯ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ-ಕಿಸಾನ್‌ವಾಣಿ-ಜೇನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತು ಸಂವಾದ, ಭಾಗವಹಿಸುತ್ತಾರೆ-ಮದ್ದೂರು ತಾಲೂಕು, ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಕೆ. ಎಂ. ರೇಖಾ ಹಾಗೂ ನಂಜನಗೂಡು ತಾಲೂಕು ಹೆಡೆಯಾಲ ಗಣೇಶಪುರದ ಜಯಶಂಕರ್, ಪ್ರಸ್ತುತಿ-ಎನ್. ಕೇಶವಮೂರ್ತಿ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ದೀಪಕ್ ಕ್ಷೀರಸಾಗರ್-ಗಿಟಾರ್ ವಾದನ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಶೀತದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಮೈಸೂರು ಆರ್ಟ್ ಗ್ಯಾಲರಿ:** ಸಾಧಕರೊಂದಿಗೆ ಸಂವಾದ-91, ತಿಂಗಳ ಸಾಧಕರು ಶಿಕ್ಷಣ ಕ್ಷೇತ್ರದ ಮುತ್ಸದ್ದಿ ಡಾ. ಹೆಚ್.ಟಿ. ಶೈಲಜ, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್.ಕರಿಕಲ್, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಸ್ವಜನ್ಯ ಕಲಾ ವೇದಿಕೆ, ಅಮೋಘ ಪ್ರಕಾಶನ :** ಡಾ. ಮಣಿಶ್ರೀಯವರ ಅತಿಥಿ ದೇವೋಭವ ಕಾದಂಬರಿ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಕಾಲೇಜು ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಡಾ. ಎಸ್.ಬಿ. ಅಪ್ಪಾಜಿಗೌಡ, ಪುಸ್ತಕ ಲೋಕಾರ್ಪಣೆ : ಸಾಹಿತಿ ಎಸ್. ಶಿಶಿರಂಜನ್, ಅಧ್ಯಕ್ಷತೆ : ಸಾಹಿತಿ ಡಾ. ಸಿದ್ದರಾಮ ಹೊನ್ಕಲ್, ಪುಸ್ತಕ ಕುರಿತು: ಶಿಕ್ಷಕಿ ಎಸ್. ವನಜಾಕ್ಷಿ, ಮುಖ್ಯ ಅತಿಥಿಗಳು : ಹೋಮಿಯೋಪತಿ ವೈದ್ಯ ಡಾ.ಎಂ.ಸಿ.ಮನೋಹರ, ಸರ್ಕಾರಿ ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಮನ್ವಯ ಸಮಿತಿ ರಾಜ್ಯಾಧ್ಯಕ್ಷ ಡಾ. ಸೋಮಶೇಖರ್ ಎಚ್.ಶಿಮೊಗ್ಗಿ, ಸಹಾಯಕ ಪ್ರಾಧ್ಯಾಪಕ ಡಾ. ಎಂ.ರಂಗಸ್ವಾಮಿ, ಉಪಸ್ಥಿತರು: ಕೃತಿಕಾರ ಹಾಗೂ ಪ್ರಕಾಶಕರಾದ ಡಾ. ಮಣಿಶ್ರೀ, ಸ್ಥಳ: ಪ್ರೊ.ಎ.ಸಿ.ದೇವೇಗೌಡ ಹಾಲ್, ರೋಟರಿ ಕೇಂದ್ರ, ಜೆಎಲ್‌ಬಿ ರಸ್ತೆ, ಸಂಜೆ 4.30 ರಿಂದ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ :** 30ನೇ ವರ್ಷದ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ವಿಶ್ವಂಬರ್ ಭಟ್-ಪೃಥ್ವಿ ಭಾಸ್ಕರ್-ಸುಹಾಸ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದ್ವಾನ್ ಸಾಕೇತ್ ರಾಮನ್ ಅವರಿಂದ ಗಾಯನ, ಡಾ.ನಿಶಾಂತ್ ಚಂದ್ರನ್-ಪಿಟೀಲು, ವಿದ್ವಾನ್ ಅರ್ಜುನ್ ಕುಮಾರ್-ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜನ್-ಘಟಂ, ಸ್ಥಳ: ಶ್ರೀಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ದಶಮಹಾವಿದ್ಯಾ ಆವರಣ ಪೂಜೆ, ಸಂಜೆ 5.30ರಿಂದ ಶ್ರೀ ಲಲಿತಾ ಪಂಚಮಿ ಪ್ರಯುಕ್ತ ಶ್ರೀ ದಶಮಹಾವಿದ್ಯಾ ಹೋಮ, ಶ್ರೀ ಲಲಿತಾ ಮಹಾಯಾಗ, ಶ್ರೀ ದಕ್ಷಿಣಕಾಳಿ, ಶ್ರೀ ತಾರಾ, ಶ್ರೀ ಷೋಡಶಿ, ಶ್ರೀ ಭುವನೇಶ್ವರಿ, ಶ್ರೀ ಛಿನ್ನಮಸ್ತಾ, ಶ್ರೀ ಬಗಳಾಮುಖಿ, ಶ್ರೀಧೂಮಾವತಿ, ಶ್ರೀಮಾತಂಗಿ, ಶ್ರೀ ತ್ರಿಪುರಭೈರವಿ, ಶ್ರೀ ಕಮಲಾತ್ಮಿಕ, ಶ್ರೀ ಚಕ್ರ ನವಾವರಣ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಬುದ್ಧ ಭೀಮ್, ಗಂಗೋತ್ರಿ ಗ್ಲಾಡಿಯೇಟರ್ಸ್:** ಸಂವಿಧಾನ್ ಪದಕ್, ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಪ್ರಯುಕ್ತ ಹೊನಲು ಬೆಳಕು ಕ್ರಿಕೆಟ್ ಪಂದ್ಯಾವಳಿ ಮತ್ತು ಸಂವಿಧಾನದ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ ಹಾಗೂ ಆಕರ್ಷಕ ಬಹುಮಾನಗಳು, ಸ್ಥಳ: ಪರ್ಫೆಕ್ಟ್ ಪಾಸ್ ಸ್ಟೇಡಿಯಂ, ಶಕ್ತಿನಗರ, ಸಂಜೆ 4 ರಿಂದ.

■ **ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ:** ಕರಾಮುವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ ಅವರಿಂದ ಅಧುನಿಕ ಕಲಿಕೆಯಲ್ಲಿ ದೂರ ಶಿಕ್ಷಣದ ಪ್ರಸ್ತುತತೆ ಕುರಿತು ವಿಶೇಷ ಉಪನ್ಯಾಸ ಸರಣಿ, ಅಧ್ಯಕ್ಷತೆ: ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಸ್ಥಳ: ಸಂಸ್ಥೆ ಆವರಣ, ಗಂಗೋತ್ರಿ ಬಡಾವಣೆ, ಸಂಜೆ 4ಕ್ಕೆ

■ **ರಂಗಾಯಣ :** ಚಿಣ್ಣರ ಮೇಳ-2024, ಸಂಜೆ 5ಕ್ಕೆ ಮಕ್ಕಳ ರಂಗ ತರಬೇತಿ ಶಿಬಿರ 'ಸಮರಸವೇ ಜೀವನ' ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ.

■ **ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮೂವೆಂಟ್, ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ :** ಶ್ರೀ ಕಾವೇರಿ ಪಿರಮಿಡ್ ಧ್ಯಾನಕೇಂದ್ರದ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಪಿರಮಿಡ್ ಸ್ಪಿರಿಚುವಲ್ ಸೊಸೈಟೀಸ್ ಮೂವೆಂಟ್ ಸಹ ಸಂಸ್ಥಾಪಕರಾದ ಶ್ರೀಮತಿ ಸ್ವರ್ಣಮಾಲ ಪತ್ರೀಜಿ, ಸ್ಥಳ: ಶ್ರೀ ಕಾವೇರಿ ಪಿರಮಿಡ್ ಧ್ಯಾನ ಕೇಂದ್ರ, ಹುಣಸೂರು ರಸ್ತೆ, ಸಂಜೆ 5 ರಿಂದ.

■ **ರತ್ನಾಕರ್ ಅಭಿಮಾನಿ ಬಳಗ:** ಹಾಸ್ಯನಟ ರತ್ನಾಕರ್ ನೆನಪು ಕಾರ್ಯಕ್ರಮ, ಉಪಸ್ಥಿತರು : ಎನ್.ಆರ್. ಮಂಜುನಾಥ್, ಮೇಲುಕೋಟೆ ನಂಬಿಮಠದ ಇಳೈ ಆಳ್ವಾರ್ ಸ್ವಾಮೀಜಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಹಿರಿಯ ರಂಗಕರ್ಮಿ ನಾ.ನಾಗಚಂದ್ರ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಧಾರಾವಾಹಿ ನಟ ಹರಿ, ಕಲಾ ಪೋಷಕ ಪುಟ್ಟಸ್ವಾಮಿ, ಮ.ನ.ಲತಾಮೋಹನ್, ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಮೋಹನ್ ಕುಮಾರ್‌ಗೌಡ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ರಾಮೋತ್ಸವ ಕಾರ್ಯಕ್ರಮ, ವಿದುಷಿ ಗಾಯತ್ರಿ ಸತ್ಯನಾರಾಯಣ ಮತ್ತು ಶಿಷ್ಯ ವೃಂದದವರಿಂದ ದೇವರ ನಾಮಗಳು, ಗಮಕ : ರಾಮಾಯಣ ದರ್ಶನಂ ಸುಂದರಕಾಂಡ, ವಾಚನ : ವಿದುಷಿ ಮಹಿಮಾ ಕಶ್ಯಪ್, ವ್ಯಾಖ್ಯಾನ: ಡಾ. ಜ್ಯೋತಿಶಂಕರ್, ಸ್ಥಳ: ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟೆಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವ ಅಂಗವಾಗಿ ಸಂಗೀತ ಕಛೇರಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಮೈಸೂರು ಎನ್. ಮಂಜುನಾಥ್ ಮತ್ತು ವಿದ್ವಾನ್ ಎಸ್. ರಜತ್ ಮತ್ತು ತಂಡದವರಿಂದ ದ್ವಂದ್ವ ಹಾಡುಗಾರಿಕೆ, ಸ್ಥಳ: ಭಾರತೀ ಸ್ತ್ರೀ ಸಮಾಜದ ಆವರಣ, ಯಾದವಗಿರಿ, ಸಂಜೆ 6ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ :** ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ, ಜನಪದ ಸಂಭ್ರಮ-2024, ಉದ್ಘಾಟನೆ : ಜನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ರಂಗವಲ್ಲಿ ಟ್ರಸ್ಟ್ ಸಂಚಾಲಕ ರವಿ ಹುಣಸೂರು, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಸಂಜೆ 6ಕ್ಕೆ.

■ **ಕಲಾಸುರುಚಿ, ಕುತೂಹಲಿ-ಕನ್ನಡ ಮತ್ತು ದಿ ಅಕಾಡೆಮಿ ಟ್ರಸ್ಟ್, ಸುರುಚಿ ರಂಗಮನೆ :** ಸೈನ್ಸ್ ಸಂಜೆ ಕಾರ್ಯಕ್ರಮ, ಪ್ರೊ ಎನ್ ಬಿ ರಾಮಚಂದ್ರ ಅವರಿಂದ ಡಿಸ್ಲೆಕ್ಸಿಯಾ ಕುರಿತು ಭಾಷಣ, ಸ್ಥಳ : ಕಲಾಸುರುಚಿ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 6.30 ರಿಂದ.

LEARN ACCOUNTS IN TALLY PRIME, FILLING OF GST, INCOME TAX & TDS RETURNS AT
Authorised Tally Training & Assessment Centre
S.M. ACADEMY
No.272/1, First Floor, Kalabhairaveshwara Complex,
Near Sri Chandra Mouleshwara Swamy Temple, K.G. Koppal,
Mysore -570009
Mobile No: 9886723616, 9845480734
Email Id: smacademymysore@gmail.com

SHOE WORLD™
ESTD. 1998
Best Brands at Your Feet...
RAMASWAMY CIRCLE, MYSURU. PH: 2424252
COUNTDOWN
2024 LS Polls on APRIL 26
13 DAYS TO GO

ಪುಣ್ಯಸ್ಮರಣೆ



ಮೂಡಲಗಿರಿಗೌಡ, ಅಣಜಿಹಳ್ಳಿ
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಶ್ರೀಮತಿ ಗಂಗಮ್ಮ, ಕುಟುಂಬವರ್ಗ

ಯಶಸ್ವಿ ಪ್ರದರ್ಶನ 3ನೇ ವಾರ
ಗಾಯತ್ರಿ ಟಾಕೀಸ್
UFO Digital A/C
ಯೂಥ್‌ಫುಲ್ ಎಂಟರ್‌ಟೈನ್‌ಮೆಂಟ್ ಫಾರ್ ಫ್ಯಾಮಿಲಿ
ಯುವ (ಕನ್ನಡ)
ದಿನ 4 ಪ್ರದರ್ಶನ
10.30 1.30 4.30 7.30
ಆನ್‌ಲೈನ್ ಟಿಕೆಟ್ಸ್ ಬುಕ್‌ಮೈಷೋ



SITES FOR SALE
20x30 - 19 Lakhs
20x40 - 24 Lakhs
Adjacent to M.S. Ramaiah Layout, Vijayanagar 4th Stage.
9900466811, 9980270076

DREAM WORLD TRAVELS Mysore
Singapore -Malaysia
Only 8 seats are available
Last date for Booking 16th April 2024
DEPARTURE DATE May 13th 2024
6 Nights 7 Days
Per Person
1,11,000/-
For early booking 5% Discount
For More Details Contact :
994 5242 427

ಸಹಕಾರ ಸಂಘಗಳ ಉಪ ನಿಬಂಧಕರು(ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ, ಸಂಚಾರಿ ಪೀಠ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015

ವಾದಿ:
ವ್ಯವಸ್ಥಾಪಕ ನಿರ್ದೇಶಕರು, ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.ಕಾರವಾರ ಕೇಶವ ಶೇಟ ರಸ್ತೆ, 1ನೇ ಕ್ರಾಸ್, ಸೋನಾರವಾಡ, ಕಾರವಾರ-581 304 (ಉ.ಕ.)

-:ವಿರುದ್ಧ:-

ಪ್ರತಿವಾದಿಗಳು :

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2024/2021-22.
1. ಶ್ರೀಮತಿ. ಫಾತಿಮಾ ಮೊನಿಸ್
ಸಾ|| #17,1ನೇ ಕ್ರಾಸ್, ಗಣೇಶ್ ನಗರ್, ಪೋ|| ಎನ್.ಆರ್.ಮೊಹಲ್ಲಾ, ತಾ|| ಮೈಸೂರು-570007
3. ಶ್ರೀಮತಿ. ಮರಿಯಾ ಚಂದ್ರಿಕ ಮಗಿಮನಾಥನ್
ಸಾ|| #95, ಬಿ ಬ್ಲಾಕ್ ಗಣೇಶ್‌ನಗರ್, ಪೋ|| ಎನ್.ಆರ್.ಮೊಹಲ್ಲಾ, ತಾ|| ಮೈಸೂರು-570007
4. ಶ್ರೀ. ಕ್ಲಾಡ್ ಡೊಮಾನಿಕ್ ಮೊನಿಸ್
ಸಾ|| #7,1ನೇ ಕ್ರಾಸ್, ಗಣೇಶ್ ನಗರ್, ಪೋ|| ಎನ್.ಆರ್.ಮೊಹಲ್ಲಾ, ತಾ|| ಮೈಸೂರು-570007

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2023/2021-22.
1. ಶ್ರೀ. ಆಫ್ರಾನ್ ಖಾನ್.ಕೆ ಬಿನ್ ಖಲೀಲ್ ಉಲ್ಲಾ ಖಾನ್ ಕೆ.ಆರ್
ಸಾ|| 497, 3ನೇ ಕ್ರಾಸ್ ಜೆ.ಎಸ್.ಎಸ್ ನಗರ, ಪೋ|| ಬನ್ನಿಮಂಟಪ, ತಾ|| ಮೈಸೂರು-570015
2.ಶ್ರೀ. ರಾಮ್ ಪ್ರಸಾದ್ ಬಿನ್ ರಾಮ್ ಸೇವಕ
ಸಾ|| #627, ಕೆಸರೆ 2ನೇ ಹಂತ, ಆರ್.ಎಸ್.ನಾಯ್ಡುನಗರ, ಪೋ|| ಎನ್.ಆರ್.ಮೊಹಲ್ಲಾ ತಾ|| ಮೈಸೂರು-570007
3. ಶ್ರೀ. ಅಕಿಬ ಬಿನ್ ರಹ್ಮತ್
ಸಾ|| #1267, 1ನೇ ಮೇನ್ 14ನೇ ಕ್ರಾಸ್, ಮೂಹಮದಿಯ ಮಸೀದಿ, ಪೋ|| ಶಾಂತಿ ನಗರ ತಾ|| ಮೈಸೂರು-570017

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2022/2021-22
1. ಎಚ್. ಚಂದ್ರಕುಮಾರ್
ಸಾ|| #5, ಸಂತ ಜೋಸೆಫ್ ಕಾನ್ವೆಂಟ್ ರೋಡ್, ಬನ್ನಿಮಂಟಪ, ತಾ|| ಮೈಸೂರು-570015
2. ಶ್ರೀ. ಟಮ್ಮಿನ್‌ಸನ್ ಎಡ್ವರ್ಡ್ ಬಿನ್ ಚಾರ್ಲಿಸ್ ಎಡ್ವರ್ಡ್.
ಸಾ|| #4504, 5ನೇ ಕ್ರಾಸ್, ಟ್ಯಾಂಕ್ ರೋಡ್, ಪೋ|| ಎನ್.ಆರ್.ಮೊಹಲ್ಲಾ, ತಾ|| ಮೈಸೂರು-570007
3. ಶ್ರೀ. ಶರತ್ ಕುಮಾರ್ ಎಂ.ಪಿ ಬಿನ್ ಪರುಮಾಳ.
ಸಾ|| #1401, 3ನೇ ಹಂತ, ಕೆಸರೆ, ಪೋ|| ಎನ್.ಆರ್.ಮೊಹಲ್ಲಾ, ತಾ|| ಮೈಸೂರು-570007

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2021/2021-22.
1. ಶ್ರೀ. ಎಸ್. ಮಾಧವ ರಾವ್ ಬಿನ್ ಶ್ರೀನಿವಾಸ ರಾವ್.
ಸಾ|| #274, 2/5ನೇ ಕ್ರಾಸ್, ಪೋ|| ರಾಮಕೃಷ್ಣ ನಗರ, ತಾ|| ಮೈಸೂರು-570023
2. ಶ್ರೀಮತಿ. ದೀಪ ಕೋಂ ಮಾಧವ ರಾವ್
ಸಾ|| #274, 2/5ನೇ ಕ್ರಾಸ್ ಪೋ|| ರಾಮಕೃಷ್ಣ ನಗರ ತಾ|| ಮೈಸೂರು-570023

ವ್ಯಾಜ್ಯ ಸಂಖ್ಯೆ :ಜೆಆರ್‌ಡಿ/ಕ.ರಾ.ಸೌ.ಸಂ.ಸ.ನಿ./2958/2022-23.
1. ಶ್ರೀ.ಪಿ.ಕಿಶನ್
ಸಾ|| #65, ಸೈಂಟ್ ಜೋಸೇಫ್ ಕಾನ್ವೆಂಟ್ ರಸ್ತೆ, ಪೋ|| ಬನ್ನಿ ಮಂಟಪ, ತಾ|| ಮೈಸೂರು-570007

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ : ಡಿಆರ್‌ಡಿ/ಕ.ರಾ.ಸೌ.ಸಂ.ಸ.ನಿ./ 2024/2021-22. 2023/2021-22. 2022/2021-22. 2021/2021-22. 2958/2022- 23.ರಂತೆ ಸಹಕಾರಿಗಳ ಜಂಟಿ ನಿಬಂಧಕರು, ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ (ನಿ.441) ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಳಗಾವಿ ಪ್ರಾಂತೀಯ ಕಛೇರಿ, 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ್ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ-590015 ನ್ಯಾಯಾಲಯದಲ್ಲಿ ಪರಿಹಾರ ಕರಾರು ಅಡಿಯಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿ ರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿ: 15.04.2024 ರಂದು ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು. ಸದರಿ ಪ್ರಕಟಣೆಯನ್ನು ದಿ:02/04/2024 ರಂದು ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಸಹಕಾರಿಗಳ ಜಂಟಿ ನಿಬಂಧಕರು(ನಿ.441)(ಪ್ರ) ದಾವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ.
ಬೆಳಗಾವಿ ಸಂಚಾರಿ ಪೀಠ, ಬೆಳಗಾವಿ.

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯಜಮಾನ್ ಎಂ.ರಾಮೇಗೌಡರು
(ದೊಡ್ಡೈದಪ್ಪನವರ ಮಗ)
ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು
ನಿಧನ: 13.04.2014

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನಿಮ್ಮ ಮಾರ್ಗದರ್ಶನ ಕೃಪಾಶೀರ್ವಾದದಿಂದ ಮುನ್ನಡೆಯುತ್ತಿದ್ದೇವೆ. ಲೌಕಿಕವಾಗಿ ನೀವಿಲ್ಲದಿದ್ದರೂ ನಮ್ಮ ಮನದಲ್ಲಿ ಸದಾ ಚಿರಸ್ಥಾಯಿಯಾಗಿ ನೆಲೆಸಿದ್ದೀರಿ

ನಿಮ್ಮ ನೆನಪಿನಲ್ಲಿರುವ:
ಮಕ್ಕಳಾದ ಆರ್.ನಾಗರಾಜ್ (CDPO), ಆರ್. ಶಿವಕುಮಾರ್, ಶ್ರೀಮತಿ ದಾಕ್ಷಾಯಿಣಿ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ದೊಡ್ಡೈದಪ್ಪನವರ ಕುಟುಂಬವರ್ಗ, ಕೆ.ಜಿ.ಕೊಪ್ಪಲು, ಮೈಸೂರು.

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ),

#ಸಿಎ-12, 2ನೇ ಹಂತ, ವಿಜಯನಗರ,-570017, ಫೋನ್:0821-2514823

ಪ್ರಕಟಣೆ

ಮೇಲ್ಕಂಡ ವಿಳಾಸದಲ್ಲಿ ಕ್ಲಬ್'ನ ನಿಯಮಾವಳಿಗನುಗುಣವಾಗಿ ಕ್ಲಬ್‌ನ ನೆಲಮಹಡಿಯಿಂದ ಮೂರನೆಯ ಮಹಡಿಯವರೆಗೆ ಸಂಪರ್ಕ ಕಲ್ಪಿಸಲು, ಎಲಿವೇಟರ್ (Elevator) ಇದ್ದು ಅದನ್ನು ಬದಲಿಸಿ, ಉನ್ನತ ದರ್ಜೆಗೇರಿಸಲು ಉದ್ದೇಶಿಸಲಾಗಿದೆ. ಈ ಕ್ಷೇತ್ರದಲ್ಲಿ ಅನುಭವವಿರುವ, ಸದರಿ ಯಂತ್ರದ ಸರಬರಾಜು, ಸ್ಥಾಪನೆ, ಕಾರ್ಯಾರಂಭ, ನಿರ್ವಹಣೆ ಹೊರಲು ಸಿದ್ಧರಿರುವ ನುರಿತ ಕಂಪನಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹಾಲಿ ಇರುವ ಪ್ರಯಾಣಿಕರ ಎಲಿವೇಟರ್ (Passanger Elevator) 6 ಪ್ರಯಾಣಿಕರು ಚಲಿಸಬಹುದಾದ, 408ಕೆಜಿ ಸಾಮರ್ಥ್ಯವನ್ನು ಹೊತ್ತೊಯ್ಯಬಹುದಾದ ಯಂತ್ರವಾಗಿದೆ. ಆಸಕ್ತ ಸರಬರಾಜುದಾರರು, ತಮ್ಮ ಮನವಿ ಪತ್ರದೊಂದಿಗೆ, ದರಪಟ್ಟಿಯನ್ನು ಲಗತ್ತಿಸಿ, ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 23/04/2024ರ ಮಂಗಳವಾರದೊಳಗೆ ಖುದ್ದಾಗಿ ಕಚೇರಿಯಲ್ಲಿ ಅಥವಾ ಅಂಚೆ ಮೂಲಕ ಮೇಲ್ಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕ್ಲಬ್‌ನ ಕಛೇರಿಯನ್ನು ಸಂಪರ್ಕಿಸಿ.

ವಿಜಯನಗರ ಸ್ಪೋರ್ಟ್ಸ್ ಕ್ಲಬ್ ಪರವಾಗಿ

ಸಹಿ/-ಹೆಚ್.ಎಂ. ರಾಮಚಂದ್ರ, ಅಧ್ಯಕ್ಷರು
ಸಹಿ/- ಎನ್.ಎಲ್.ಶೇಖರ್ ಕಾರ್ಯದರ್ಶಿ

ಸೂಚನೆ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಯಜಮಾನ್ ಎಂ. ರಾಮೇಗೌಡರು
(ದೊಡ್ಡೈದಪ್ಪನವರ ಮಗ)
ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನದ ವ್ಯವಸ್ಥಾಪಕರು. ನಿಧನ: 13-4-2014

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ನೀವು ನಮ್ಮ ಮನದಲ್ಲಿ ಹಾಗೂ ಜೀವನದಲ್ಲಿ ಎಂದೆಂದಿಗೂ ಅಮರ.

ನಿಮ್ಮ ನೆನಪಿನಲ್ಲಿರುವ:
ತಾಯಿ: ಶ್ರೀಮತಿ ಲಕ್ಷ್ಮಮ್ಮ ಪತ್ನಿ: ಶ್ರೀಮತಿ ಸುಶೀಲಮ್ಮ, ಶ್ರೀಮತಿ ಸೌಮ್ಯ, ಶ್ರೀಮತಿ ಎನ್.ಪಿ. ಭವ್ಯರಾಣಿ ಹಾಗೂ ಬುಂಡೇ ಮಾದೇಗೌಡರ ಕುಟುಂಬ ವರ್ಗ, ಕೆ.ಜಿ. ಕೊಪ್ಪಲು, ಮೈಸೂರು.

SITES FOR SALE
MUDA Approved
KBL GREEN WOOD & LBS GREENS
30x40 & 30x50
Near JSS 2nd Stage Layout
9900466811, 9980270076

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 13, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋವ್: 8951668960
ಪ್ರೇಮ: 9880549879

ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು: ಪ್ರಸಾದ್, ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ 9731469871

ಹುಣಸೂರು: ಕೆ. ಕೃಷ್ಣ (ಕೆ.ಕೆ.) EWS 204, KHB ಕಾಲೋನಿ, ಹುಣಸೂರು. 9448720626

ಮಂಡ್ಯ: ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ 8762960325

ಶ್ರೀರಂಗಪಟ್ಟಣ: ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234

ಯಳಂದೂರು: ವಿ.ನಾಗರಾಜು, ಮೈತ್ರಿ ಮೆಡಿಕಲ್ಸ್, ಬಳೆಪೇಟೆ, ಯಳಂದೂರು 9844349191

ಚಾಮರಾಜನಗರ: ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657

ಟಿ. ನರಸೀಪುರ: ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590

ಗುಂಡ್ಲುಪೇಟೆ: ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್,ಗುಂಡ್ಲುಪೇಟೆ. 9845995426

ಕೆ.ಆರ್. ನಗರ: ಕೆ.ಟಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ವಿ.ವಿ.ರಸ್ತೆ, ಕೆ.ಆರ್. ನಗರ. 9448021368

ಮಳವಳ್ಳಿ: ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್-571430 9632407806

ಕೊಳ್ಳೇಗಾಲ: ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರಳಕೇರಿ ಬೀದಿ, ಕೊಳ್ಳೇಗಾಲ 9916621007

ಹಾಸನ: ಆರ್.ಎನ್.ಸೋಮೇಶ್‌ಗೌಡ, ಹೋಲಿ ಚಿಲ್ಡ್ರನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175

ಕುಶಾಲನಗರ: ರಘು, ಮೈಸೂರು ಮಿತ್ರ ರಿಪೋರ್ಟರ್ ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401

ಜಯಪುರ: ಬಿಳಿಗಿರಿ, ಜಯಪುರ 9945479288

ಪಿರಿಯಾಪಟ್ಟಣ: ವೀರೇಶ್, ಪಿರಿಯಾಪಟ್ಟಣ 8660057128

ವಿರಾಜಪೇಟೆ: ಮಂಜುನಾಥ, ವಿರಾಜಪೇಟೆ 9900949353

ಕೆ.ಆರ್.ಪೇಟೆ: ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438

ಹೆಚ್.ಡಿ.ಕೋಟೆ: ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452

ಕೆ.ಎಂ.ದೊಡ್ಡಿ: ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ 9242120338

ನಂಜನಗೂಡು: ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್-571301 9901602226

ಹುಣಸೂರು: ಹೆಚ್.ಆರ್. ಕೃಷ್ಣಕುಮಾರ್ (ಬಿನ್ ರಾಮೇಗೌಡ), ನಂದಿನಿ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093

ಕೊಳ್ಳೇಗಾಲ: ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858



ನಕ್ಕರೆ ಅದೇ ಸ್ವರ್ಗ

ಗಂಡ–ಹೆಂಡತಿ ದಾರೀಲಿ ಹೋಗ್ತಾ ಇದ್ದಾಗ ಎದುರಿಗೆ ಕತ್ತೆಯೊಂದು ಬಂತು.

ಹೆಂಡತಿ : ರೀ ನಿಮ್ಮ ನೆಂಟ್ರು ಕಣ್ರೀ, ಮಾತಾಡಿಸಿ...

ಗಂಡ : ನಮಸ್ಕಾರ ಮಾವ. ಏನ್ ಮಗಳ್ನ ನೋಡೋಕ್ ಬಂದ್ರಾ...

ಮೈಸೂರು ಮಿತ್ರ

ಶನಿವಾರ, 13 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೆಲಸ ಸಾಧಿಸಲಿಚ್ಛಿಸುವವರು ಮೊದಲು ಬಿಗುಮಾನ ಬಿಡಬೇಕು

–ರಾಮಾಯಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೆಣ್ಣೆ ಮನ್ಯಾಗೆ ಇಟ್ಕೊಂಡು
ತುಪ್ಪಕ್ಕೆ ಮನೆ ಮನೆ ಅಲೆದಂತೆ

ನಿಮ್ಮ ಪತ್ರಗಳು

ಕೇಜ್ರಿವಾಲ ರಾಜೀನಾಮೆ ಕೊಡದಿರುವುದು ಅಕ್ಷಮ್ಯ

ಮಾನ್ಯರೆ,

ಸತತ ಇ.ಡಿ., ನೋಟೀಸ್‌ಗಳಿಗೆ ಬೆಲೆ ಕೊಡದೆ ಕಾಲ ದೂಡುತ್ತಾ ಬಂದ ದೆಹಲಿಯ ಮುಖ್ಯಮಂತ್ರಿ ಕೇಜ್ರಿವಾಲ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾಗೊಳಿಸಿದ ಮರುಗಳಿಗೆಯಲ್ಲೇ ಇಡಿ ಅವರನ್ನು ಬಂಧಿಸಿತು. ಬಂಧನವಾಗಿ ಜೈಲಿನಲ್ಲಿದ್ದರೂ ಕೇಜ್ರಿವಾಲ ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡದೆ ಸತಾಯಿಸುತ್ತಿರುವುದು ಸಂವಿಧಾನಾತ್ಮಕ ಹುದ್ದೆಗೆ ಬಗೆದ ಅಪಚಾರವಾಗಿದೆ. ಇನ್ನು ಯಾರೇ ಅಧಿಕಾರಸ್ಥರನ್ನು ಬಂಧಿಸಿದರೂ ರಾಜೀನಾಮೆ ನೀಡದೆ ಜೈಲಿನಿಂದಲೇ ಅಧಿಕಾರ ಚಲಾಯಿಸುವ ಹೊಸ ಪರಂಪರೆಗೆ ಇವರು ನಾಂದಿ ಹಾಡಿದಂತಿದೆ.!

ಕೇಜ್ರಿವಾಲ ಅವರನ್ನು ಬಂಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಹಗರಣದಲ್ಲಿ ಕೇಜ್ರಿವಾಲ್ ಪಾತ್ರವಿರುವ ಬಗ್ಗೆ ಸಾಕ್ಷ್ಯವಿರುವುದಾಗಿಯೂ ಕೋರ್ಟ್ ಹೇಳಿದೆ. ಹೀಗಿದ್ದರೂ ಕೇಜ್ರಿವಾಲ ರಾಜೀನಾಮೆ ಕೊಡದಿರುವುದು ಅಕ್ಷಮ್ಯ. ಅಲ್ಲದೆ ಅವರ ಆಪಲ್ ಐ ಫೋನ್‌ನ ಲಾಕ್ ಓಪನ್ ಮಾಡಿಕೊಡಲು ಆಪಲ್ ಕಂಪನಿ ನಿರಾಕರಿಸಿರುವುದು ಕೂಡ ಖಂಡನೀಯ.

ಕೇಜ್ರಿವಾಲ ನಿಜವಾಗಲೂ ತಾವು ನಿರ್ದೋಷಿಯೇ ಆಗಿದ್ದರೆ, ಅವರೇ ತಮ್ಮ ಫೋನ್ ಅನ್ನು ಅನ್‌ಲಾಕ್ ಮಾಡಿ ಇಡಿಗೆ ಒಪ್ಪಿಸಬೇಕಾಗಿತ್ತು. ಇದು ಅವರ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಅನುತ್ತೀರ್ಣ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ

ಮಾನ್ಯರೆ,

2024ರ ಪಿಯುಸಿ ಫಲಿತಾಂಶ ಪ್ರಕಟಗೊಂಡಿದೆ. ಪೋಷಕರು ಅನೇಕ ಕನಸೊಂದಿಗೆ ತಮ್ಮ ಮಕ್ಕಳು ಉನ್ನತ ಹಾಗೂ ಸರ್ಕಾರಿ ಕೆಲಸಕ್ಕೆ ಸೇರಿ ಜೀವನ ಸಾಗಿಸಲು ಅಂಗನವಾಡಿಯಿಂದ ಹಿಡಿದು ಎಲ್‌ಕೆಜಿ, ಯುಕೆಜಿ ಸೇರಿದಂತೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿವರೆಗೂ ಉತ್ತಮ ಶಿಕ್ಷಣ ಕೊಡಿಸುತ್ತಾರೆ. ಪಿಯುಸಿ ಶಿಕ್ಷಣ ಪ್ರಮುಖ ಘಟ್ಟ ಆಗಿರುವುದರಿಂದ ಕೆಲವು ವಿದ್ಯಾರ್ಥಿಗಳು ಚೆನ್ನಾಗಿ ಓದಿ ಉತ್ತೀರ್ಣರಾದರೆ, ಮತ್ತೆ ಕೆಲವರು ಅನುತ್ತೀರ್ಣರಾಗುತ್ತಾರೆ. ಇಂತಹ ಸಮಯದಲ್ಲಿ ಪೋಷಕರಾಗಲಿ ಅಥವಾ ಶಾಲಾ ಕಾಲೇಜಿನ ಶಿಕ್ಷಕರಾಗಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬೈಯುವುದಾಗಲೀ ಅಥವಾ ಮಾನಸಿಕವಾಗಿ ಸಪ್ಲಿಮೆಂಟರಿ ಪರೀಕ್ಷೆಗೆ ಒತ್ತಡ ಹೇರಬಾರದು. ಇದರಿಂದ ಕೆಲವು ವಿದ್ಯಾರ್ಥಿಗಳು ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಅಥವಾ ಇನ್ನಿತರ ಮಾನಸಿಕ ರೋಗಗಳಿಗೂ ತುತ್ತಾಗುವ ಸಾಧ್ಯತೆಗಳಿರುತ್ತವೆ. ಆದ್ದರಿಂದ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜಿನ ಶಿಕ್ಷಕರು ಮತ್ತು ಪೋಷಕರು ಪ್ರೋತ್ಸಾಹಿಸಿ ಮುಂದೆ ಬರುವ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಮಾರ್ಗದರ್ಶನವನ್ನು ನೀಡಿ ಉತ್ತೀರ್ಣರಾಗಿ ಎಂದು ಧೈರ್ಯ ಹೇಳುವ ಮೂಲಕ ಮಾದರಿಯಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು

ಅಂಚೆ ಅಧಿಕಾರಿಗಳಲ್ಲಿ ಮನವಿ

ಮಾನ್ಯರೆ,

ಮೈಸೂರಿನ ಬಲ್ಲಾಳ್ ವೃತ್ತ (ಅಶೋಕ ವೃತ್ತದ ಬಳಿ) ಹಾಗೂ ವಿ.ವಿ. ಪುರಂ ಆರಕ್ಷಕ ಠಾಣೆ ಎದುರು ಹಲವಾರು ವರ್ಷಗಳಿಂದ ಅಂಚೆ ಪೆಟ್ಟಿಗೆಗಳನ್ನು ಸಾರ್ವಜನಿಕರ ಸೇವೆಗೆಂದು ಅಳವಡಿಸಲಾಗಿತ್ತು. ಇದರಿಂದ ಹಿರಿಯ ನಾಗರಿಕರಿಗೆ, ವೃದ್ಧರಿಗೆ ಅನುಕೂಲಕರವಾಗಿತ್ತು. ಆದರೆ ರಸ್ತೆ ಅಭಿವೃದ್ಧಿಯ ನೆಪವೊಡ್ಡಿ ಈ ಅಂಚೆ ಪೆಟ್ಟಿಗೆಗಳನ್ನು ತೆರವುಗೊಳಿಸಲಾಗಿದೆ. ಅಂಚೆ ಅಧಿಕಾರಿಗಳು ಆದಷ್ಟು ಬೇಗ ಕ್ರಮ ವಹಿಸಿ ಈ ಪ್ರಮುಖ ಸ್ಥಳಗಳಲ್ಲಿ ಅಂಚೆ ಪೆಟ್ಟಿಗೆ ಅಳವಡಿಸಲು ಮನವಿ.

– ನೊಂದ ನಾಗರೀಕರು, ಮೈಸೂರು.

ಮಕ್ಕಳ ಶಿಕ್ಷಣದ ಹಕ್ಕನ್ನು ರಕ್ಷಿಸಿ

ಮಾನ್ಯರೇ,

ಕೇಂದ್ರ ಸರ್ಕಾರ ಒಂದನೇ ತರಗತಿಗೆ ದಾಖಲಾಗುವ ಮಗುವಿನ ವಯಸ್ಸನ್ನು ಇದ್ದಕ್ಕಿದ್ದ ಹಾಗೆ 6 ವರ್ಷಕ್ಕೆ ನಿಗದಿಪಡಿಸಿರುವುದು ಅವೈಜ್ಞಾನಿಕ ಮತ್ತು ಮಕ್ಕಳ ಶಿಕ್ಷಣದ ಹಕ್ಕನ್ನು ಮೊಟಕುಗೊಳಿಸಿದಂತಾಗಿದೆ. ಈ ಕುರಿತು ಕೇಂದ್ರ ಸರ್ಕಾರ ಸಾರ್ವಜನಿಕವಾಗಿ ಯಾವುದೇ ಚರ್ಚೆ ಮತ್ತು ಸಂವಾದ ನಡೆಸದೆ ಏಕಾಏಕಿ ಒಂದನೇ ತರಗತಿಗೆ ದಾಖಲಾಗುವ ಮಗುವಿನ ವಯಸ್ಸನ್ನು 6 ವರ್ಷಕ್ಕೆ ನಿಗದಿಪಡಿಸಿ ಸರ್ವಾಧಿಕಾರದ ಆದೇಶವನ್ನು ಹೊರಡಿಸಿದೆ.

ಇದು ಈಗಾಗಲೇ ಎಲ್.ಕೆ.ಜಿ ಮತ್ತು ಯು.ಕೆ.ಜಿ ಓದುತ್ತಿರುವ ಮಕ್ಕಳ ಎಳೆಯ ಮನಸ್ಸಿನ ಮೇಲೆ ಆಘಾತದ ಪರಿಣಾಮ ಬೀರಲಿದೆ. ಮಗು ಮತ್ತೆ ಅದೇ ತರಗತಿಯಲ್ಲಿ ಓದುವ ದುಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮಕ್ಕಳ ಸೂಕ್ಷ್ಮ ಮನಸ್ಸಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಕೇಂದ್ರ ಸರ್ಕಾರ 6ನೇ ವರ್ಷಕ್ಕೆ ಒಂದನೇ ತರಗತಿಗೆ ದಾಖಲಿಸುವ ವಿಚಾರವಾಗಿ ಏಕಾಏಕಿ ಯಾವುದೇ ಪೂರ್ವ ತಯಾರಿಯಿಲ್ಲದೆ ಮತ್ತು ಸಾರ್ವಜನಿಕರ ಗಮನಕ್ಕೆ ತರದೇ ಆದೇಶ ಹೊರಡಿಸಿರುವುದು ಮಕ್ಕಳ ಮೇಲಿನ ಕಲಿಕಾ ದೌರ್ಜನ್ಯವೇ ಸರಿ.

ಇತ್ತೀಚೆಗೆ ಕೇಂದ್ರ ಸರ್ಕಾರ ಸಾರ್ವಜನಿಕ ನೀತಿ–ನಿರೂಪಣೆಯನ್ನು ಮಾಡುವಾಗ ಪ್ರಜೆಗಳನ್ನು ಅಂಧಕಾರದಲ್ಲಿಟ್ಟು ತಾನು ಮಾಡಿದ್ದೇ ಸರಿ ಎನ್ನುವ ಸರ್ವಾಧಿಕಾರದ ಧೋರಣೆ ಹೊಂದಿರುವುದು ಭಾರತದಂತಹ ವಿಶಾಲವಾದ ಭೂ ಭಾಗದಲ್ಲಿ ಬರುವ ರಾಜ್ಯಗಳು–ಭಾಷೆಗಳು ಮತ್ತು ವೈವಿಧ್ಯತೆಯಿಂದ ಕೂಡಿರುವ ದೇಶದ ಪ್ರಜಾಪ್ರಭುತ್ವಕ್ಕೆ ಮಾಡಿದ ಅವಮಾನೇ ಸರಿ. "ಇಂದಿನ ಮಕ್ಕಳೆ ಮುಂದಿನ ಪ್ರಜೆಗಳು" ಎಂಬ ನಾಣ್ಣುಡಿಯಂತೆ ಭವ್ಯ ಭಾರತದ ಮಕ್ಕಳ ಉಜ್ವಲ ಭವಿಷ್ಯವನ್ನು ಈ ಅವೈಜ್ಞಾನಿಕ ಆದೇಶ ತಿಂದುಹಾಕುತ್ತದೆ.

ಈಗಾಗಲೇ ಕರ್ನಾಟಕ ರಾಜ್ಯ ಸರ್ಕಾರ ಎರಡು ವರ್ಷಗಳ ವಿನಾಯಿತಿ (2025–26ನೇ ಸಾಲಿನಿಂದ ಆರಂಭಿಸಲು) ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರೂ ಕೇಂದ್ರದಿಂದ ಇದುವರೆವಿಗೂ ಯಾವುದೇ ಸಕರಾತ್ಮಕ ಪ್ರತಿಕ್ರಿಯೆ ಬಂದಿರುವುದಿಲ್ಲ. ತನ್ನ ಈ ಹಿಂದಿನ ಅವೈಜ್ಞಾನಿಕ ಆದೇಶಕ್ಕೆ ಬದ್ಧವಾಗಿರುವುದು ದುರಂತವೇ ಸರಿ. ಈಗಲೂ ಸಮಯ ಮೀರಿಲ್ಲ. ಕೇಂದ್ರ ಸರ್ಕಾರ ಎಚ್ಚೆತ್ತು ತನ್ನ ಪ್ರಮಾದವನ್ನು ಸರಿಪಡಿಸಲು ಮನವಿ ಮಾಡುತ್ತೇನೆ. ಪೋಷಕರೂ ಕೂಡ ಟ್ವಿಟ್ಟರ್ ಇಲ್ಲವೇ ಫೇಸ್‌ಬುಕ್‌ನಲ್ಲಿ ಟ್ಯಾಗ್ ಮೂಲಕ ಕೇಂದ್ರ ಸರ್ಕಾರದ ಗಮನ ಸೆಳೆಯಬೇಕೆಂದು ಮನವಿ.

–ಕೆ.ವಿ.ಮಲ್ಲೇಶ್, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ಲೋಕಸಭಾ ಚುನಾವಣೆ–2024

ಅಭಿವೃದ್ಧಿ ಮಂತ್ರದ ಬದಲು ಆರೋಪಗಳ ತಂತ್ರ!!

ದೇಶಾದ್ಯಂತ ಚುನಾವಣಾ ಜ್ವರ ಏರಲಾರಂಭಿಸಿದೆ. ರಾಜಕೀಯ ಪಕ್ಷಗಳ ಅಭ್ಯರ್ಥಿಯಾದವರಲ್ಲಿ ಸಂತಸ ಹಾಗೂ ಗೆಲುವಿನ ಬಗ್ಗೆ ಆತಂಕವಿದ್ದರೆ, ಟಿಕೆಟ್ ದೊರೆಯದವರಲ್ಲಿ ಹತಾಶೆ, ಅಸಹಾಯಕತೆ, ಸಿಟ್ಟು, ನೋವು ಕಾಣುತ್ತಿದೆ. ಚುನಾವಣಾ ಆಯೋಗವು ವ್ಯವಸ್ಥಿತವಾಗಿ ಚುನಾವಣೆಗಳನ್ನು ನಡೆಸಲು ಸಿದ್ಧತೆ ಆರಂಭಿಸಿದೆ. ಮಾಧ್ಯಮಗಳು ವಿವಿಧ ರೀತಿಯ ಸಮೀಕ್ಷೆಗಳು, ಊಹೆಗಳ ಮೂಲಕ ಯಾವ ಪಕ್ಷಕ್ಕೆ ಎಷ್ಟು ಸ್ಥಾನಗಳು ಬರಲಿವೆ, ಯಾವ ಪಕ್ಷ ಅಧಿಕಾರಕ್ಕೆ ಬರಲಿದೆಯೆಂದು ಭವಿಷ್ಯ ಹೇಳುತ್ತಿದ್ದರೆ, ರಾಜಕಾರಣಿಗಳು ತಮ್ಮದೇ ಆದ ಲೆಕ್ಕಾಚಾರಗಳು, ಸಮೀಕರಣಗಳ ಆಧಾರದಲ್ಲಿ ತಮ್ಮ ಗೆಲುವಿನೊಂದಿಗೆ ಪಕ್ಷವು ಅಧಿಕಾರಕ್ಕೆ ಬರಲಿದೆಯೆಂದು ಕಾರ್ಯಕರ್ತರನ್ನು ಹುರಿದುಂಬಿಸುವ ದೃಶ್ಯಗಳು ಮುಂದಿನ ಕೆಲವು ದಿನಗಳ ಕಾಲ ಕಂಡು ಬರಲಿದೆ. ದೇಶದಲ್ಲಿ ಚುನಾವಣಾ ಹಬ್ಬದ ಸಂಭ್ರಮ ಕಾಣಲಾರಂಭಿಸಿದೆ. ಚುನಾವಣೆಗಳು ಪ್ರಜಾಪ್ರಭುತ್ವದ ವ್ಯವಸ್ಥೆಯ ಭಾಗವಾದರೆ ಮತದಾನವು ಆ ವ್ಯವಸ್ಥೆಗೆ ಚೈತನ್ಯ, ಹೊಸತನ ಶಕ್ತಿ ನೀಡುವ ಭಾಗವಾಗಿದೆ. ಅಮೆರಿಕದ ಅಧ್ಯಕ್ಷರಾಗಿದ್ದ ಥಿಯೋಡರ್ ರೂಸ್‌ವೆಲ್ಟ್‌ರ ಮಾತಿನಂತೆ "A vote is like a Rifle. Its usefulness depends upon the characters of the user" (ಮತವು ಒಂದು ಬಂದೂಕಿನಂತಿದೆ. ಇದರ ಉಪಯೋಗವು ಚಲಾಯಿಸುವವರ ಸ್ವಭಾವದ ಮೇಲೆ ನಿರ್ಭರವಾಗಿದೆ).

ಚುನಾವಣೆಗಳು ಭರವಸೆ ಮತ್ತು ವಿಶ್ವಾಸದ ಪ್ರಕ್ರಿಯೆಯಾಗಿದೆ. ಚುನಾವಣೆಗಳು ಮತದಾರರಲ್ಲಿ ವೈಯಕ್ತಿಕ ಆಸೆ ಆಕಾಂಕ್ಷೆಗಳ ಬಗ್ಗೆ ಹಾಗೂ ದೇಶದ ಬಗ್ಗೆ ಕರ್ತವ್ಯದ ಭಾವನೆಗಳನ್ನು ಸೃಷ್ಟಿಸುತ್ತವೆ. ಚುನಾವಣೆಗಳು ಮತದಾರರಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ, ವಿಶ್ವಾಸ, ಭರವಸೆಯನ್ನುಂಟು ಮಾಡುತ್ತವೆ. ಈ ವ್ಯವಸ್ಥೆ ಅತ್ಯುತ್ತಮ ಎಂಬ ಭಾವನೆ ಮೂಡಿಸುತ್ತದೆ.

ಚುನಾವಣೆಗಳು ಕೇವಲ ಮತದಾನದೊಂದಿಗೆ ಮುಗಿಯುವ ಯಾಂತ್ರಿಕ ಪ್ರಕ್ರಿಯೆಯಲ್ಲ. ಮತದಾನವು ತರ್ಕದ ಒರೆಗಲ್ಲಿಗೆ ಹಾಕಿ ನಿರ್ಣಯವನ್ನು ನೀಡುವ ಚಿಂತನೆಯಾಗಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಮ್ಮ ಭೂಮಿಕೆ ಬಗ್ಗೆ ಅರಿವು ಮೂಡಿಸುತ್ತದೆ ಮತ್ತು ಕೊನೆ ಪಕ್ಷ ಚುನಾವಣಾ ಅವಧಿಯಲ್ಲಿ ದೇಶದ ಬಗ್ಗೆ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಗ್ಗೆ ಚಿಂತನೆಗಳನ್ನು ಮಾಡುವ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಈ ಪರಿಸ್ಥಿತಿ ಕೆಲವರಿಗೆ ಸಹಜವಾದರೆ ಇನ್ನೂ ಕೆಲವರಿಗೆ ಪ್ರಹಸನದಂತೆ ಹಾಗೂ ಕೆಲವರಲ್ಲಿ ಯಾಂತ್ರಿಕತೆಯ ಭಾವ ಮೂಡಿಸುತ್ತದೆ. ನಾವು ಯಾರಿಗೂ ಮತ ನೀಡಲಿ, ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ನಮ್ಮ ದುಡಿಮೆ ನಾವೇ ಮಾಡಬೇಕು ಎಂಬ ವಾಸ್ತವಿಕತೆಯ ಅರಿವು ಮತದಾರ ಹೊಂದಿದ್ದಾರೆ. ಆದರೆ ಮತ ನೀಡುವ ಸಂದರ್ಭದಲ್ಲಿ ತನ್ನ ಆಶೋತ್ತರಗಳು ಈಡೇರಬಹುದೆಂಬ ವಿಶ್ವಾಸದಿಂದ ಮತ ಚಲಾಯಿಸುತ್ತಾನೆ. ಇದೇ ಪ್ರಜಾಪ್ರಭುತ್ವದ ವೈಶಿಷ್ಟ್ಯ, ಸೌಂದರ್ಯ.

ಚುನಾವಣಾ ಅವಧಿ ಸಾಮಾನ್ಯವಾಗಿ ಭಾವನೆಗಳಿಗೆ ಪ್ರಚೋದನೆ ನೀಡುತ್ತದೆ. ಭ್ರಷ್ಟ ಎನಿಸಿದ ರಾಜಕಾರಣಿಯು ತ್ಯಾಗ, ನಿಷ್ಠೆ, ಪ್ರಾಮಾಣಿಕತೆ ಮೊದಲಾದ ಗುಣಗಳ ಬಗ್ಗೆ ಭಾಷಣ ಬಿಗಿಯುವಾಗ ಆತನ ವಿರುದ್ಧ ಉದ್ವೇಗ, ಆಕ್ರೋಶ, ಹತಾಶೆಯಂತಹ ಭಾವನೆಗಳು ಮೂಡುತ್ತವೆ. ಆತನ ಭಟ್ಟಂಗಿಗಳು, ಚೇಲಾಗಳು ಸತ್ಯ ಹರಿಶ್ಚಂದ್ರ, ದಾನಶೂರ ಕರ್ಣ ಮೊದಲಾದ ಉಪಮೆಗಳಿಂದ ಹಾಡಿ ಹೊಗಳುವಾಗ ಆಂತರ್ಯದಲ್ಲಿರುವ ಆಕ್ರೋಶವನ್ನು ತೋರ್ಪಡಿಸಲಾಗದೆ ಮತದಾರರು ಅಸಹಾಯಕತೆಯಿಂದ ಒಳಗೊಳಗೆ ಕೊರಗುತ್ತಾರೆ. ಚುನಾವಣೆಗಳು ಮತದಾರರಲ್ಲಿ ಮಿತ್ರತ್ವ ಹಾಗೂ ಶತ್ರುತ್ವದ ಭಾವನೆಗಳನ್ನು ಮೂಡಿಸುತ್ತದೆ. ಅಭ್ಯರ್ಥಿ ಉತ್ತಮನಾದರೂ ಪ್ರತಿನಿಧಿಸುವ ಪಕ್ಷ ಉತ್ತಮವಿಲ್ಲ ಅಥವಾ ಪಕ್ಷ ಉತ್ತಮವಾದರೂ ಅಭ್ಯರ್ಥಿ ಬಗ್ಗೆ ಅಸಮಾಧಾನವಿದ್ದ ಸಂದರ್ಭಗಳಲ್ಲಿ ಮತದಾರರು ದ್ವಂದ್ವಕ್ಕೆ ಒಳಗಾಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಈ ದ್ವಂದ್ವ ಪ್ರವೃತ್ತಿ ಕಡಿಮೆಯಾಗುತ್ತಿದೆ. ವ್ಯಕ್ತಿ ಉತ್ತಮನಲ್ಲದಿದ್ದರೂ ಆತ ಪ್ರತಿನಿಧಿಸುವ ಪಕ್ಷದ ನಾಯಕತ್ವ ನೋಡಿ ಮತ ನೀಡುವ ಪ್ರವೃತ್ತಿ ಪ್ರಾರಂಭವಾಗಿದೆ. 2014ರವರೆಗೆ ಭಾರತೀಯ ಮತದಾರನು ತನಗೆ ವೈಯಕ್ತಿಕವಾಗಿ ಸಿಗುವ, ಸಿಗಬಹುದಾದ ಲಾಭಗಳ ಲೆಕ್ಕಾಚಾರದಲ್ಲಿ ಮತ ನೀಡುತ್ತಿದ್ದನು. ದೇಶ, ರಾಜ್ಯಕ್ಕಿಂತ ಹೆಚ್ಚಾಗಿ ಸ್ವಕೇಂದ್ರಿತ ಮಾನಸಿಕತೆಯಿಂದ ಮತ ಚಲಾಯಿಸುತ್ತಿದ್ದನು. 2014ರ ನಂತರ ಮತದಾರ ಮಾನಸಿಕತೆಯಲ್ಲಿ, ಭಾವನೆಗಳಲ್ಲಿ, ಯೋಚನೆಗಳಲ್ಲಿ ಅಗಾಧ ಸಕಾರಾತ್ಮಕ ಪರಿವರ್ತನೆಯಾಗಿದೆ. ವೈಯಕ್ತಿಕ ಹಿತಕ್ಕಿಂತ ದೇಶದ ಭದ್ರತೆ, ಹಿತ, ಭಾರತ ಜಗದ್ವಂದ್ಯ ರಾಷ್ಟ್ರವಾಗಬೇಕೆಂಬ ಭಾವನೆಯಿಂದ ಮತ ಚಲಾಯಿಸಬೇಕೆಂಬ ಭಾವನೆ ಮತದಾರರಲ್ಲಿ ಮೂಡತೊಡಗಿದೆ. ಬಿಟ್ಟಿ ಭಾಗ್ಯಗಳನ್ನು ನೀಡುವ ಪಕ್ಷಗಳಿಗಿಂತ ಗಟ್ಟಿ ಯೋಜನೆಗಳನ್ನು ನೀಡುವ ಪಕ್ಷಗಳಿಗೆ ಮತ ನೀಡಬೇಕೆಂಬ ಮಾನಸಿಕತೆ ಮತದಾರರಲ್ಲಿ ಬಲವಾಗುತ್ತಿರುವುದು ಸದೃಢ ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಕಾರಾತ್ಮಕ ಬೆಳವಣಿಗೆಯಾಗಿದೆ. ಕರ್ನಾಟಕವನ್ನೇ ಗಮನಿಸಿದಲ್ಲಿ ಗ್ಯಾರಂಟಿ/ಬಿಟ್ಟಿ ಯೋಜನೆಗಳಿಂದ ರಾಜ್ಯದ ಆರ್ಥಿಕತೆಗೆ ಉತ್ತೇಜನವಾಗಲಿ, ಜನಸಾಮಾನ್ಯರ ಜೀವನ ಮಟ್ಟದಲ್ಲಿ ಸುಧಾರಣೆಯಾಗಲಿ ಕಂಡು ಬಂದಿಲ್ಲ. ಬದಲಿಗೆ ಸಿಗುತ್ತಿರುವ ಬಿಟ್ಟಿ ಹಣದಿಂದ ಮಜಾ ಉಡಾಯಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಇತ್ತೀಚಿನ ವರ್ಷಗಳಲ್ಲಿ ಮತದಾರರಲ್ಲಿನ ಒಂದು ದೊಡ್ಡ ಸಂಖ್ಯೆಯಲ್ಲಿ ಮಧ್ಯಮ ವರ್ಗದವರು, ವಿಶೇಷವಾಗಿ ಯುವ ಮತದಾರರು ದೇಶದೊಂದಿಗೆ ಭಾವನಾತ್ಮಕವಾಗಿ ಬೆಸೆದು, ತಮ್ಮ ವೈಯಕ್ತಿಕ ಸ್ವಾರ್ಥದಿಂದ ಮೇಲೆದ್ದು ದೇಶದ ಸಮಗ್ರ ವಿಕಾಸಕ್ಕಾಗಿ, ಆರ್ಥಿಕ–ಸಾಮಾಜಿಕ ನ್ಯಾಯಕ್ಕಾಗಿ ಮತ ನೀಡುವಂತಹ ಪ್ರವೃತ್ತಿ ಕಂಡು ಬರುತ್ತಿದೆ. ದೇಶದ ಅತ್ಯಮೂಲ್ಯ ಸಂಪತ್ತು ನಿರ್ವಿವಾದವಾಗಿ 'ಯುವ ಜನತೆ' ಎಂದು ದೇಶದ ಉನ್ನತಿಯನ್ನು ಬಯಸುವ ಎಲ್ಲಾ ಚಿಂತಕರು, ಪ್ರಜ್ಞಾವಂತರು ಕಾಲಕಾಲಕ್ಕೆ ಹೇಳುತ್ತಾ ಬಂದಿದ್ದಾರೆ. ಯಾವ ದೇಶದ ಯುವಜನರಿಗೆ ತಮ್ಮ ದೇಶದ ಪರಂಪರೆ, ಧರ್ಮ, ಸಂಸ್ಕೃತಿಗಳ ಕುರಿತು ಅಭಿಮಾನ ವಿದ್ದರೆ ಆಗ ಆ ದೇಶವು ಅಭಿವೃದ್ಧಿಯಾಗುವುದರಿಂದ ಶಕ್ತಿಶಾಲಿಯಾಗುವುದರಿಂದ ತಡೆಯಲು ಯಾರಿಗೂ ಸಾಧ್ಯವಾಗುವುದಿಲ್ಲ. ಯುವ ಜನರು ದೇಶವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆಂಬುದು ನಿರ್ವಿವಾದಿತವಾಗಿದೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಬಲಿಷ್ಠ ದೇಶವೊಂದರ ನಿರ್ಮಾಣಕ್ಕೆ ಮತದಾನವೇ ಅಸ್ತಿಭಾರವೆನಿಸಿದೆ. ಈ ಕಾರಣದಿಂದ ಯುವಜನತೆಯೊಂದಿಗೆ ದೇಶದ ಎಲ್ಲಾ ಮತದಾರರು ಮತದಾನವನ್ನು ಹಕ್ಕಿಗಿಂತ ಸದೃಢ ದೇಶದ ನಿರ್ಮಾಣಕ್ಕಾಗಿ ತನ್ನ ಬಳಿ ಇರುವ ಕರ್ತವ್ಯ, ಜವಾಬ್ದಾರಿ ಎಂದು ಭಾವಿಸಬೇಕಾಗಿದೆ. ಏಕೆಂದರೆ ಶ್ರೇಷ್ಠ ಸರಕಾರವು ಅದನ್ನು ಆಯ್ಕೆ ಮಾಡಿದ ಮತದಾರನ ಶ್ರೇಷ್ಠತೆಯನ್ನು ಪರಿಚಯಿಸುತ್ತದೆ. ಭಾರತದಲ್ಲಿಂದು ಮೂವತ್ತೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣ ಶೇ.65 ರಷ್ಟಿದ್ದು ಭಾರತವಿಂದು ಯುವ ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಯುವಜನತೆ ಹೆಚ್ಚು ಪ್ರಮಾಣದಲ್ಲಿ ರಾಜಕೀಯಕ್ಕೆ ಪ್ರವೇಶಿಸಲು ಅತ್ಯಂತ ಹಿರಿಯರೆನಿಸಿರುವ ರಾಜಕಾರಣಿಗಳು ಚುನಾವಣೆ, ರಾಜಕೀಯದಿಂದ ಹಿಂದೆ ಸರಿಯುವ ಮೂಲಕ ಮೇಲ್ಪಂಕ್ತಿ ತೋರಬೇಕಾಗಿದೆ. ದೇಶಗಳು ಯುವಜನತೆಯ ಚಿಂತನೆಯ ಆಧಾರದಲ್ಲಿ ಮುನ್ನಡೆಯುತ್ತದೆ ಎಂಬುದು ಅನೇಕ ಬಾರಿ ಸಾಬೀತಾಗಿದೆ.



> "ಚುನಾವಣಾ ಅವಧಿ ಸಾಮಾನ್ಯವಾಗಿ ಭಾವನೆಗಳಿಗೆ ಪ್ರಚೋದನೆ ನೀಡುತ್ತದೆ. ಭ್ರಷ್ಟ ಎನಿಸಿದ ರಾಜಕಾರಣಿಯು ತ್ಯಾಗ, ನಿಷ್ಠೆ, ಪ್ರಾಮಾಣಿಕತೆ ಮೊದಲಾದ ಗುಣಗಳ ಬಗ್ಗೆ ಭಾಷಣ ಬಿಗಿಯುವಾಗ ಆತನ ವಿರುದ್ಧ ಉದ್ವೇಗ, ಆಕ್ರೋಶ, ಹತಾಶೆಯಂತಹ ಭಾವನೆಗಳು ಮೂಡುತ್ತವೆ. ಆತನ ಭಟ್ಟಂಗಿಗಳು, ಚೇಲಾಗಳು ಸತ್ಯ ಹರಿಶ್ಚಂದ್ರ, ದಾನಶೂರ ಕರ್ಣ ಮೊದಲಾದ ಉಪಮೆಗಳಿಂದ ಹಾಡಿ ಹೊಗಳುವಾಗ ಆಂತರ್ಯದಲ್ಲಿರುವ ಆಕ್ರೋಶವನ್ನು ತೋರ್ಪಡಿಸಲಾಗದೆ ಮತದಾರರು ಅಸಹಾಯಕತೆಯಿಂದ ಒಳಗೊಳಗೆ ಕೊರಗುತ್ತಾರೆ. ಚುನಾವಣೆಗಳು ಮತದಾರರಲ್ಲಿ ಮಿತ್ರತ್ವ ಹಾಗೂ ಶತ್ರುತ್ವದ ಭಾವನೆಗಳನ್ನು ಮೂಡಿಸುತ್ತದೆ. ಅಭ್ಯರ್ಥಿ ಉತ್ತಮನಾದರೂ ಪ್ರತಿನಿಧಿಸುವ ಪಕ್ಷ ಉತ್ತಮವಿಲ್ಲ ಅಥವಾ ಪಕ್ಷ ಉತ್ತಮವಾದರೂ ಅಭ್ಯರ್ಥಿ ಬಗ್ಗೆ ಅಸಮಾಧಾನವಿದ್ದ ಸಂದರ್ಭಗಳಲ್ಲಿ ಮತದಾರರು ದ್ವಂದ್ವಕ್ಕೆ ಒಳಗಾಗುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಈ ದ್ವಂದ್ವ ಪ್ರವೃತ್ತಿ ಕಡಿಮೆಯಾಗುತ್ತಿದೆ. ವ್ಯಕ್ತಿ ಉತ್ತಮನಲ್ಲದಿದ್ದರೂ ಆತ ಪ್ರತಿನಿಧಿಸುವ ಪಕ್ಷದ ನಾಯಕತ್ವ ನೋಡಿ ಮತ ನೀಡುವ ಪ್ರವೃತ್ತಿ ಪ್ರಾರಂಭವಾಗಿದೆ.

ಚುನಾವಣೆಗಳಲ್ಲಿ ಘೋಷಣೆಗಳ/ಹೇಳಿಕೆಗಳ ಪ್ರಭಾವ :

ಕೆಲವೊಂದು ಘೋಷಣೆಗಳು, ಹೇಳಿಕೆಗಳು ಭಾರತದಲ್ಲಿ ಚುನಾವಣಾ ಫಲಿತಾಂಶವನ್ನೇ ಬದಲಾಯಿಸಿದೆ. 1971ರ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರ ಗರಿಬಿ ಹಟಾವೋ ದೇಶ್ ಬಚಾವೋ ಎಂಬ ಘೋಷಣೆಯಿಂದ ಕಾಂಗ್ರೆಸ್ ಬಹುಮತ ಗಳಿಸಿ ಅಧಿಕಾರಕ್ಕೇರಿತು. 2007ರ ಗುಜರಾತ್ ಚುನಾವಣಾ ಪ್ರಚಾರದಲ್ಲಿ ಸೋನಿಯಾ ಗಾಂಧಿಯವರು ಮೋದಿಯವರ ವಿರುದ್ಧ ನೀಡಿದ ಮೌತ್ ಕೇ ಸೌದಾಗರ್ (ಸಾವಿನ ವ್ಯಾಪಾರಿ) ಎಂಬ ಹೇಳಿಕೆಯಿಂದ ಮೋದಿ ಪ್ರಚಂಡ ಜಯಗಳಿಸಿ ಮತ್ತೆ ಗುಜರಾತ್‌ನ ಮುಖ್ಯಮಂತ್ರಿಯಾದರು. ಆನಂತರ ಮೋದಿಯವರು ಹಿಂದೆ ತಿರುಗಿ ನೋಡಿಲ್ಲ. 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಅಬ್ ಕಿ ಬಾರ್ ಮೋದಿ ಸರಕಾರ್" ಜನರನ್ನು ಆಕರ್ಷಿಸಿದ ಪರಿಣಾಮ ಮೋದಿ ಪ್ರಧಾನಿಯಾದರು. ಈ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಮಣಿಶಂಕರ್ ಅಯ್ಯರ್ ನೀಡಿದ ಚಾಯ್‌ವಾಲ್ ಹೇಳಿಕೆಯೂ ಬಿಜೆಪಿಗೆ ವರವಾಯಿತು. 2017ರ ಗುಜರಾತ್ ಚುನಾವಣಾ ಸಂದರ್ಭದಲ್ಲಿ ಮತ್ತೆ ಮಣಿಶಂಕರ್ ಅಯ್ಯರ್ ನಾಲಿಗೆ ಹರಿಯಬಿಟ್ಟು ಮೋದಿಯವರನ್ನು ನೀಚ್ ಇನ್ಸಾನ್ (ನೀಚ ಮನುಷ್ಯ) ಎಂದು ಹೇಳಿಕೆ ನೀಡಿದ್ದು ಕಾಂಗ್ರೆಸ್‌ಗೆ ದುಬಾರಿಯಾಯಿತು. 2019ರ ಚುನಾವಣೆಯಲ್ಲಿ ರಾಹುಲ್ ಗಾಂಧಿಯವರು ಅವರ ತಂದೆಯಾದ ರಾಜೀವ್ ಗಾಂಧಿ ಕಾಲದಲ್ಲಾದ ಬೋಫೋರ್ಸ್ ಹಗರಣಕ್ಕೆ ಸಮೀಕರಿಸಿ ರಫೇಲ್ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಚೌಕಿದಾರ್ ಚೋರ್ ಹೈ ಎಂದು ಮೋದಿ ವಿರುದ್ಧ ಪ್ರಚಾರ ಮಾಡಿದರು. ಮೋದಿಯವರು ಇದನ್ನೇ ಪ್ರತ್ಯಾಸ್ತ್ರದ ರೂಪದಲ್ಲಿ ಮೈ ಚೌಕಿ ದಾರ್ ಹೂಂ ಎನ್ನುವುದರೊಂದಿಗೆ ಫಿರ್ ಸೇ ಮೋದಿ ಎಂಬ ಬಿಜೆಪಿ ಘೋಷಣೆ ಜನರನ್ನು ಆಕರ್ಷಿಸಿ ಮೋದಿ ಎರಡನೇ ಬಾರಿ ಪೂರ್ಣ ಬಹುಮತದೊಂದಿಗೆ ಪ್ರಧಾನಿಯಾದರು. ಈ ಬಾರಿಯ ಚುನಾವಣೆಯಲ್ಲಿ ಅಬ್‌ಕೀ ಬಾರ್ ಚಾರ್ ಸೌ ಪಾರ್" ಎಂಬ ಘೋಷಣೆಯನ್ನು ಮೋದಿಯವರು ಮಾಡಿದ್ದಾರೆ. ಈ ಘೋಷಣೆ ಎಷ್ಟರಮಟ್ಟಿಗೆ ಯಶಸ್ವಿಯಾಗಲಿದೆ ಎಂದು ಅರಿಯಲು ಚುನಾವಣಾ ಅಂತಿಮ ಫಲಿತಾಂಶ ಬರುವವರೆಗೆ ಕಾಯಬೇಕಾಗಿದೆ.

ಚುನಾವಣೆಗಳಲ್ಲಿ ಹರಡುವ ಭ್ರಮೆಗಳ, ಸುಳ್ಳುಗಳ ಪ್ರಭಾವ :

ಚುನಾವಣೆಗಳಲ್ಲಿ ವಿರೋಧಿಗಳು ಮಾಡುವ ಅಪಪ್ರಚಾರಗಳು, ಹೇಳುವ ಸುಳ್ಳುಗಳು, ಹರಡುವ ಭ್ರಮೆಗಳು, ಕೆಲವೊಮ್ಮೆ ಅನಿರೀಕ್ಷಿತ ಫಲಿತಾಂಶ ನೀಡುತ್ತವೆ. 1999ರ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಹುತಾತ್ಮ ಸೈನಿಕರ ಸಂಸ್ಕಾರಕ್ಕೆ ಅಮೆರಿಕದಿಂದ ಆಮದಾದ ಶವಪೆಟ್ಟಿಗೆ ವ್ಯವಹಾರದಲ್ಲಿ ಎನ್‌ಡಿಎ ಸರಕಾರ ಭ್ರಷ್ಟಾಚಾರ ನಡೆಸಿದೆ ಎಂದು ಕಾಂಗ್ರೆಸ್ ಅಪಪ್ರಚಾರ ನಡೆಸಿತು. ಇದರೊಂದಿಗೆ 2004ರ ಚುನಾವಣೆಯಲ್ಲಿ ಎನ್‌ಡಿಎ ಕೂಟದ ಭಾರತ್ ಪ್ರಕಾಶಿಸುತ್ತದೆ (iNDIA sHINING) ಎಂಬ ಘೋಷ ವಾಕ್ಯದಿಂದ ಕಾರ್ಯಕರ್ತರು ಗೆಲುವಿನ ಭ್ರಮೆಯಿಂದ ನಿಷ್ಕ್ರಿಯರಾದರು. ಇದರಿಂದ ಎನ್‌ಡಿಎ ದಯನೀಯ ಸೋಲನುಭವಿಸಿತು. ಕಾಂಗ್ರೆಸ್ ಈ ಬಾರಿ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರಕಾರದ ವಿರುದ್ಧ ಕಾಮಗಾರಿಗಳಲ್ಲಿ ಶೇ.40 ಕಮೀಷನ್ ಎಂಬ ಆಪಾದನೆಯಿಂದ ಬಿಜೆಪಿ ನೆಲಕಚ್ಚಿತು.

ಪ್ರಸ್ತುತ ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಬಿಜೆಪಿ ಮತ್ತೆ ಬಹುಮತ ಸಾಧಿಸಿದರೆ ಸಂವಿಧಾನ ಬದಲಿಸಲಿದೆ ಎಂಬ ಭ್ರಮೆಯನ್ನು ಕಾಂಗ್ರೆಸ್ ಹರಡುತ್ತಿದೆ. ಸಂವಿಧಾನ ನಾಶಕ್ಕೆ ಸಂಬಂಧಪಟ್ಟಂತೆ ಮಲ್ಲಿಕಾರ್ಜುನ ಖರ್ಗೆ ಸಹಿತ ಎಲ್ಲಾ ಕಾಂಗ್ರೆಸ್ ನಾಯಕರು ಭೂತಕಾಲದಲ್ಲಿ ನಡೆದ ವಿದ್ಯಮಾನಗಳನ್ನು ಸ್ಮರಿಸಿಕೊಳ್ಳಬೇಕಾಗಿದೆ.

ದೇಶದ ಪ್ರಥಮ ಪ್ರಧಾನಿ, ರಾಹುಲ್ ಗಾಂಧಿಯವರ ಮುತ್ತಾತ ಜವಾಹರಲಾಲ್ ನೆಹರೂ ಅವರು ಸಂವಿಧಾನಕ್ಕೆ ಹದಿನೇಳು ಬಾರಿ ತಿದ್ದುಪಡಿ ತಂದಿದ್ದರು. ಇಂದಿರಾ ಗಾಂಧಿಯವರಂತೂ ಸಂವಿಧಾನಕ್ಕೆ ಯಾವುದೇ ರೀತಿಯ ಗೌರವ ನೀಡಿರಲಿಲ್ಲ. 1975 ರಲ್ಲಿ ದೇಶದಲ್ಲಿ ತುರ್ತು ಸ್ಥಿತಿ ಜಾರಿಗೊಳಿಸುವ ಮೂಲಕ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಸಿದುಕೊಂಡಿದ್ದರು. ದೇಶದ ಸಂವಿಧಾನಕ್ಕೆ ಅತ್ಯಂತ ವಿವಾದಾತ್ಮಕವಾದ 42ನೇ ತಿದ್ದುಪಡಿ ಮಾಡುವ ಮೂಲಕ ದೇಶದ ಸಂಸತ್ತಿಗೆ ಅನಿಯಂತ್ರಿತ ಅಧಿಕಾರ ನೀಡಿ ದೇಶದ ಫೆಡರಲ್ ರಚನೆಯನ್ನು ನಾಶಪಡಿಸಲಾಗಿತ್ತು. ಕಾಂಗ್ರೆಸ್‌ನ ಅರವತ್ತು ವರ್ಷದ ಆಡಳಿತಾವಧಿಯಲ್ಲಿ ನೂರಕ್ಕೂ ಹೆಚ್ಚು ಬಾರಿ ಸಂವಿಧಾನಕ್ಕೆ 356ನೇ ವಿಧಿ ಪ್ರಯೋಗಿಸಿ ಚುನಾಯಿತ ರಾಜ್ಯ ಸರ್ಕಾರಗಳನ್ನು ವಜಾ ಮಾಡಲಾಗಿತ್ತು. ಮೋದಿ ಸರಕಾರ ಕಳೆದ ಹತ್ತು ವರ್ಷಗಳಲ್ಲಿ ವಿಪಕ್ಷಗಳ ಸರಕಾರವನ್ನು ವಜಾ ಮಾಡಿಲ್ಲ ಎಂಬ ಸತ್ಯವನ್ನು ಖರ್ಗೆ ಸಹಿತ ವಿಪಕ್ಷ ನಾಯಕರಿಗೆ ನೆನಪಿಸಬೇಕಾಗಿದೆ.


ಇತ್ತೀಚಿನ ದಿನಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟದ್ದು ತಮ್ಮ ಪಕ್ಷ ಎಂದು ಕಾಂಗ್ರೆಸ್ಸಿಗರು ಪ್ರಚಾರ ಮಾಡುತ್ತಿದ್ದಾರೆ. ವಾಸ್ತವವಾಗಿ ಇಂದಿರಾ ಗಾಂಧಿಯವರು 1969 ರಲ್ಲಿ ಕಾಂಗ್ರೆಸ್ ಅನ್ನು ಇಬ್ಭಾಗ ಮಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಂಗ್ರೆಸ್ ಅನ್ನು ಶೂಲಕ್ಕೇರಿಸಿದ್ದರು. ಈಗ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರಾಗಿರುವ ಕಾಂಗ್ರೆಸ್, ಇಂದಿರಾ ಗಾಂಧಿಯವರ ಸ್ವಾರ್ಥಕ್ಕಾಗಿ ಅಧಿಕಾರ ದಾಹಕ್ಕಾಗಿ, ಕುಟುಂಬ ರಾಜಕಾರಣಕ್ಕಾಗಿ ಸೃಷ್ಟಿಯಾಗಿರುವ ಕಾಂಗ್ರೆಸ್ ಆಗಿದೆ. ಈಗ ಅಸ್ತಿತ್ವದಲ್ಲಿರುವ ಕಾಂಗ್ರೆಸ್ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಪಕ್ಷವೇ ಅಲ್ಲ. ಜನಸಾಮಾನ್ಯರು ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಪ್ರಸ್ತುತ ದೇಶದ ಗಡಿಗಳ ಬಗ್ಗೆ ಕಾಂಗ್ರೆಸ್ ಭಾರಿ ಕಾಳಜಿ ವ್ಯಕ್ತಪಡಿಸುತ್ತಿದೆ. ಇತ್ತೀಚೆಗೆ ರಾಜಸ್ಥಾನದಲ್ಲಿ ನಡೆದ ಕಾಂಗ್ರೆಸ್ ಚುನಾವಣಾ ರ‍್ಯಾಲಿಯಲ್ಲಿ ಖರ್ಗೆಯವರು ತಮ್ಮ ಭಾಷಣದಲ್ಲಿ ಚೀನಾ ಸತತವಾಗಿ ಗಾಡಿಯಲ್ಲಿ ಅತಿಕ್ರಮಣ ಮಾಡುತ್ತಿದೆ. ಐವತ್ತಾರು ಇಂಚಿನ ಎದೆಯಿರುವ ಪ್ರಧಾನಿ ಮೋದಿಯವರು ಅಫೀಮು ಸೇವಿಸಿ ನಿದ್ರೆ ಮಾಡುತ್ತಿದ್ದಾರೆಯೇ? ಎಂದು ತಮ್ಮ ಸ್ಥಾನಕ್ಕೆ ವಯಸ್ಸಿಗೆ ಗೌರವ ತರದ ರೀತಿಯಲ್ಲಿ ಖರ್ಗೆಯವರು ಟೀಕಿಸಿದರು. ಈ ರೀತಿ ಟೀಕಿಸುವ ಖರ್ಗೆಯವರು 1962 ರಲ್ಲಿ ನೆಹರೂರವರು ಚೀನಾಕ್ಕೆ ಬಿಟ್ಟು ಕೊಟ್ಟ 38 ಸಾವಿರ ಚ.ಕಿ.ಮೀ. ಪ್ರದೇಶದ ಬಗ್ಗೆ, ಇಂದಿರಾ ಅವರು ಕಚ್ಚತೀವ ದ್ವೀಪವನ್ನು ಶ್ರೀಲಂಕಾಕ್ಕೆ ನೀಡಿದ ಬಗ್ಗೆ ತಮ್ಮನ್ನೇ ತಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ರಾಹುಲ್ ಗಾಂಧಿಯವರ ಇತ್ತೀಚೆಗೆ ಮುಕ್ತಾಯಗೊಂಡ ಭಾರತ್ ಜೋಡೋ ನ್ಯಾಯ ಯಾತ್ರೆಯನ್ನು ಚೀನಾ ತನ್ನದೆಂದು ತಕರಾರು ತೆಗೆಯುತ್ತಿರುವ ಅರುಣಾಚಲ ಪ್ರದೇಶದ ಬದಲು ಮಣಿಪುರದಿಂದ ಆರಂಭಿಸಿದ್ದರು. ಸದಾ ಚೀನಾ ಪರ ಒಲವು ಹೊಂದಿರುವ ಗಾಂಧಿ ಪರಿವಾರವು ಅರುಣಾಚಲ ಪ್ರದೇಶವು ಚೀನಾದ ಭೂಭಾಗವೆಂದು ಪರೋಕ್ಷವಾಗಿ ಒಪ್ಪಿಗೆ ನೀಡಿದಂತೆ ತೋರುತ್ತಿದೆ. ಈ ಕುರಿತು ಕಾಂಗ್ರೆಸ್ ಅಧ್ಯಕ್ಷರಾದ ಖರ್ಗೆಯವರು ದೇಶಕ್ಕೆ ಸ್ಪಷ್ಟನೆ ನೀಡಬೇಕಾಗಿದೆ. ಈ ರೀತಿ ಚುನಾವಣೆಗಳಲ್ಲಿ ದಾರಿ ತಪ್ಪಿಸುವ ಭ್ರಮೆಗಳನ್ನು ಸೃಷ್ಟಿಸುವವರ ಬಗ್ಗೆಯೂ ಮತದಾರರು ಎಚ್ಚರವಾಗಿರಬೇಕು.

ಚುನಾವಣೆಗಳು ವ್ಯವಸ್ಥೆ ಮತ್ತು ಮತದಾರರ ನಡುವೆ ಪೂರಕ ಸಂಬಂಧವನ್ನು ಕಲ್ಪಿಸುವ ವಿಶಿಷ್ಟ ಸಾಂವಿಧಾನಿಕ ಪ್ರಕ್ರಿಯೆಯಾಗಿದೆ. ಸ್ವಾರಸ್ಯಕರವಾಗಿ ಹೇಳುವುದಾದರೆ ಚುನಾವಣೆಗಳು ಕೆಲವೊಮ್ಮೆ ಪರಸ್ಪರ ಮೌನವಾಗಿ ವಿರೋಧಿಸುವವರ ನಡುವಿನ ಮಧುಚಂದ್ರದಂತಿರುತ್ತದೆ. ಅಂದರೆ ವಿಜಯಿ ಅಭ್ಯರ್ಥಿಗೆ ಮತ ನೀಡದವನು ಆತನ ವಿಜಯೋತ್ಸವದಲ್ಲಿ ಸಂಭ್ರಮದಿಂದ ಭಾಗವಹಿಸುವುದು. ಮತದಾರನು ದೇಶದ ವ್ಯವಸ್ಥೆಯಲ್ಲಿ ತನಗಿರುವ ಮಹತ್ವವನ್ನು ಅರಿತು ಕನಿಷ್ಠ ಕೆಲವು ದಿನಗಳ ಕಾಲ ತಾನೊಬ್ಬ ದೇಶದ ಶಕ್ತಿಶಾಲಿ ವ್ಯಕ್ತಿ ಎಂಬ ಭಾವನೆ ಜಾಗೃತಗೊಳಿಸುತ್ತದೆ ಹಾಗೂ ದೇಶದೊಂದಿಗೆ ಆತನಿಗೆ ಬಲವಾದ ಬಾಂಧವ್ಯದ ಅನುಭವ ನೀಡುತ್ತದೆ. ಮತದಾನ ಬಹಿಷ್ಕರಿಸಿದವರಿಗೆ ಚುನಾವಣೆ ನಂತರ ಅನಾಥ ಪ್ರಜ್ಞೆ, ಅಪರಾಧಿ ಪ್ರಜ್ಞೆಯ ಭಾವ ಮೂಡಿದರೆ ಮತದಾನ ಮಾಡಿದವರಲ್ಲಿ ಹೆಮ್ಮೆಯ, ಕರ್ತವ್ಯ ನಿರ್ವಹಿಸಿದ ಭಾವನೆ ಮೂಡುತ್ತದೆ. ಆದ್ದರಿಂದ ಚುನಾವಣಾ ಉತ್ಸವದಲ್ಲಿ ನಾವೆಲ್ಲಾ ಮತ ಚಲಾಯಿಸೋಣ ಪ್ರಜಾತಂತ್ರ ಶಕ್ತಿಶಾಲಿಗೊಳಿಸೋಣ.



ಮೈಸೂರು ವಕೀಲರ ಸಂಘದ ನೂತನ ಅಧ್ಯಕ್ಷ ಎಸ್.ಲೋಕೇಶ್ ಅವರನ್ನು ಅಭಿನಂದಿಸಲಾಯಿತು. ಮೈಸೂರು ನಗರ ಬಿಜೆಪಿ ಎಸ್.ಟಿ. ಮೋರ್ಚಾ ಅಧ್ಯಕ್ಷರಾದ ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಬೆಳವಾಡಿ ರವಿ, ಸಿದ್ಧಲಿಂಗೇಗೌಡ, ಎಂ.ಮಹದೇವಸ್ವಾಮಿ, ನೋಟರಿ ಬೋರಣ್ಣ, ಜಯಪ್ರಕಾಶ್ ನಾರಾಯಣ್, ಕೆ.ಪ್ರಸನ್ನಕುಮಾರ್, ಶಶಿಕಾಂತ್ ನಾಜರೆ, ಶಂಕರ್ ಸಿಂಗ್, ಕೆ.ಎಸ್.ಅಂದಾನಿ, ಜಾವಿದ್ ಇತರರಿದ್ದಾರೆ

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು: ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಅರವಿಂದ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಎಂ.ಕೆ. ರಾಘವ್ ವಿಜ್ಞಾನ ವಿಭಾಗದಲ್ಲಿ 583 ಅಂಕಗಳನ್ನು ಪಡೆದು ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾನೆ.


ಮೈಸೂರು ನಿವಾಸಿಯಾದ ಎಂ.ಕೆ ಕುಬೇರ್ ಅವರ ಪುತ್ರ. ಮೈಸೂರು ಜಿಲ್ಲಾ ಈಡಿಗರ ಸಂಘದ ವತಿಯಿಂದ ರಾಘವ್‌ನನ್ನು ಅಭಿನಂದಿಸಲಾಯಿತು.

ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿರುವ ಜೆಎಸ್‌ಎಸ್ ಪಿಯು ಕಾಲೇಜು ವಿಜ್ಞಾನ ವಿಭಾಗದಲ್ಲಿ ಶೇ.99 ಫಲಿತಾಂಶ

ಮೈಸೂರು: ಮೈಸೂರಿನ ಎಸ್‌ಜೆಸಿಇ ಕ್ಯಾಂಪಸ್‌ನಲ್ಲಿರುವ ಜೆಎಸ್‌ಎಸ್ ಪಿಯು ಕಾಲೇಜು ವಿಜ್ಞಾನ ವಿಭಾಗದ ಪಿಸಿಎಂಬಿಯಲ್ಲಿ ಶೇ.99 ಫಲಿತಾಂಶ ಪಡೆದಿದೆ.

ಒಟ್ಟು 95 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು 94 ಮಂದಿ ಉತ್ತೀರ್ಣರಾಗಿ 30 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆಯಲ್ಲಿ, 56 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ, 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಮತ್ತು ಒಬ್ಬ ವಿದ್ಯಾರ್ಥಿ ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಗುರುಪಾದಸ್ವಾಮಿ ಬಿಜೆಪಿ ಸೇರ್ಪಡೆಯಿಂದ ಕಾಂಗ್ರೆಸ್‌ಗೆ ಆತಂಕವಿಲ್ಲ

ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್

ಮೈಸೂರು, ಏ.12(ಜಿಎ)–ಕಾಂಗ್ರೆಸ್‌ನಲ್ಲಿದ್ದ ವೀರಶೈವ ಸಮುದಾಯದ ಮುಖಂಡ ಗುರುಪಾದಸ್ವಾಮಿ ಅವರು ಬಿಜೆಪಿ ಸೇರಿರುವುದರಿಂದ ತಮ್ಮ ಪಕ್ಷಕ್ಕೆ ಯಾವುದೇ ಆತಂಕವಿಲ್ಲ ಎಂದು ಕೆಪಿಸಿಸಿ ಕಾರ್ಯದರ್ಶಿ ಹಾಗೂ ವರುಣ ಕ್ಷೇತ್ರದ ವೀರಶೈವ ಮುಖಂಡರಾದ ವರುಣ ಮಹೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುಪಾದಸ್ವಾಮಿ ಅವರು ಈ ಹಿಂದೆಯೂ ವೈಯಕ್ತಿಕ ಆಸೆಗಳಿಂದಾಗಿ ವಿವಿಧ ಪಕ್ಷಗಳಿಗೆ ಅಲೆದು ಕಾಂಗ್ರೆಸ್ ಸೇರ್ಪಡೆಗೊಂಡಿದ್ದರು. ಅವರಿಗೆ ಕೆಪಿಸಿಸಿ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಸ್ಥಾನ ನೀಡಲಾಗಿತ್ತು. ಇಷ್ಟೆಲ್ಲ ಅಧಿಕಾರ ನೀಡಿದ್ದರೂ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಮಾಡಿರುವ ಆರೋಪ ಸರಿಯಲ್ಲ. ಸಣ್ಣದೊಂದು ಚುನಾವಣೆಯಲ್ಲೂ ಗೆಲ್ಲಲಾಗದ ಅವರಿಗೆ ಲೋಕಸಭಾ ಚುನಾವಣಾ ಅಭ್ಯರ್ಥಿಯಾಗಿ ಆಯ್ಕೆ ಮಾಡದೇ ಇರುವುದು ಸರಿಯಾದ ನಿರ್ಧಾರ ಎಂದರು. ಗುರುಪಾದ ಸ್ವಾಮಿ ಅವರೊಡನೆ ಇನ್ನಿತರ ವೀರಶೈವ ಮುಖಂಡರೂ ಬಿಜೆಪಿ ಸೇರಿದ್ದಾರೆ ಎನ್ನುತ್ತಿದ್ದಾರೆ. ಅವರ ಹೆಸರು ತಿಳಿಸಲಿ. ವಾಸ್ತವವಾಗಿ ಬಿಜೆಪಿಯಲ್ಲಿರುವ ಸಮುದಾಯದ ಮುಖಂಡರೇ ಕಾಂಗ್ರೆಸ್‌ಗೆ ಬರಲು ಸಿದ್ಧರಿದ್ದಾರೆ. ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಎರಡು ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲ್ಲುತ್ತಾರೆಂಬ ವಿಶ್ವಾಸ ವ್ಯಕ್ತಪಡಿಸಿ, ಕಳೆದ ವಿಧಾನಸಭಾ ಚುನಾವಣೆ ವೇಳೆಯೂ ವರುಣಾದ ವೀರಶೈವ ಸಮುದಾಯದವರು ಕಾಂಗ್ರೆಸ್‌ಗೆ ಮತ ಹಾಕಿದ್ದರು. ಈಗಲೂ ಕಾಂಗ್ರೆಸ್ ಕೈಹಿಡಿಯುತ್ತಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಗುರುಪಾದಸ್ವಾಮಿ ರತ್ನಶೇಖರ್, ಚಂದ್ರಶೇಖರ್, ಸ್ವಾಮಿ, ಪರಶಿವಮೂರ್ತಿ ಉಪಸ್ಥಿತರಿದ್ದರು.

ಕಾಂಗ್ರೆಸ್‌ಗೆ ರೈತರು, ಕಾರ್ಮಿಕ ರಕ್ಷಣಾ ವೇದಿಕೆ ಬೆಂಬಲ

ಮೈಸೂರು, ಏ.12(ಜಿಎ)–ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ಪ್ರಾಂತ್ಯ ರೈತ ಮತ್ತು ಕಾರ್ಮಿಕ ರಕ್ಷಣಾ ವೇದಿಕೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲಿದೆ ಎಂದು ರಾಜ್ಯಾಧ್ಯಕ್ಷ ಜೆ. ಜವರೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯ ಮೋದಿ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ರಾಜ್ಯದಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ಇದ್ದರೂ ಪ್ರಕೃತಿ ವಿಕೋಪದ ಅಡಿಯಲ್ಲಿ ಅನುದಾನ ಬಿಡುಗಡೆಗೊಳಿಸಿಲ್ಲ. ಜೊತೆಗೆ ಕಾರ್ಮಿಕ ವಿರೋಧಿಯಾಗಿದೆ. ಹೀಗಾಗಿ ವೇದಿಕೆಯೂ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಿದೆ ಎಂದರು. ಬರ ಕಾರಣ ಬೇಸಾಯಕ್ಕೆ, ಜನಜಾನುವಾರುಗಳಿಗೆ ನೀರಿಲ್ಲ. ಬರ ಪರಿಹಾರ ವಿಷಯದಲ್ಲಿ ಕೇಂದ್ರ ನಿರ್ಲಕ್ಷ್ಯ ತೋರಿದೆ. ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕುವುದಾಗಿ, ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ನೀಡಿದ್ದ ಭರವಸೆ ಕೇಂದ್ರ ಈಡೇರಿಸಿಲ್ಲ. ರೈತರ ಹೋರಾಟಕ್ಕೆ ಅಡ್ಡಿಯುಂಟು ಮಾಡಲಾಗಿದೆ ಎಂದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ಐದೂ ಗ್ಯಾರಂಟಿ ಜಾರಿಗೊಳಿಸಿದೆ. ಇದರಿಂದಾಗಿ ರೈತರು, ಮಹಿಳೆಯರು, ವಿದ್ಯಾರ್ಥಿಗಳಲ್ಲಿ ಭರವಸೆ ಮೂಡಿದೆ. ಆದ್ದರಿಂದಾಗಿ ಕಾರ್ಮಿಕ, ಅಹಿಂದ, ರೈತ ವರ್ಗಗಳು ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್‌ಗೆ ಮತ ಹಾಕಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎಸ್.ದೇವರಾಜು, ಶಶಿಕುಮಾರ್, ಶಿವಮೂರ್ತಿ, ಎಂ.ಮಧು ಉಪಸ್ಥಿತರಿದ್ದರು.

ವಿಶ್ವಕರ್ಮ ಸಮಾನ ಮನಸ್ಕರ ವೇದಿಕೆ ಕಾಂಗ್ರೆಸ್‌ಗೆ ಬೆಂಬಲ

ಮೈಸೂರು, ಏ.12(ಜಿಎ)–ರಾಜ್ಯ ವಿಶ್ವಕರ್ಮ ಸಮಾನ ಮನಸ್ಕರ ವೇದಿಕೆಯು ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಮೈಸೂರು– ಕೊಡಗು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಹಾಗೂ ಚಾಮರಾಜನಗರ ಕ್ಷೇತ್ರದಲ್ಲಿ ಸುನಿಲ್ ಬೋಸ್ ಅವರನ್ನು ಬೆಂಬಲಿಸಲಿದೆ ಎಂದು ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶ್ರೀನಿವಾಸ ಆಚಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಐದು ಗ್ಯಾರಂಟಿಗಳು ವಿಶ್ವಕರ್ಮ ಸಮುದಾಯದವರಿಗೂ ದೊರೆತು ಅನುಕೂಲವಾಗಿದೆ. ಜೊತೆಗೆ ತಾಲೂಕುಗಳಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ಈ ಹಿಂದಿನ ಸರ್ಕಾರಗಳು ಈ ಸಮುದಾಯವನ್ನು ನಿರ್ಲಕ್ಷಿಸಿದ್ದಕ್ಕೆ ಬದಲಾಗಿ ಈಗಿನ ಸಿಎಂ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಸಮುದಾಯಕ್ಕೆ ಬೇಕಾದ ಸೌಲಭ್ಯ ಒದಗಿಸುತ್ತಿದೆ. ಹೀಗಾಗಿ ಸಮುದಾಯದವರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಮುದಾಯದ ಮುಖಂಡರಾದ ಎಂ. ಮೋಗಣ್ಣಾಚಾರ್, ಬನ್ನೂರು ಎಎನ್.ಸ್ವಾಮಿ, ಎಸ್.ನಾಗರಾಜು, ಸಿದ್ದಪ್ಪಾಜಿ, ರಾಜು ಉಪಸ್ಥಿತರಿದ್ದರು.

ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನಕ್ಕೆ ಕುತ್ತು

ಕಾಂಗ್ರೆಸ್ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಡಾ.ಶ್ವೇತ ಮಡಪ್ಪಾಡಿ

ಮೈಸೂರು, ಏ.12(ಜಿಎ)– ಕಳೆದ 10 ವರ್ಷಗಳಿಂದ ಈ ದೇಶವನ್ನು ಬಗೆ ಬಗೆಯ ಸಂಕಟಗಳಿಗೆ ನೂಕಿದ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ, ಭಾರತದ ಸಂವಿಧಾನಕ್ಕೆ ಕುತ್ತು ಬಂದೊದಗುತ್ತದೆ ಎಂದು ಜಿಲ್ಲಾ ಕಾಂಗ್ರೆಸ್ ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಡಾ. ಶ್ವೇತಾ ಮಡಪ್ಪಾಡಿ ಕಳವಳ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 10 ವರ್ಷಗಳಿಂದ ದೇಶದಲ್ಲಿನ ಬೆಲೆ ಏರಿಕೆ, ಕೇಂದ್ರದ ಸಂವಿಧಾನ ವಿರೋಧಿ ನಡೆ, ನಿರುದ್ಯೋಗ, ರೈತರ ಸಮಸ್ಯೆ, ಮಹಿಳಾ ಮೀಸಲಾತಿಯ ನಿರ್ಲಕ್ಷ್ಯ, ಧರ್ಮದ ಹೆಸರಲ್ಲಿ ಸಮಾಜ ಒಡೆಯುವ ಕಾರ್ಯ ಮೊದಲಾದವುಗಳ ಕಾರಣದಿಂದಾಗಿ ಮತದಾರರು ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಕಳೆದ ಹತ್ತು ವರ್ಷಗಳಿಂದ ಭಾರತದಲ್ಲಿ ತೆರಿಗೆ ವ್ಯವಸ್ಥೆ ಜನಸಾಮಾನ್ಯರ ಕತ್ತು ಹಿಸುಕುವ ಸ್ಥಿತಿ ತಲುಪಿದೆ. ಹೊಸ ಉದ್ಯೋಗಗಳ ಸೃಷ್ಟಿಯಾಗುತ್ತಿಲ್ಲ. ದುಡಿಯುವ ವರ್ಗ ನಿರ್ಲಕ್ಷಕ್ಕೆ ಒಳಗಾಗಿದೆ. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯಗಳ ತಡೆಗೆ ಸರಿಯಾದ ಕ್ರಮ ಕೈಗೊಳ್ಳುತ್ತಿಲ್ಲ. ಕೇಂದ್ರ ಸರ್ಕಾರ ತಾನು ನಿರ್ವಹಿಸಬೇಕಾದ ಕೆಲಸ ಬಿಟ್ಟು ರಾಜ್ಯದ ಆಡಳಿತಕ್ಕೆ ಅನಾವಶ್ಯಕವಾಗಿ ತಲೆ ಹಾಕುತ್ತಿದೆ ಎಂದು ದೂರಿದರು.

ಕೇಂದ್ರದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ, ಮೀಸಲಾತಿಯನ್ನು ತೆಗೆದು, ಅಲ್ಪಸಂಖ್ಯಾತ ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗದವರ ಅಭಿವೃದ್ಧಿಗೆ ತೊಂದರೆ ಉಂಟಾಗುತ್ತದೆ. ಕಾರ್ಪೊರೇಟ್ ಜಗತ್ತು ಬಡವರನ್ನು ನಿರಂತರವಾಗಿ ಸುಲಿಗೆ ಮಾಡುತ್ತದೆ. ಬುಡಕಟ್ಟು ಜನರ ಬದುಕಿನ ಅಸ್ತಿತ್ವ (ನೆಲ –ಜಲ) ಬಂಡವಾಳಶಾಹಿಗಳ ಪಾಲಾಗುತ್ತದೆ. ಹೀಗಾಗಿ ಬಿಜೆಪಿ ಸೋಲುವುದು ದೇಶದ ಉಳಿವಿಗೆ ಅನಿವಾರ್ಯ, ಆದ್ದರಿಂದ ಜನತೆ ಕಾಂಗ್ರೆಸ್‌ಗೆ ಮತ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಸುಶೀಲಾ, ಕಾಮಾಕ್ಷಿಗೌಡ, ವಿಷ್ಣುಪ್ರಿಯ, ಪ್ರದೀಪ್‌ಕುಮಾರ್, ಬಸವರಾಜು, ಪ್ರಮೋದ್, ಚಂದ್ರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನವರನ್ನೇ ಮತ್ತೆ ಕಾಂಗ್ರೆಸ್‌ಗೆ ಸೇರಿಸಿಕೊಳ್ಳುವ ಡ್ರಾಮಾ!

ಬೆಂಗಳೂರು, ಏ.12(ಕೆಎಂಶಿ)– ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಕಾಂಗ್ರೆಸ್



ಚಿಹ್ನೆ ಶಾಲು ಹಾಕಿ ಅವರನ್ನು ಜೆಡಿಎಸ್ ಕಾರ್ಯಕರ್ತರು ಎಂದು ಬಿಂಬಿಸುವ ಪರಿಸ್ಥಿತಿ ಡೂಪ್ಲಿಕೇಟ್ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಬರಬಾರದಿತ್ತು ಎಂದು ಜೆಡಿಎಸ್ ವ್ಯಂಗ್ಯವಾಡಿದೆ. ಸೋಲಿನ ಭೀತಿ ಎಷ್ಟರ ಮಟ್ಟಿಗೆ ಅವರಿಗೆ ಕಾಡುತ್ತಿದೆ ಎಂಬುದಕ್ಕೆ ಇಂತಹ ನಾಟಕ ಮತ್ತು ಗಿಮಿಕ್‌ಗಳು ಸಾಕ್ಷಿ ಎಂದು ಪಕ್ಷ ಟ್ವೀಟ್ ಮಾಡಿದೆ. ಸೋಲಿನ ಹತಾಶೆ ಎಂತಹ ಗಿಮಿಕ್‌ಗಳನ್ನು ಮಾಡುತ್ತದೆ ಎಂಬುದಕ್ಕೆ ನಿನ್ನೆ ರಾತ್ರಿ ಚನ್ನಪಟ್ಟಣದಲ್ಲಿ ನಡೆದ ಕಾರ್ಯಕರ್ತರ ಸೇರ್ಪಡೆ ಕಾರ್ಯಕ್ರಮದ ನಾಟಕವೇ ಸಾಕ್ಷಿ.

ಚೆಕ್‌ಪೋಸ್ಟ್‌ಗಳಲ್ಲಿ ವಾಹನಗಳ ತೀವ್ರ ತಪಾಸಣೆ

ಮೈಸೂರು, ಏ.12(ಎಂಟಿವೈ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ಸೇರಿದಂತೆ 14 ಕ್ಷೇತ್ರಗಳಲ್ಲಿ ಮತದಾನ ಪ್ರಕ್ರಿಯೆಗೆ ಇನ್ನು 14 ದಿನಗಳಿದ್ದು, ಚುನಾವಣಾ ಅಕ್ರಮ ವ್ಯಾಪಕಗೊಳ್ಳುವ ಸಾಧ್ಯತೆ ಹೆಚ್ಚಾಗಿರುವುದರಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣಾ ಕಾರ್ಯ ಬಿಗಿಗೊಳಿಸಲಾಗುತ್ತಿದೆ.

ಮತದಾರರಿಗೆ ಆಮಿಷವೊಡ್ಡುವ ಹಾಗೂ ವಿವಿಧ ಉಡುಗೊರೆಗಳನ್ನು ನೀಡುವ ಸಾಧ್ಯತೆ ಹೆಚ್ಚಾಗಿರುವುದರಿಂದ ಚೆಕ್‌ಪೋಸ್ಟ್‌ಗಳಲ್ಲಿ ಹೈ ಅಲರ್ಟ್ ವಹಿಸಲಾಗುತ್ತಿದೆ. ಚುನಾವಣಾಧಿಕಾರಿಗಳ ಸೂಚನೆ ಮೇರೆಗೆ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದ್ದು, ತಪಾಸಣೆ ವೇಳೆ ನಿರ್ಲಕ್ಷ್ಯ ವಹಿಸದಂತೆ ಎಚ್ಚರಿಸಲಾಗಿದೆ.

ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ 9 ರಸ್ತೆಗಳಲ್ಲಿ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುವ ಚೆಕ್‌ಪೋಸ್ಟ್ ನಿರ್ಮಿಸಲಾಗಿದ್ದು, ಪ್ರತಿದಿನ ನೂರಾರು ವಾಹನಗಳ ತಡೆದು ತಪಾಸಣೆ ನಡೆಸಲಾಗುತ್ತಿದೆ. ಇಂದಿನಿಂದ ಮೂರು ಪಾಳಿಯಲ್ಲೂ ತಪಾಸಣೆ ಚುರುಕುಗೊಳಿಸುವಂತೆ ಸೂಚನೆ ನೀಡಲಾಗಿದೆ. ಪ್ರಮುಖವಾಗಿ ಮೈಸೂರು, ಮೈಸೂರು–ನಂಜನಗೂಡು, ಮೈಸೂರು–ಮಡಿಕೇರಿ ರಸ್ತೆಯಲ್ಲಿ ತೀವ್ರ ತಪಾಸಣೆ ಪರಿಣಾಮ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಗಿದೆ. ಉಳಿದಂತೆ ಮೈಸೂರಿಂದ ಬನ್ನೂರು, ಮಹದೇವಪುರ, ಟಿ.ನರಸೀಪುರ, ಹೆಚ್.ಡಿ.ಕೋಟೆ, ಸರಗೂರು, ಕೆಆರ್‌ಎಸ್ ರಸ್ತೆಯಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ಗಳಲ್ಲೂ ಪ್ರತಿ ವಾಹನದ ಮೇಲೆ ಹದ್ದಿನ ಕಣ್ಣಿಡುವಂತೆ ಸೂಚಿಸಲಾಗಿದೆ.

ಚುನಾವಣೆ ಸಮೀಪಿಸುತ್ತಿದ್ದಂತೆ ಮತದಾರರನ್ನು ಓಲೈಸಿಕೊಳ್ಳಲು ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ವಿವಿಧ ಆಮಿಷವೊಡ್ಡಲು ಮುಂದಾಗುತ್ತವೆ ಎಂಬ ಕಾರಣಕ್ಕೆ ಪ್ರತಿಯೊಂದು ಗೂಡ್ಸ್ ವಾಹನದಲ್ಲಿ ಸಾಗಿಸುವ ಎಲ್ಲಾ ವಸ್ತುಗಳು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲು ಸೂಚಿಸಲಾಗಿದೆ. ಚುನಾವಣಾಧಿಕಾರಿಗಳ ಸೂಚನೆ ಮೇರೆಗೆ ಗೂಡ್ಸ್ ವಾಹನ ಹಾಗೂ ಹಣ ಸಾಗಿಸುವ ಅನುಮಾನದಿಂದಾಗಿ ಕಾರು ಸೇರಿದಂತೆ ಎಲ್ಲಾ ವಿಧದ ಖಾಸಗಿ ವಾಹನಗಳನ್ನು ತಪಾಸಣೆಗೊಳಪಡಿಸಲಾಗುತ್ತಿದೆ.

ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ಮಾಡುವ ಎಲ್ಲಾ ವಾಹನಗಳ ಸಂಖ್ಯೆಯನ್ನು ದಾಖಲಿಸಲಾಗುತ್ತಿದೆ. ಅಲ್ಲದೆ, ವಾಹನದಲ್ಲಿ ತಪಾಸಣೆ ಮಾಡುವ ದೃಶ್ಯ ಸಿಸಿ ಕ್ಯಾಮರಾ ಮೂಲಕ ಆಯಾ ತಾಲೂಕು ಕೇಂದ್ರದಲ್ಲಿ ತೆರೆದಿರುವ ವಿಡಿಯೋ ವೀವಿಂಗ್ ತಂಡ ಕೊಠಡಿಯಲ್ಲಿ ಪರದೆ ಮೇಲೆ ಭಿತ್ತರವಾಗುವುದರಿಂದ ತಪಾಸಣಾ ಕಾರ್ಯದಲ್ಲಿ ಲೋಪವಾಗದಂತೆ ಕಟ್ಟೆಚ್ಚರ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕಟ್ಟುನಿಟ್ಟಿನ ತಪಾಸಣೆ ನಡೆಸಲು ಉದ್ದೇಶಿಸಲಾಗಿದ್ದು, ಈ ವೇಳೆ ಕೇಂದ್ರದ ಭದ್ರತಾ ಪಡೆಯ ಸಿಬ್ಬಂದಿ ಚೆಕ್‌ಪೋಸ್ಟ್‌ಗಳಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ.



ಮೈಸೂರು–ನಂಜನಗೂಡು ಮುಖ್ಯರಸ್ತೆ ಎಪಿಎಂಸಿ ಬಳಿ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಶುಕ್ರವಾರ ವಾಹನ ತಪಾಸಣೆ ನಡೆಸುತ್ತಿರುವುದು.

> “ಮೈಸೂರು ನಗರ ವ್ಯಾಪ್ತಿಯ ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲಿ ಎಂದಿನಂತೆ ಕಟ್ಟುನಿಟ್ಟಿನ ತಪಾಸಣೆ ಮುಂದಿವರೆಸಲಾಗಿದೆ. ತಮಿಳುನಾಡು ಸೇರಿದಂತೆ ವಿವಿಧೆಡೆ ಮೊದಲ ಹಂತದ ಚುನಾವಣೆ ಮುಗಿದ ನಂತರ ಮೈಸೂರು ಭಾಗಕ್ಕೆ ಕೇಂದ್ರದ ಭದ್ರತಾ ಸಿಬ್ಬಂದಿ ಆಗಮಿಸಲಿದ್ದು, ಎಲ್ಲಾ ಚೆಕ್‌ಪೋಸ್ಟ್‌ಗಳಲ್ಲೂ ಶಸ್ತ್ರಸಜ್ಜಿತ ಭದ್ರತಾ ವ್ಯವಸ್ಥೆ ಮಾಡಲಾಗುವುದು.
> – ರಮೇಶ್ ಬಾನೋತ್, ಮೈಸೂರು ನಗರ ಪೊಲೀಸ್ ಆಯುಕ್ತ

ಇಂದು ಮೈಸೂರಿಗೆ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಭಾಗಿ

ಮೈಸೂರು, ಏ.12(ಬಿಎಲ್‌ಯು)–



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪ್ರಚಾರ ಸಭೆಗಳಲ್ಲಿ ಭಾಗವಹಿಸಲು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಾಳೆ (ಏಪ್ರಿಲ್ 13) ಮೈಸೂರಿಗೆ ಆಗಮಿಸಲಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಡೆಯುವ ಪ್ರಚಾರ ಸಭೆಯಲ್ಲಿ ಭಾಗವಹಿಸಿದ ನಂತರ ಹೆಲಿಕಾಪ್ಟರ್ ಮೂಲಕ ನಾಳೆ ಮಧ್ಯಾಹ್ನ 2 ಗಂಟೆಗೆ ಮೈಸೂರಿನ ಹುಣಸೂರಿಗೆ ಡಿ.ಕೆ.ಶಿವಕುಮಾರ್ ಆಗಮಿಸುವರು. ಹುಣಸೂರು ಟೌನ್‌ನಲ್ಲಿ ನಡೆಯುವ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಭಾಗವಹಿಸಿದ ನಂತರ, ಮಧ್ಯಾಹ್ನ 5 ಗಂಟೆಗೆ ಪಿರಿಯಾಪಟ್ಟಣದಲ್ಲಿ ನಡೆಯುವ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಕೂಡ ಭಾಗವಹಿಸಲಿದ್ದಾರೆ. ಈ ಎರಡು ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಭಾಗಿಯಾಗಲಿದ್ದಾರೆ. ಪಿರಿಯಾಪಟ್ಟಣದಿಂದ ರಸ್ತೆ ಮೂಲಕ ಮೈಸೂರಿಗೆ ಆಗಮಿಸಲಿದ್ದು, ರಾತ್ರಿ 7.45 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು. ಮಾರನೆ ದಿನ (ಏಪ್ರಿಲ್ 14) ಬೆಂಗಳೂರಿನಿಂದ ಹೆಲಿಕಾಪ್ಟರ್‌ನಲ್ಲಿ ಹೊರಟು 11.20 ಗಂಟೆಗೆ ಮಡಿಕೇರಿಗೆ ಆಗಮಿಸಲಿದ್ದಾರೆ.

ಮಡಿಕೇರಿಯ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಭಾಗವಹಿಸಿದ ನಂತರ ಡಿ.ಕೆ.ಶಿವಕುಮಾರ್ ಹೆಲಿಕಾಪ್ಟರ್ ಮೂಲಕ ತುಮಕೂರಿಗೆ ತೆರಳುವರು.


ಬೇಸಿಗೆ ಹಾಗೂ ಸಾಂಕ್ರಾಮಿಕ ರೋಗ ಹರಡುವಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕೆ.ಆರ್. ಕ್ಷೇತ್ರದ ವಿದ್ಯಾರಣ್ಯಪುರಂನಲ್ಲಿ ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೈ.ವಿ. ರವಿಶಂಕರ್, ಭಾಸ್ಕರ್, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಮಲ್ಲೇಶ್ ಮತ್ತಿತರರು ಜೊತೆಗೂಡಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಜಾಗೃತಿ ಮೂಡಿಸಿದರು. ಇದೇ ಸಂದರ್ಭದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್ ಪರ ಮತಯಾಚಿಸಿದರು.

ಮನೆ ಮತದಾನ ಕುರಿತು ಜಿಲ್ಲಾ ಚುನಾವಣಾಧಿಕಾರಿಗಳ ಸಭೆ



ಮೈಸೂರು,ಏ.12(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಗೆ ಸಕಲ ಸಿದ್ಧತೆ ನಡೆಸುತ್ತಿರುವ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯು, ಸತತ ಸಭೆ, ತರಬೇತಿಗಳ ಮೂಲಕ ಅಧಿಕಾರಿ, ಸಿಬ್ಬಂದಿ ವರ್ಗವನ್ನು ಸಜ್ಜುಗೊಳಿಸುತ್ತಿದೆ.

ಶಾಂತಿಯುತ, ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳು ಸಿದ್ಧತೆ ನಡೆಸುತ್ತಿದ್ದಾರೆ. ಪ್ರತಿದಿನ ಮತದಾನದ ಬಗ್ಗೆ ಮತದಾರರಿಗೆ ವಿವಿಧ ರೀತಿಯಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಜೊತೆಗೆ ಅಧಿಕಾರಿ, ಸಿಬ್ಬಂದಿ ವರ್ಗಕ್ಕೂ ತರಬೇತಿಗೊಳಿಸಲಾಗುತ್ತಿದೆ. ಅಂತೆಯೇ ಗುರುವಾರ ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು. ಆ ಮೂಲಕ ಮನೆ ಮನೆ ಮತದಾನದ ಬಗ್ಗೆ ಪ್ರಸೀಡಿಂಗ್ ಅಧಿಕಾರಿ ವರ್ಗದ ಜೊತೆ ಚರ್ಚಿಸಿ, ಸದರಿ ಪ್ರಕ್ರಿಯೆಯ ಪ್ರಗತಿ ಪರಿಶೀಲಿಸಿ, ಹಲವು ಸೂಚನೆಗಳನ್ನೂ ನೀಡಿದರು.

ಚುನಾವಣೆ ಬಳಿಕ ಪೆನ್‌ಡ್ರೈವ್ ಬಾಂಬ್; ಸ್ವ ಪಕ್ಷದವರ ವಿರುದ್ಧವೇ ಹರಿಪ್ರಸಾದ್ ಗುಡುಗು

ಬೆಳಗಾವಿ,ಏ.12– ಬೆಳಗಾವಿಯಲ್ಲಿ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪೆನ್‌ಡ್ರೈವ್ ಬಾಂಬ್ ಸಿಡಿಸಿದ್ದಾರೆ. ನಾನು ಸ್ಟಾರ್ ಕ್ಯಾಂಪೇನರ್. ನನ್ನ ಯಾರೂ ಉಪಯೋಗಿಸಿಕೊಳ್ಳಲು ಆಗುವುದಿಲ್ಲ. ನನ್ನ ಉಪಯೋಗವನ್ನು ಕಾಂಗ್ರೆಸ್ ಪಕ್ಷ ತೆಗೆದುಕೊಳ್ಳುತ್ತೆ. ವೈಯಕ್ತಿಕ ರಾಜಕಾರಣ ಬೇರೆ ಇದು ಬೇರೆ. ಇದು ಕಾಂಗ್ರೆಸ್ ಪಕ್ಷದ ದೇಶದ ರಾಜಕಾರಣ. ಏನೇ ಭಿನ್ನಾಭಿಪ್ರಾಯ ಇದ್ದರೂ ಪೆನ್‌ಡ್ರೈವ್‌ನಲ್ಲಿಟ್ಟು ಆಮೇಲೆ ಹೇಳ್ತಿನಿ ಎಂದಿದ್ದಾರೆ.

ಹರಿಪ್ರಸಾದ್ ಉಪಯೋಗ ಮಾಡಿ ಬಿಟ್ಟು ಬಿಡ್ತಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಅದೇನೂ ತೊಂದರೆ ಇಲ್ಲಾ. ನಾನು ಕಾಂಗ್ರೆಸ್ ಪಕ್ಷದ ಸೇವಾದಳದಿಂದ ಬೆಳೆದು ಬಂದವನು. ಯೂಸ್ ಮಾಡಿ ಬಿಡೋದು ಬೇರೆ ಪ್ರಶ್ನೆ. ನಾವು ಕಾಂಗ್ರೆಸ್ ಪಕ್ಷಕ್ಕೆ ಬಂದಿರೋದು ಪಕ್ಷ ನನ್ನನ್ನು ಯೂಸ್ ಮಾಡಲಿ ಅಂತ. ಬೇರೆ ಯಾರಿಗೂ ನಾನು ಯೂಸ್ ಆಗಲು ಬಿಟ್ಟೇ ಇಲ್ಲ. ದೆಹಲಿಯಿಂದ ರಾಜಕಾರಣ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷಕ್ಕಾಗಿ ಮಾಡಿದ್ದೇನೆ ಎಂದರು. ಹರಿಪ್ರಸಾದ್ ಬೆಳೆಸಿದವರೇ ಸಚಿವರಾಗಿದ್ದಾರೆ ಎಂಬ ವಿಚಾರಕ್ಕೆ, ನಾನು ಬೆಳೆಸಿದವರು ಬರೀ ಸಚಿವರಲ್ಲಾ ಇನ್ನು ಏನೇನೋ ಆಗಿದ್ದಾರೆ. ಅದಕ್ಕೆ ಎಲ್ಲವನ್ನೂ ಪೆನ್‌ಡ್ರೈವ್‌ನಲ್ಲಿ ಇಟ್ಟಿದ್ದೇನೆ. ಚುನಾವಣೆ ಆದ ಮೇಲೆ



ಇಲ್ಲೇ ಬಂದು ಸುದ್ದಿಗೋಷ್ಠಿ ನಡೆಸುತ್ತೇನೆ. ರಾಜಕಾರಣದಲ್ಲಿ ಇದ್ದಾಗ ಅವೆಲ್ಲ ಬರುತ್ತಾ ಇರುತ್ತವೆ. ರಾಜಕಾರಣದಲ್ಲಿ ಹಲವಾರು ಮುಖವಾಡಗಳನ್ನು ನಾವು ನೋಡಬೇಕಾಗುತ್ತೆ. ಯಾರಾದರೂ ಏನೋ ಮಾಡಿದರೆ ಅದಕ್ಕೆ ಉತ್ತರ ಕೊಡಲು ಆಗಲ್ಲ. ನನ್ನ ವೈಯಕ್ತಿಕ ನಿಷ್ಠೆ ಕಾಂಗ್ರೆಸ್ ಪಕ್ಷ, ತ್ರಿವರ್ಣ ಧ್ವಜ, ಎಐಸಿಸಿ ಅಧ್ಯಕ್ಷರ ಕುರ್ಚಿಗೆ. ಚುನಾವಣೆ ಮುಗಿಯುವವರೆಗೂ ಭಿನ್ನಾಭಿಪ್ರಾಯ ಪೆನ್‌ಡ್ರೈವ್‌ನಲ್ಲಿಟ್ಟು ಬಳಿಕ ಬಹಿರಂಗ ಮಾಡುತ್ತೇನೆ ಎನ್ನುವ ಮೂಲಕ ಸ್ವ ಪಕ್ಷದವರ ವಿರುದ್ಧವೇ ಹರಿಪ್ರಸಾದ್ ಬಾಂಬ್ ಸಿಡಿಸಿದ್ದಾರೆ.

ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಬಿರುಸಿನ ಪ್ರಚಾರ

ಶಾಸಕ ಕೆ.ಹರೀಶ್‌ಗೌಡ ಸಾಥ್


ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮೈಸೂರಿನ ಚಾಮರಾಜ ಕ್ಷೇತ್ರದಲ್ಲಿ ಶುಕ್ರವಾರ ಬಿರುಸಿನ ಪ್ರಚಾರ ಮಾಡಿದರು. ಶಾಸಕ ಕೆ.ಹರೀಶ್‌ಗೌಡ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.12(ಬಿಎಲ್‌ಯು)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಇಂದು ನಗರದ ಚಾಮರಾಜ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿ ಭರ್ಜರಿ ಪ್ರಚಾರ ನಡೆಸಿದರು. ಕೆಲವೆಡೆ ತೆರೆದ ವಾಹನದಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರೆ, ಹಲವೆಡೆ ಮನೆ ಮನೆಗೆ ತೆರಳಿ ಮತಯಾಚಿಸಿದರು. ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಲಕ್ಷ್ಮಣಗೆ ಸಾಥ್ ನೀಡಿದರು.

ನಗರದ ಹೆಬ್ಬಾಳಿನ ಲಕ್ಷ್ಮಿಕಾಂತ ನಗರದ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಲಕ್ಷ್ಮಣ ಹಾಗೂ ಹರೀಶ್ ಗೌಡ ಇಂದು ಪ್ರಚಾರ ಕಾರ್ಯ ಆರಂಭಿಸಿದರು. ತರುವಾಯ ಸುಬ್ರಹ್ಮಣ್ಯನಗರ, ಮಂಚೇಗೌಡನ ಕೊಪ್ಪಲಿನಲ್ಲಿ ಬಿರುಸಿನ ಪ್ರಚಾರ ನಡೆಸಿದರು. ವಿಜಯನಗರದ ಮೂಲಕ ಸಾಗಿ ಹೆಬ್ಬಾಳಿನ ಸೂರ್ಯ ಬೇಕರಿ ಬಳಿ ಅಂಗಡಿಗಳಿಗೆ ಭೇಟಿ ನೀಡಿ ತಮ್ಮನ್ನು ಬೆಂಬಲಿಸುವಂತೆ ವ್ಯಾಪರಸ್ಥರಲ್ಲಿ ಮನವಿ ಮಾಡಿದರು. ಹೆಬ್ಬಾಳು, ಲೋಕನಾಯಕನಗರ, ಸಂಜೀವಿನಿ ವೃತ್ತ, ಮೇಟಗಳ್ಳಿಯಲ್ಲಿ ಬೈಕ್ ರ್‍ಯಾಲಿಯಲ್ಲಿ ಲಕ್ಷ್ಮಣ ಮತ್ತು ಹರೀಶ್ ಗೌಡ ಮತಯಾಚಿಸಿದರು. ಈ ವೇಳೆ ಮಹಿಳೆಯರು ಲಕ್ಷ್ಮಣಗೆ ಆರತಿ ಬೆಳಗಿ ಬೆಂಬಲ ಸೂಚಿಸಿದರು. ನಂತರ ಬಿ.ಎಂ.ಶ್ರೀನಗರ, ಕುಂಬಾರಕೊಪ್ಪಲು, ಗೋಕುಲಂ 3 ನೇ ಹಂತ, ಒಂಟಿ ಕೊಪ್ಪಲು, ಪಡುವಾರಹಳ್ಳಿ ಸೇರಿದಂತೆ ಇತರೆಡೆ ಬಿರುಸಿನ ಪ್ರಚಾರ ನಡೆಸಿ ಮತ ಕೇಳಿದರು. ನೂರಾರು ಜನರು ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

ಪ್ರತಿಯೊಂದು ಸ್ಥಳಗಳಲ್ಲಿ ನಡೆಸಿದ ಪ್ರಚಾರ ಸಭೆಯಲ್ಲಿ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಉಪಯೋಗದ ಬಗ್ಗೆ ಜನರಿಗೆ ಮನವರಿಕೆ ಮಾಡಿ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ಲಕ್ಷ್ಮಣ, ರಾಜ್ಯ ಕಾಂಗ್ರೆಸ್ ಸರ್ಕಾರ ಚಾಮರಾಜ ಕ್ಷೇತ್ರದಲ್ಲಿ 900 ಕೋಟಿ ರೂಪಾಯಿಯಷ್ಟು ಅಭಿವೃದ್ಧಿ ಮಾಡಿದೆ. ಸ್ಥಳಿಯ ಕಾಂಗ್ರೆಸ್ ಶಾಸಕರು ಜನರ ಕಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ಸಂಸದನಾಗಿ ಆಯ್ಕೆಯಾದರೆ ನಿಮ್ಮ ಸಮಸ್ಯೆಗಳಿಗೆ ನಾನು ಕೂಡ ಸ್ಪಂದಿಸುತ್ತೇನೆ ಎಂದು ಭರವಸೆ ನೀಡಿದರು. ಸುಳ್ಳು ಹೇಳಿ ಪ್ರಚಾರ ಮಾಡುತ್ತಿಲ್ಲ. ಮಾಡಿರುವ ಅಭಿವೃದ್ಧಿಯನ್ನು ಮನದಟ್ಟು ಮಾಡಿ ಮತ ಕೇಳುತ್ತಿದ್ದೇವೆ. ಎಲ್ಲೆಡೆ ಜನರಿಂದ ಉತ್ತಮ ಪ್ರತಿಕ್ರಿಯೆ ಕೂಡ ವ್ಯಕ್ತವಾಗುತ್ತಿದೆ. ನಮ್ಮ ಯೋಜನೆ ನಿಜವಾಗಿಯೂ ಅನುಕೂಲವಾಗಿದ್ದರೆ ನಮ್ಮ ಜನರು ಕಾಂಗ್ರೆಸ್ ಪಕ್ಷ ಕೈ ಬಿಡುವುದಿಲ್ಲ ಎಂಬ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಶಾಸಕ ಹರೀಶ್ ಗೌಡ, ಚಾಮರಾಜ ಕ್ಷೇತ್ರಕ್ಕೆ ಕಾಂಗ್ರೆಸ್ ಸರ್ಕಾರ ಬಹಳಷ್ಟು ಕೊಡುಗೆ ನೀಡಿದೆ. ಇದಿರಿಂದ ನಾವು ಪ್ರಚಾರಕ್ಕೆ ಹೋದ ಸ್ಥಳಗಳಲ್ಲಿ ಜನರಿಂದ ಉತ್ತಮವಾಗಿ ಸ್ಪಂದನೆ ನೀಡುತ್ತಿದ್ದಾರೆ. ಈ ಮೂಲಕ ಜನರು ಕಾಂಗ್ರೆಸ್ ಗೆಲ್ಲಿಸಲು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಇದರಿಂದ ಕಾಂಗ್ರೆಸ್ ಜಯಭೇರಿ ಬಾರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ಮೈಸೂರು ಮಿತ್ರ ಶನಿವಾರ 13 ಏಪ್ರಿಲ್ 2024

ಮಂಡ್ಯಕ್ಕೆ ಕುಮಾರಸ್ವಾಮಿ, ಇಂಡಿಯಾಕ್ಕೆ ಮೋದಿ ಬೇಕು

ಮಂಡ್ಯದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಕರೆ

ಮಂಡ್ಯ,ಏ.12– ದೇಶದಲ್ಲಿ ವಿಷ ಬೀಜ ಬಿತ್ತುತ್ತಿರುವ ಕಾಂಗ್ರೆಸ್ ಪಕ್ಷವನ್ನು ಬುಡ ಸಮೇತ ಕಿತ್ತೊಗೆಯಬೇಕು. ಕಾಂಗ್ರೆಸ್‌ನಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಮುಂದಿನ ಲೋಕಸಭಾ ಚುನಾವಣೆಯಲ್ಲಿ ಮಂಡ್ಯಕ್ಕೆ ಕುಮಾರಸ್ವಾಮಿ, ದೇಶಕ್ಕೆ ಮೋದಿ ಆಯ್ಕೆ ಅನಿವಾರ್ಯವಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕರೆ ನೀಡಿದರು.

ಏ.14ರಂದು ಮೈಸೂರಿಗೆ ಮೋದಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಶುಕ್ರವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪೂರ್ವಭಾವಿ ಸಭೆ ಹಾಗೂ ಎನ್‌ಡಿಎ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಪರ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಅಧಿಕಾರಕ್ಕಾಗಿ ಮೋದಿ ಮತ್ತು ರಾಹುಲ್‌ಗಾಂಧಿ ನಡುವೆ ಪೈಪೋಟಿ ನಡೆಯುತ್ತಿದೆ. ಜನರು ಮೋದಿ ಎಂದು ಕೂಗುತ್ತಿದ್ದರೆ, ಕಾಂಗ್ರೆಸ್ಸಿಗರು ಮಾತ್ರ ರಾಹುಲ್ ಎಂದು ಹೇಳಲು ಅಂಜಿಕೆ ಪಡುತ್ತಿದ್ದಾರೆ. ಇದು ಕಾಂಗ್ರೆಸ್‌ನ ದಯನೀಯ ಸ್ಥಿತಿಗೆ ಕೈಗನ್ನಡಿಯಾಗಿದೆ ಎಂದು ಲೇವಡಿ ಮಾಡಿದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿಯಾಗಿ ಕುಮಾರಸ್ವಾಮಿ ಸ್ಪರ್ಧಿಸಿದ್ದಾರೆ. ಅವರ ವಿರುದ್ಧ ಕಂಟ್ರಾಕ್ಟರ್ ಸ್ಟಾರ್ ಚಂದ್ರು ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ಮಂಡ್ಯ ಜನ ಹಣಕ್ಕೆ ಮರಳಾಗಲ್ಲ. ಮಂಡ್ಯದಲ್ಲಿ ಜನರ ಸೇವೆಗಾಗಿ ರೈತನ ಮಗ ಬಂದಿದ್ದಾರೆ. ಕುಮಾರಸ್ವಾಮಿ ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಕೆರಗೋಡಿನ ಹನುಮ ಧ್ವಜ ಸೇರಿದಂತೆ ಅನೇಕ ವಿವಾದಗಳು ತಲೆ ಎತ್ತಿವೆ. ಜಾತಿ–ಜಾತಿಗಳ ಹಾಗೂ ಧರ್ಮ–ಧರ್ಮಗಳ ನಡುವೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದೆ. ಒಕ್ಕಲಿಗ ಸಮುದಾಯದ ಬಗ್ಗೆ ಕಾಂಗ್ರೆಸ್‌ಗೆ ದಿಢೀರ್ ಪ್ರೀತಿ ಬಂದಿದ್ದು, ಜಾತಿ ಗಣತಿ ಮಾಡುವ ಮೂಲಕ ರಾಜ್ಯದ ಮುಂಚೂಣಿ ಸಮುದಾಯವಾದ ಒಕ್ಕಲಿಗ ಸಮುದಾಯವನ್ನು 6ನೇ ಸ್ಥಾನಕ್ಕೆ ತಳ್ಳುವ ಮೂಲಕ ಸಮುದಾಯಕ್ಕೆ ಅಪಮಾನ ಮಾಡಿದೆ ಎಂದು ಕಿಡಿಕಾರಿದರು.

ಸಂಸದ ಪ್ರತಾಪ್‌ಸಿಂಹ ಮಾತನಾಡಿ, ಪ್ರಧಾನಿ ಮೋದಿ ಮೂರನೇ ಬಾರಿ ಅಧಿಕಾರ ಹಿಡಿಯುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಕಾವೇರಿ ಕಾಯಲು ಮಂಡ್ಯದಿಂದ ಕುಮಾರಸ್ವಾಮಿ ಅವರನ್ನು ಕಳುಹಿಸಬೇಕು. ಕುಮಾರಸ್ವಾಮಿ ಮೋದಿ ಸಂಪುಟದಲ್ಲಿ ಮಂತ್ರಿಗಳಾಗಿ ಕಾವೇರಿ ಸಮಸ್ಯೆಗೆ ಶಾಶ್ವತವಾಗಿ ಪರಿಹಾರ ಒದಗಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾವೇರಿಗಾಗಿ ಮಾಜಿ ಪ್ರಧಾನಿ ದೇವೇಗೌಡರು ಇಳಿವಯಸ್ಸಿನಲ್ಲಿ ಏರು ಧ್ವನಿಯಲ್ಲಿ ಮಾತನಾಡುತ್ತಾರೆ. ಆ ತಾಕತ್ತನ್ನು ಸಿದ್ದರಾಮಯ್ಯ ಎಂದಾದರೂ ಪ್ರದರ್ಶಿಸಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆದಾಗಲೆಲ್ಲ ರಾಜ್ಯದಲ್ಲಿ ಬರ ತಾಂಡವವಾಡಲಿದ್ದು, ಅದೇ ಯಡಿಯೂರಪ್ಪ, ಕುಮಾರಸ್ವಾಮಿ ಮುಖ್ಯಮಂತ್ರಿಯಾದರೆ ರಾಜ್ಯದಲ್ಲಿ ಮಳೆ ಬೆಳೆ ಹೆಚ್ಚಾಗುತ್ತದೆ ಎಂದು ಹೇಳಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಜೆಡಿಎಸ್ ಮತ್ತು ಬಿಜೆಪಿಯ ಫಲಾನುಭವಿ ರಾಜಕಾರಣಿ. ದೇವೇಗೌಡರು ಕೊಟ್ಟ ರಾಜಕೀಯ ಭಿಕ್ಷೆಯಿಂದ ನಾಯಕರಾಗಿದ್ದಾರೆ. ಅದೇ ಭಿಕ್ಷೆ ಪಡೆದು ದೇವೇಗೌಡರ ಕುಟುಂಬದ ಬಗ್ಗೆ ಕೇವಲವಾಗಿ ಮಾತನಾಡುವುದು ನಾಚಿಕೆಗೇಡಿನ ಸಂಗತಿಯಾಗಿದೆ ಎಂದು ಕಿಡಿಕಾರಿದರು.

ವೇದಿಕೆಯಲ್ಲಿ ರಾಜ್ಯ ಜೆಡಿಎಸ್ ಕಾರ್ಯಾಧ್ಯಕ್ಷ ಆಲ್ಕೊಡು ಹನುಮಂತಪ್ಪ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಉಭಯ ಪಕ್ಷಗಳ ಮುಖಂಡರಾದ ಅಬ್ಬಾಸ್ ಆಲಿ ಬೋಹ್ರಾ, ಡಾ.ಸಿದ್ದರಾಮಯ್ಯ, ಬಿ.ಆರ್.ರಾಮಚಂದ್ರು, ಸಿದ್ದರಾಮೇಗೌಡ, ಕೆ.ಎಸ್.ನಂಜುಂಡೇಗೌಡ, ವಿದ್ಯಾನಾಗೇಂದ್ರ, ಇಂಡುವಾಳು ಸಚ್ಚಿದಾನಂದ, ಅಶೋಕ್ ಜಯರಾಂ, ಮೈವಿ.ರವಿ ಶಂಕರ್, ಮುನಿರಾಜು, ರಘುನಂದನ್, ರೂಪಾ, ಪೀಹಳ್ಳಿ ರಮೇಶ್ ಸೇರಿದಂತೆ ಹಲವರಿದ್ದರು.



ಶುಕ್ರವಾರ ಮಂಡ್ಯದ ಖಾಸಗಿ ಹೋಟೆಲ್‌ನಲ್ಲಿ ನಡೆದ ಪೂರ್ವಭಾವಿ ಸಭೆ ಹಾಗೂ ಎನ್‌ಡಿಎ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಪರ ಪ್ರಚಾರ ಸಭೆಯನ್ನು ವಿಪಕ್ಷ ನಾಯಕ ಆರ್.ಅಶೋಕ್ ಉದ್ಘಾಟಿಸುತ್ತಿರುವುದು.

> "ಕುಮಾರಸ್ವಾಮಿ ಮಂಡ್ಯ ಜಿಲ್ಲೆಯವರಲ್ಲ. ಹೊರಗಿನ ಅಭ್ಯರ್ಥಿ ಎಂದು ಕಾಂಗ್ರೆಸ್ ಅಪಪ್ರಚಾರ ಮಾಡುತ್ತಿದೆ. ಅಲಹಾಬಾದ್‌ನ ಇಂದಿರಾಗಾಂಧಿ ಚಿಕ್ಕಮಗಳೂರಿನಲ್ಲಿ, ಇಟಲಿಯ ಸೋನಿಯಾಗಾಂಧಿ ಬಳ್ಳಾರಿಯಲ್ಲಿ, ದೆಹಲಿಯಲ್ಲಿ ಜನಿಸಿದ ರಾಹುಲ್‌ಗಾಂಧಿ ವೈನಾಡಿನಲ್ಲಿ, ಮಂಗಳೂರಿನ ವೀರಪ್ಪಮೊಯ್ಲಿ ಚಿಕ್ಕಬಳ್ಳಾಪುರದಲ್ಲಿ ಸ್ಪರ್ಧಿಸಬಹುದು. ಆದರೆ ಮಂಡ್ಯ ಜಿಲ್ಲೆಯ ರೈತರಿಗಾಗಿ, ಕಾವೇರಿಗಾಗಿ ದಶಕಗಳ ಕಾಲ ಹೋರಾಡಿದ ಮಣ್ಣಿನ ಮಗ ಮಾಜಿ ಪ್ರಧಾನಿ ದೇವೇಗೌಡರ ಪುತ್ರ ಕುಮಾರಸ್ವಾಮಿ ಸ್ಪರ್ಧಿಸಿದರೆ ತಪ್ಪೇ – ಪ್ರತಾಪ್‌ಸಿಂಹ, ಸಂಸದ

ಚೆಕ್ ಪೋಸ್ಟ್ ಪರಿಶೀಲನೆ

ಮಂಡ್ಯ,ಏ.12– ಜಿಲ್ಲಾಧಿಕಾರಿ ಡಾ: ಕುಮಾರ ಅವರು ಇಂದು ಕೆ.ಆರ್.ಪೇಟೆ ತಾಲ್ಲೂಕಿನ ಆನೆಗೋಳ ಚೆಕ್ ಪೋಸ್ಟ್ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚೆಕ್ ಪೋಸ್ಟ್ ಸಿಬ್ಬಂದಿಗಳಿಂದ ನಿರ್ವಹಿಸುತ್ತಿರುವ ಪ್ರತಿದಿನದ ವರದಿ ಹಾಗೂ ಮಾಹಿತಿ ಪಡೆದುಕೊಂಡರು. ಎಚ್ಚರಿಕೆ ಹಾಗೂ ಜವಾಬ್ದಾರಿಯುತವಾಗಿ ವಾಹನಗಳ ತಪಾಸಣೆ ನಡೆಸಿ ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್ ಯತೀಶ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಗ್ಯಾರಂಟಿಗಳು ದೇಶದ ಮನೆ ಮಾತಾಗಿವೆ

ಮಂಡ್ಯ ಜಿಲ್ಲೆಯಾದ್ಯಂತ ಭರ್ಜರಿ ಚುನಾವಣಾ ಪ್ರಚಾರ ನಡೆಸಿದ ಸ್ಟಾರ್ ಚಂದ್ರು

ಮಂಡ್ಯ,ಏ.12– ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಗ್ಯಾರಂಟಿಗಳು ದೇಶದೆಲ್ಲೆಡೆ ಮನೆಮಾತಾಗಿದೆ. ಈ ಬಾರಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರಲಿದ್ದು, ನಮ್ಮ ರಾಷ್ಟ್ರೀಯ ನಾಯಕರು ಘೋಷಣೆ ಮಾಡಿರುವ 25 ಭರವಸೆಗಳನ್ನು ಈಡೇರಿಸಿ ಬಡ ಜನರ ಬದುಕನ್ನು ಮೇಲಕ್ಕೆತ್ತುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು.

ಮಂಡ್ಯದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಮಾತನಾಡಿ, ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಜನರ ಬದುಕನ್ನು ಬದಲಿಸುತ್ತಿವೆ ಎಂಬುದಕ್ಕೆ ಗೃಹಲಕ್ಷ್ಮಿ ಹಣದಿಂದ ಟಿವಿ, ಫ್ರಿಡ್ಜ್ ಕೊಂಡುಕೊಳ್ಳುತ್ತಿರುವುದು, ವಿದ್ಯಾಭ್ಯಾಸಕ್ಕೆ ಅನುಕೂಲ ಆಗುತ್ತಿರುವುದೇ ನಿದರ್ಶನ. ಗ್ಯಾರಂಟಿಗಳು ಜನರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡುತ್ತಿದೆ ಎಂದರು.

ಕಾಂಗ್ರೆಸ್‌ನ ಅತಿ ದೊಡ್ಡ ಶಕ್ತಿ ಅಂದರೆ ಕಾರ್ಯಕರ್ತರು. ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸುವುದರ ಜೊತೆಗೆ ಪಕ್ಷದ ಜನಪರ ಕಾರ್ಯಕ್ರಮಗಳನ್ನು ಪ್ರತಿ ಮನೆಗೆ ತಲುಪಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಶ್ರಮ ಮತ್ತು ಜನರ ಆಶೀರ್ವಾದದಿಂದ ಗೆಲುವಿನ ದಡ ಮುಟ್ಟುತ್ತೇನೆ. ಇದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಿದರು.

ಕಾಂಗ್ರೆಸ್ ಬಡವರ ರೈತ ಪರ. ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ಬಡ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ, ನರೇಗಾದ ಕೂಲಿ ಹಣ 400 ರೂಗೆ ಹೆಚ್ಚಳ ಮಾಡುವುದರ ಜೊತೆಗೆ ರೈತರ ಸಾಲಮನ್ನಾ ಮಾಡಲಾಗುವುದು. ಜಾತಿಗಣತಿ ನಡೆಸಿ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಮೇಲಕ್ಕೆತ್ತುವ ಕೆಲಸ ಕಾಂಗ್ರೆಸ್ ಮಾಡಲಿದೆ ಎಂದರು.

ಪ್ರಚಾರದಲ್ಲಿ ಮಂಡ್ಯ ಶಾಸಕ ರವಿಕುಮಾರ್, ಮಾಜಿ ಶಾಸಕ ಹೆಚ್.ಬಿ. ರಾಮು, ಮನ್‌ಮುಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಯೋಗೇಶ್, ಕೆಪಿಸಿಸಿ ಜಿಲ್ಲಾ ಕಾರ್ಯದರ್ಶಿ ಚಿದಂಬರ್, ಕಾಂಗ್ರೆಸ್ ಮುಖಂಡ ಕೀಲಾರ ರಾಧಾಕೃಷ್ಣ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಅಂಜನಾ ಶ್ರೀಕಾಂತ್ ಸೇರಿದಂತೆ ಹಲವರು ಜೊತೆಯಲ್ಲಿದ್ದರು.

ಬೈಕ್ ರ್‍ಯಾಲಿ: ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಮಂಡ್ಯದಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದ ವೇಳೆ ನೂರಾರು ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿ ಮತದಾರರ ಗಮನ ಸೆಳೆದರು. ಚಿಕ್ಕ ಮಂಡ್ಯದಿಂದ ಆರಂಭವಾದ ಬೈಕ್ ರ್‍ಯಾಲಿ ನಾನಾ ಗ್ರಾಮಪಂಚಾಯತಿಗಳಲ್ಲಿ ಸಾಗಿತು.

ಎಲ್ಲೆಲ್ಲಿ ಪ್ರಚಾರ: ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ (ಸ್ಟಾರ್ ಚಂದ್ರು) ಅವರು ಚಿಕ್ಕಮಂಡ್ಯ, ಗೋಪಾಲಪುರ, ಸಾತನೂರು, ಹುಲಿವಾನ, ಕೆರಗೋಡು, ಬಿಳಿದೇಗಲು, ಉಪ್ಪರಕನಹಳ್ಳಿ, ದೊಡ್ಡ ಗರುಡನಹಳ್ಳಿ, ಬೇಬಿ, ಮುತ್ತೇಗೆರೆ, ಬಸರಾಳು, ಕಂಬದಹಳ್ಳಿ, ಶಿವಪುರ, ಚಂದಗಾಲು, ಹಲ್ಲೇಗೆರೆ, ಮಾರಗೌಡನಹಳ್ಳಿ, ಹೊಡೆಘಟ್ಟ, ಕೀಲಾರ, ಅಲಕೆರೆ, ಹನಕೆರೆ, ಗೌಡಗೆರೆ, ಕನ್ನಲಿ, ಬೂದನೂರು ಗ್ರಾಮ ಪಂಚಾಯತಿಗಳಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಗ್ಯಾರಂಟಿ ಕಾರ್ಡ್‌ಗಳ ವಿತರಣೆ: ಚುನಾವಣಾ ಪ್ರಚಾರದ ಜೊತೆಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರ ಸಹಿಯುಳ್ಳ ಗ್ಯಾರಂಟಿ ಕಾರ್ಡ್‌ಗಳನ್ನು ಕಾರ್ಯಕರ್ತರು ಗ್ರಾಮದ ಪ್ರತಿ ಮನೆಗಳಿಗೆ ವಿತರಣೆ ಮಾಡಿದರು.

ಪೂರ್ಣ ಕುಂಭ ಸ್ವಾಗತ: ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಪ್ರಚಾರಕ್ಕೆ ತೆರಳಿದ ಕಡೆಯಲೆಲ್ಲಾ ಗ್ರಾಮದ ಮಹಿಳೆಯರು ಪೂರ್ಣ ಕುಂಭ ಹೊತ್ತು ಸ್ವಾಗತಿಸಿದರು. ಬಿರುಬಿಸಿಲಿನಲ್ಲೂ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜನಸ್ತೋಮ ಕಾಂಗ್ರೆಸ್ ಕಾರ್ಯಕರ್ತರ ಉತ್ಸಾಹವನ್ನು ಹಿಮ್ಮಡಿಗೊಳಿಸಿತು.

ಕಾಂಗ್ರೆಸ್ ಶಕ್ತಿ ಪ್ರದರ್ಶನ: ಧ್ವಜ ಪ್ರಕರಣದಲ್ಲಿ ರಾಜ್ಯದ ಗಮನಸೆಳೆದಿದ್ದ ಮಂಡ್ಯ ಜಿಲ್ಲೆಯ ಕೆರ ಗೋಡು ಗ್ರಾಮದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರ ಮಣೇಗೌಡ (ಸ್ಟಾರ್ ಚಂದ್ರು) ಅವರು ಅಬ್ಬರದ ಪ್ರಚಾರ ನಡೆಸಿ ಕಾಂಗ್ರೆಸ್‌ನ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾದರು.

ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಮಹಿಳೆಯರು ಪೂರ್ಣ ಕುಂಭ ಹೊತ್ತು ಸ್ವಾಗತಿಸಿದರೆ, ಕಾರ್ಯಕರ್ತರು ಪಟಾಕಿ ಸಿಡಿಸಿ, ಜೈಕಾರ ಕೂಗುವ ಮೂಲಕ ಬರಮಾಡಿಕೊಂಡರು. ನೂರಾರು ಕಾರ್ಯಕರ್ತರು ಸರ್ಕಲ್ ನಲ್ಲಿ ಜಮೆಯಾಗಿ ಕಾಂಗ್ರೆಸ್‌ನ ಬಲ ಪ್ರದರ್ಶಿಸಿದರು.



ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಅವರು ಮಂಡ್ಯದಲ್ಲಿ ಭರ್ಜರಿ ರೋಡ್ ಶೋ ನಡೆಸಿ ಮತ ಯಾಚಿಸಿದರು.

ಶ್ರೀರಂಗಪಟ್ಟಣದಲ್ಲಿ ಕುಮಾರಸ್ವಾಮಿ ಪರ ಮತಯಾಚನೆ

ಶ್ರೀರಂಗಪಟ್ಟಣ, ಏ.12– ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಭರ್ಜರಿ ಚುನಾವಣಾ ಪ್ರಚಾರ ನಡೆಸಿ, ಮೈತ್ರಿ ಅಭ್ಯರ್ಥಿ ಮಾಜಿ ಸಿಎಂ ಕುಮಾರಸ್ವಾಮಿ ಪರ ಮತ ಯಾಚಿಸಿದರು. ಅರಕೆರೆ, ಚಿಂದೇಗೌಡನಕೊಪ್ಪಲು, ಮಂಡ್ಯ ಕೊಪ್ಪಲು, ಗೆಂಡೆ ಹೊಸಹಳ್ಳಿ, ಮಣಿಗೌಡಗೌಡನ ಹುಂಡಿ, ಮಾಡ್ರಹಳ್ಳಿ, ಬಳ್ಳೇಕೆರೆ, ನೇರಳೆಕೆರೆ, ಬೆಟ್ಟಹಳ್ಳಿ, ಆಲದಹಳ್ಳಿ, ಪೀಹಳ್ಳಿ, ಕೊಡಿಯಾಲ, ಹುಣಸನಹಳ್ಳಿ ಸೇರಿದಂತೆ ಮುಂತಾದ ಗ್ರಾಮಗಳಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರನ್ನು ಭೇಟಿ ಮಾಡಿ ಮೈತ್ರಿ ಅಭ್ಯರ್ಥಿ ಕುಮಾರಸ್ವಾಮಿ ಪರ ಅವರು ಮತಯಾಚಿಸಿದರು.

ಸ್ವ–ಗ್ರಾಮ ಅರಕೆರೆ ಗ್ರಾಮದ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಬಳಿಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮನೆ–ಮನೆಗೆ ತೆರಳಿ ಮತಯಾಚಿಸಿದರು. ನೀರಿಲ್ಲದೆ ಬರದಿಂದ ರೈತರು ಸಂಕಷ್ಟದ ಪರಿಸ್ಥಿತಿಯಲ್ಲಿ ನಲುಗಿದ್ದಾರೆ. ಬರಗಾಲದ ಬೇಗುದಿಯಿಂದ ಬಳಲುತ್ತಿರುವ ರೈತ ಹಾಗೂ ಜಾನುವಾರುಗಳ ಸಂಕಷ್ಟಕ್ಕೆ ನೆರವಾಗಬೇಕಾದ ರಾಜ್ಯ ಸರ್ಕಾರ, ಕನ್ನಂಬಾಡಿ ನದಿ ಪಾತ್ರದ ನಾಲೆಗಳಿಗೆ ನೀರು ಹರಿಸದೇ ತಮಿಳುನಾಡಿಗೆ ನೀರು ಹರಿಸಲು ಆಸಕ್ತಿ ತೋರುತ್ತಿರುವುದು ವಿಪರ್ಯಾಸದ ಸಂಗತಿ ಎಂದರು.

ಇದೇ ವೇಳೆ ಅಪಾರ ಪ್ರಮಾಣದ ಬೆಂಬಲಿಗರು ಹಾಗೂ ಮುಖಂಡರು ಪ್ರತಿ ಮನೆ–ಮನೆಗೆ ತೆರಳಿ ಮತಯಾಚಿಸಿ ಕುಮಾರಸ್ವಾಮಿಯವರನ್ನು ಹೆಚ್ಚು ಮತಗಳ ಬಹುಮತದಿಂದ ಲೋಕಸಭೆಗೆ ಆಯ್ಕೆ ಮಾಡಬೇಕೆಂದು ಮತಯಾಚಿಸಿದರು. ಯಾರೋ ಹಣವುಳ್ಳವರನ್ನು, ಕಂಟ್ರಾಕ್ಟರ್‌ಗಳನ್ನು ತಂದು ಜಿಲ್ಲೆಯ ರಾಜಕಾರಣಕ್ಕೆ ಬಿಡುತ್ತಿದ್ದಾರೆ. ಅವರಿಗೆ ಇಲ್ಲಿನ ರೈತರ ಸಂಕಷ್ಟವೇನು ಎಂದು ಗೊತ್ತಿಲ್ಲ. ರಾಜ್ಯದ ನೀರಾವರಿ ಯೋಜನೆಗಳಲ್ಲಿ ಸೂಕ್ತ ನ್ಯಾಯ ಒದಗಿಸಲು ಜೆಡಿಎಸ್ ಪಕ್ಷ ಎನ್‌ಡಿಎ ಜೊತೆ ಮೈತ್ರಿಗೆ ಮುಂದಾಗಿದೆ ಎಂದರು. ತಾಲೂಕು ಜೆಡಿಎಸ್ ಅಧ್ಯಕ್ಷ ದಶರಥ, ಕಾರ್ಯಾಧ್ಯಕ್ಷ ದೇವೇ ಗೌಡ, ಜಿ.ಪಂ.ಮಾಜಿ ಸದಸ್ಯ ಅರಕೆರೆ ಮರೀಗೌಡ, ಗಾಮನಹಳ್ಳಿ ಚಿಕ್ಕಣ್ಣ, ರಜತ್, ನೆಲಮನೆ ಗುರುಪ್ರಸಾದ್, ಅನಿಲ್, ಕಿರಣ್ ಸೇರಿದಂತೆ ಇತರರು ಇದ್ದರು.



ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಮನೆಮನೆಗೆ ತೆರಳಿ ಮತ ಯಾಚಿಸಿದರು.

ಲಕ್ನೋ ಮಣಿಸಿದ ಡೆಲ್ಲಿಗೆ ಭರ್ಜರಿ ಜಯ



ಲಕ್ನೋ, ಏ.12– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದ ಡೆಲ್ಲಿ ಕ್ಯಾಪಿಟಲ್ಸ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಭಾರತ್ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಏಕನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕ್ವಿಂಟನ್ ಡಿಕಾಕ್ 4 ಬೌಂಡರಿ ಒಳಗೊಂಡ 19 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ದೇವದತ್ ಪಡಿಕ್ಕಲ್ 3, ಮಾರ್ಕಸ್ ಸ್ಟೋಯಿನಿಸ್ 8, ನಿಕೋಲಸ್ ಪೂರನ್ 0, ದೀಪಕ್ ಹೂಡಾ 10 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ಕೆ.ಎಲ್.ರಾಹುಲ್ 1 ಸಿಕ್ಸರ್, 5 ಬೌಂಡರಿ ಒಳಗೊಂಡ 39 ರನ್ ಗಳಿಸಿ ನಿರ್ಗಮಿಸಿದರು. ನಂತರ ಜೊತೆಯಾದ ಆಯುಷ್ ಬದೋನಿ ಹಾಗೂ ಅರ್ಷದ್ ಖಾನ್ 73 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಮೊತ್ತವನ್ನು 150ರ ಗಡಿ ಮುಟ್ಟಿಸಿದರು. ಅಂತಿಮವಾಗಿ ಆಯುಷ್ ಬದೋನಿ 5 ಬೌಂಡರಿ, 1ಸಿಕ್ಸರ್ ಒಳಗೊಂಡ 55, ಅರ್ಷದ್ ಖಾನ್ 20 ರನ್ ಗಳಿಸಿದರು. ಡೆಲ್ಲಿ ಪರ ಕುಲದೀಪ್ ಯಾದವ್ 3, ಖಲೀಲ್ ಅಹಮ್ಮದ್ 2, ಇಶಾಂತ್ ಶರ್ಮಾ, ಮುಖೇಶ್ ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು.

168 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ 18.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿ ಜಯದ ನಗೆ ಬೀರಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ 8 ರನ್ ಗಳಿಸಿ ಬಹುಬೇಗ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ 6 ಬೌಂಡರಿ ಒಳಗೊಂಡ 32 ರನ್ ಗಳಿಸಿ ಪೃಥ್ವಿಶಾ ಔಟಾದರು. ನಂತರ ಜೊತೆಯಾದ ಜೇಕ್ ಫ್ರೇಸರ್–ಮ್ಯಾಕ್‌ಗುರ್ಕ್ ಹಾಗೂ ನಾಯಕ ರಿಷಬ್ ಪಂತ್ 3ನೇ ವಿಕೆಟ್‌ಗೆ 77 ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ಸನಿಹಕ್ಕೆ ತಂದರಾದರೂ, ಐಪಿಎಲ್ ಪಂದ್ಯಾವಳಿಯ ಚೊಚ್ಚಲ ಪಂದ್ಯದಲ್ಲೇ 35 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರೊ ಒಳಗೊಂಡ 55 ರನ್ ಗಳಿಸಿ ಜೇಕ್ ಫ್ರೇಸರ್–ಮ್ಯಾಕ್‌ಗುರ್ಕ್ ನಿರ್ಗಮಿಸಿದರು. ಅವರ ಹಿಂದೆಯೇ ರಿಷಬ್ ಪಂತ್ 24 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 41 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಟ್ರಿಸ್ಟಾನ್ ಸ್ಟಬ್ಸ್ 9 ಎಸೆತಗಳಲ್ಲಿ 1 ಸಿಕ್ಸರ್ ಸಹಿತ 15, ಶಾಯ್ ಹೋಪ್ 1 ಬೌಂಡರಿ ಒಳಗೊಂಡ 11 ರನ್ ಗಳಿಸಿ ತಂಡಕ್ಕೆ ಗೆಲುವು ತಂದು ಕೊಟ್ಟರು. ಲಕ್ನೋ ಪರ ರವಿ ಬಿಷ್ಣೋಯಿ 2, ನವೀನ್ ಉಲ್ ಹಕ್ ಹಾಗೂ ಯಶ್ ಠಾಕೂರ್ ತಲಾ ಒಂದೊಂದು ವಿಕೆಟ್ ಪಡೆದರು. ಕುಲದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದಿನ ಪಂದ್ಯ

[ಏ.13]

ಪಂಜಾಬ್ ಕಿಂಗ್ಸ್/ ರಾಜಸ್ಥಾನ್ ರಾಯಲ್ಸ್

ಸ್ಥಳ: ಮುಲ್ಲನ್ಪುರ್, ಚಂಡಿಗಢ ಮಹಾರಾಜ ಯಾದವೀಂದ್ರ ಸಿಂಗ್ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ

ಸಮಯ: ಸಂಜೆ 7.30ಕ್ಕೆ

ಮೈಸೂರು ನಗರದ ಅಭಿವೃದ್ಧಿಗೆ 5 ಅಂಶಗಳ ಕಾರ್ಯಕ್ರಮ

ಸರ್ಕಾರಕ್ಕೆ ಕಾಂಗ್ರೆಸ್ ಮಾಜಿ ಮೇಯರ್‌ಗಳ ಪರಿಷತ್ ಆಗ್ರಹ

ಮೈಸೂರು, ಏ.12(ಬಿಎಲ್‌ಯು)– ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು, ಪ್ರವಾಸೋದ್ಯಮ ಅಭಿವೃದ್ಧಿ ಸೇರಿದಂತೆ ಐದು ಮಹತ್ವದ ಕಾರ್ಯಕ್ರಮಗಳನ್ನು ಅತ್ಯವಶ್ಯವಾಗಿ ಅನುಷ್ಠಾನ ಮಾಡುವಂತೆ ಕಾಂಗ್ರೆಸ್ ಮಾಜಿ ಮೇಯರ್‌ಗಳ ಪರಿಷತ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಪಕ್ಷದ 15 ಮಾಜಿ ಮೇಯರ್‌ಗಳು ಭಾಗಿಯಾಗಿ ಒಕ್ಕೊರಲಿನಿಂದ ಮೈಸೂರು ನಗರದ ಈ ಪ್ರಮುಖ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಪರಿಷತ್ ಸಂಚಾಲಕ ಆರ್.ಜಿ.ನರಸಿಂಹಯ್ಯಂಗಾರ್, ಲೋಕಸಭಾ ಚುನಾವಣೆ ಸಂದರ್ಭವಾದ ಇಂದು ಸಿದ್ದರಾಮಯ್ಯ ಅವರಿಗೆ ಮನವಿ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ಎರಡನೇ ಹಂತದ ಯೋಜನೆಯು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಡಾ.ಮನಮೋಹನ್ ಸಿಂಗ್ ಸರ್ಕಾರದ ಅವಧಿಯಲ್ಲಿ ನರ್ಮ್ ಯೋಜನೆಯಲ್ಲಿ ಮಂಜೂರಾಗಿತ್ತು. ಆ ಹಣದಿಂದಲೇ ಈ ಯೋಜನೆ ಕಾರ್ಯಗತವಾಗುತ್ತಿದೆ. ಇದಕ್ಕೆ ರಾಜ್ಯ ಸರ್ಕಾರದಿಂದ ಕೂಡ ಮಂಜೂರಾತಿ ದೊರೆತಿದೆ. ಈಗ ತುರ್ತಾಗಿ ಈ ಯೋಜನೆ ಅನುಷ್ಠಾನ ಮಾಡಬೇಕೆಂದು ಆಗ್ರಹಿಸಿದರು.

ಈ ಯೋಜನೆ ಅನುಷ್ಠಾನಗೊಂಡರೆ ಮೈಸೂರು ನಗರದ ವರ್ತುಲ ರಸ್ತೆಯ ಹೊರ ಭಾಗದ ಬಡಾವಣೆಗಳಿಗೆ ಸಮರ್ಪಕ ನೀರು ದೊಯುತ್ತದೆ ಎಂದು ಒತ್ತಿ ಹೇಳಿದರು. ಮೈಸೂರಿನ ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಳವಾಗಿದೆ. ಇದರಿಂದ ಎಲ್ಲಾ ಜಂಕ್ಷನ್‌ಗಳಲ್ಲಿ ಸುಲಭ ಸಂಚಾರ ವ್ಯವಸ್ಥೆ ಇಲ್ಲದಂತಾಗಿದೆ. ಆದ ಕಾರಣ ಮೇಲು ಸೇತುವೆ ಅಥವಾ ಗ್ರೇಡ್ ಸಪರೇಟರ್ ನಿರ್ಮಾಣ ಮಾಡಬೇಕೆಂದು ನರಸಿಂಹಯ್ಯಂಗಾರ್ ಮನವಿ ಮಾಡಿದರು. ನಗರದ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು, ಘನ ತ್ಯಾಜ್ಯ ಕೂಡ ಹೆಚ್ಚು ಸಂಗ್ರಹವಾಗುತ್ತಿದೆ. ಈ ಕಾರಣದಿಂದ ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಹೊರ ವಲಯಗಳಲ್ಲಿ ನಿಗದಿತ ಸ್ಥಳ ಗುರುತಿಸಬೇಕು. ಆ ಜಾಗಗಳಲ್ಲಿ ವೈಜ್ಞಾನಿಕವಾಗಿ ಕಸ ಸಂಸ್ಕರಣೆ ಮಾಡಬೇಕು ಎಂದು ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದರು.

ನಗರದಲ್ಲಿ ದಿನ ಕಳೆದಂತೆ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ನಗರದ ಹೃದಯ ಭಾಗ ಸೇರಿದಂತೆ ಇತರೆಡೆ ವಾಹನ ನಿಲುಗಡೆಗೆ ಜಾಗದ ಕೊರತೆ ಉಂಟಾಗಿದೆ. ಆದ್ದರಿಂದ ನಗರದ ವಿವಿಧ ಸ್ಥಳಗಳಲ್ಲಿ ಪಾರ್ಕಿಂಗ್ ಸ್ಥಳ ಗುರುತಿಸಬೇಕು ಎಂದು ಒತ್ತಾಯಿಸಿದರು. ಮೈಸೂರು ವಿಶ್ವ ವಿಖ್ಯಾತ ಪ್ರವಾಸೋದ್ಯಮ ತಾಣವಾಗಿದ್ದು, ದೇಶ ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಮೈಸೂರು ನಗರದ ಕೇಂದ್ರ ಸ್ಥಳದಿಂದ 120 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಹೆಸರಾಂತ ಪ್ರವಾಸಿ ತಾಣಗಳಿವೆ. ಇದರಿಂದ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಾವಿರಾರು ಉದ್ಯೋಗ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಪ್ರವಾಸೋದ್ಯಮವನ್ನು ಮತ್ತಷ್ಟು ಅಭಿವೃದ್ಧಿ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಕಾಂಗ್ರೆಸ್ ಮಾಜಿ ಮೇಯರ್ ಪರಿಷತ್‌ನ ಎಲ್ಲಾ ಸದಸ್ಯರು ಶೀಘ್ರವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ ಎಂದು ನರಸಿಂಹಯ್ಯಂಗಾರ್ ತಿಳಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ದಕ್ಷಿಣಾಮೂರ್ತಿ, ಪ್ರಕಾಶ್, ಅನಂತ, ನಾರಾಯಣ, ಪುರುಷೋತ್ತಮ, ಬೈರಪ್ಪ, ಹೆಚ್.ಎನ್. ಶ್ರೀಕಂಠಯ್ಯ, ಅಯೂಬ್ ಖಾನ್, ಧ್ರುವಕುಮಾರ್, ಮೋದಾಮಣಿ, ಪುಷ್ಪಲತಾ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಕಾಂಗ್ರೆಸ್ ಮಾಜಿ ಮೇಯರ್‌ಗಳ ಪರಿಷತ್ ನಗರದ ಅಭಿವೃದ್ಧಿಗೆ ಅವಶ್ಯವಿರುವ ಐದು ಅಂಶಗಳ ಕಾರ್ಯಕ್ರಮ ಅನುಷ್ಠಾನಕ್ಕೆ ಒತ್ತಾಯಿಸಿದರು. ಸರ್ಕಾರಕ್ಕೆ ಸಲ್ಲಿಸುವ ಮನವಿ ಪತ್ರವನ್ನು ಈ ವೇಳೆ ಪ್ರದರ್ಶಿಸಿದರು.

ಹಾಸನದಲ್ಲಿ ಆರ್‌ಎಸ್‌ಎಸ್ ಮುಖಂಡ ವಿಜಯ್‌ಕುಮಾರ್ ಮೇಲೆ ಹಲ್ಲೆ

ಮಾಜಿ ಶಾಸಕ ಪ್ರೀತಂಗೌಡ ಬೆಂಬಲಿಗರಿಂದ ಕೃತ್ಯ ಆರೋಪ

ಹಾಸನ,ಏ12– ದುಷ್ಕರ್ಮಿಗಳ ಗುಂಪೊಂದು ಏಕಾಏಕಿ ಆರ್‌ಎಸ್‌ಎಸ್ ಮುಖಂಡ ಹಾಗೂ ಬಿಜೆಪಿ ಮಾಧ್ಯಮ ವಕ್ತಾರ ಐನೆಟ್ ವಿಜಯ್‌ಕುಮಾರ್ ಮತ್ತು ಸ್ನೇಹಿತರ ಮೇಲೆ ಶುಕ್ರವಾರ ದಾಳಿ ನಡೆಸಿದ್ದಾರೆ. ಮೊದಲಿನಿಂದಲೂ ಆರ್‌ಎಸ್‌ಎಸ್‌ನಲ್ಲಿ ಗುರುತಿಸಿಕೊಂಡಿದ್ದ ವಿಜಯ್‌ಕುಮಾರ್ ಎಂದಿನಂತೆ ತನ್ನ ಕಚೇರಿಯಲ್ಲಿ ಕೆಲಸ ಮಾಡುತ್ತಾ ಕುಳಿತಿರುವಾಗ ಏಕಾಏಕಿ ನುಗ್ಗಿರುವ 50ಕ್ಕೂ ಹೆಚ್ಚು ದುಷ್ಕರ್ಮಿಗಳ ಗುಂಪು ಗಲಾಟೆ ಮಾಡಿದೆ. ಕಚೇರಿಯ ಗಾಜು ಮತ್ತು ಕೆಲವು ಕಂಪ್ಯೂಟರ್ ಉಪಕರಣಗಳನ್ನು ಪುಡಿ ಪುಡಿ ಮಾಡಿ ಕಚೇರಿಯ ಒಳಗೆ ಕುಳಿತಿದ್ದ ವಿಜಯ್ ಕುಮಾರ್ ಮೇಲೆ ಹಲ್ಲೆ ಮಾಡಿದ್ದಾರೆ.

ವಿಜಯ್‌ಕುಮಾರ್ ಮೇಲೆ ಹಲ್ಲೆ ಮಾಡಿದ ಗುಂಪು, ಪ್ರೀತಂಗೌಡನ ಬಗ್ಗೆ ಮಾತನಾಡುತ್ತೀಯಾ? ಎಷ್ಟೋ ಧೈರ್ಯ ನಿನಗೆ ಎಂದು ಧಮ್ಕಿ ಹಾಕಿ ಗಂಭೀರವಾಗಿ ಹಲ್ಲೆ ಮಾಡಿದೆ. ತಕ್ಷಣ ವಿಜಯ್ ಕುಮಾರ್ ಸ್ನೇಹಿತರು ಆಗಮಿಸಿ ಹಲ್ಲೆ ಬಿಡಿಸಲು ಮುಂದಾದಾಗ ಅವರುಗಳ ಮೇಲೆಯೂ ಹಲ್ಲೆ ಮಾಡಿ ಗಾಯಗೊಳಿಸಲಾಗಿದೆ. ನಂತರ ಸ್ಥಳೀಯರು ಆಗಮಿಸಿ ದುಷ್ಕರ್ಮಿಗಳನ್ನು ಹಿಡಿಯಲು ಮುಂದಾದಾಗ ಅಲ್ಲಿಂದ ಎಲ್ಲರೂ ಪರಾರಿಯಾಗಿದ್ದಾರೆ ಎನ್ನಲಾಗಿದೆ.

ಘಟನೆಗೆ ಮೂಲ ಕಾರಣ ಏನು?: ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಾದ ಮೇಲೆ ಇತ್ತೀಚೆಗೆ ಸಂಸದ ಪ್ರಜ್ವಲ್ ರೇವಣ್ಣ ಅವರು ಐನೆಟ್ ವಿಜಯಕುಮಾರ್ ಮನೆಗೆ ಹೋಗಿ ಚರ್ಚೆ ಮಾಡಿದ್ದರು. ಇತ್ತ ಮಾಜಿ ಶಾಸಕರು ಕಾಂಗ್ರೆಸ್ ಅಭ್ಯರ್ಥಿ ಜೊತೆ ನಿಕಟ ಸಂಪರ್ಕದಲ್ಲಿದ್ದು, ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ಪಟೇಲ್ ಅವರನ್ನು ವಾರದ ಹಿಂದೆ ಗೌಪ್ಯ ಸ್ಥಳದಲ್ಲಿ ಭೇಟಿ ಮಾಡಿ ಬೆಂಬಲ ಸೂಚಿಸಿದ್ದರು ಎಂಬ ಆರೋಪ ಕೇಳಿ ಬಂದಿತ್ತು. ಪಕ್ಷ ವಿರೋಧಿ ಚಟುವಟಿಕೆ ಮಾಡಲಾಗುತ್ತಿದೆ ಎಂದು ಪ್ರೀತಂಗೌಡ ವಿರುದ್ಧ ಹೈಕಮಾಂಡ್‌ಗೆ ವಿಜಯಕುಮಾರ್ ದೂರು ಸಲ್ಲಿಸಿದ್ದರು ಎನ್ನಲಾಗಿದೆ. ಇದರಿಂದ ಕೆರಳಿದ್ದ ಪ್ರೀತಂ ಗೌಡ ಕೂಡಾ ಮೊನ್ನೆ ಪತ್ರಿಕಾಗೋಷ್ಠಿ ಯಲ್ಲಿ ಜೆಡಿಎಸ್‌ಗೆ ಟಾಂಗ್ ಕೊಡುವ ಮೂಲಕ ಪರೋಕ್ಷವಾಗಿ ವಿಜಯ್ ಕುಮಾರ್‌ಗೂ ಎಚ್ಚರಿಕೆ ರವಾನಿಸಿದ್ದರು.

ಐನೆಟ್ ವಿಜಯ್ ಕುಮಾರ್ ಹಾಗೂ ಪ್ರೀತಂ ಗೌಡ ನಡುವೆ ಮುಸುಕಿನ ಗುದ್ದಾಟ ನಡೆದಿತ್ತು. ಮೈತ್ರಿಯಾದ ಬಳಿಕ ಜೆಡಿಎಸ್‌ಗೆ ಬೆಂಬಲ ಸೂಚಿಸುವ ಮೂಲಕ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದ ವಿಜಯ್ ಕುಮಾರ್ ಮೇಲೆ ದಾಳಿ ಮಾಡಿಸಿ ಮಾಜಿ ಶಾಸಕರು ಸೇಡು ತೀರಿಸಿಕೊಂಡಿದ್ದಾರೆ ಎಂಬ ಮಾತುಗಳು ಸ್ಥಳೀಯರಲ್ಲಿ ಕೇಳಿಬಂದಿವೆ. ಸ್ಥಳಕ್ಕೆ ನಗರ ಪೊಲೀಸ್ ಠಾಣೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಗಾಯಾಳುಗಳನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದು, ದುಷ್ಕರ್ಮಿಗಳ ಹುಡುಕಾಟಕ್ಕೆ 3 ತಂಡ ರಚಿಸಲಾಗಿದೆ.



ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಏ.12– ಮೈಸೂರಿನ ಕೃಷ್ಣಮೂರ್ತಿಪುರಂನ ಎಂಎಂಕೆ ಮತ್ತು ಎಸ್‌ಡಿಎಂ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಎಂ.ಎಸ್. ಬಾಂಧವಿ ಅವರು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 578 ಅಂಕ (96%) ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಬಾಂಧವಿ, ಮೈಸೂರಿನ ವಕೀಲರಾದ ಸಾಗರೆ ಎನ್.ಶಿವಕುಮಾರ್ ಮತ್ತು ಸೌಮ್ಯ ಎಂ.ಎಸ್. ದಂಪತಿ ಪುತ್ರಿ.



ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷರೂ ಆದ ಹಿರಿಯ ವಕೀಲ ಸಿ. ಅಪ್ಪಾಜಿಗೌಡರ ಹುಟ್ಟುಹಬ್ಬದ ಅಂಗವಾಗಿ ಅವರನ್ನು ತೊಣಚಿಕೊಪ್ಪಲು ಬಿಸಿಲು ಮಾರಮ್ಮ ದೇವಸ್ಥಾನದ ಗುಡ್ಡಪ್ಪ ಡಿ.ಲಿಂಗಪ್ಪ ಸನ್ಮಾನಿಸಿದರು. ಈ ವೇಳೆ ಕನ್ನೆಗೌಡಕೊಪ್ಪಲಿನ ಗ್ರಾಮಸ್ಥರು ಶುಭಾಶಯ ಕೋರಿದರು. ವಿಕ್ರಾಂತ್ ಪಿ.ದೇವೇಗೌಡ, ಚಂದ್ರು, ಚೇತನ್, ಮಾದಪ್ಪ, ಕೃಷ್ಣಪ್ಪ, ಎಳನೀರು ರಾಮು, ದೇವು (ಪ್ರದೀಪ) ಮುಂತಾದವರಿದ್ದರು



ಭುಗಿಲೆದ್ದ ಧೂಳು; ಓವೆಲ್ ಮೈದಾನದ ಬದಲು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆದ ಎಸ್‌ಪಿಜಿ ತಂಡವಿದ್ದ ಹೆಲಿಕಾಪ್ಟರ್

ನಾಳೆ ಮೈಸೂರಿಗೆ ಪ್ರಧಾನಿ ಮೋದಿ ಭೇಟಿ ಹಿನ್ನೆಲೆಯಲ್ಲಿ ಓವೆಲ್ ಮೈದಾನದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಾಣ


ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ಶುಕ್ರವಾರ ಬೆಳಗ್ಗೆ ಹೆಲಿಪ್ಯಾಡ್ ನಿರ್ಮಾಣ ಮಾಡಿರುವುದು.


ಧೂಳಿನಿಂದಾಗಿ ಲ್ಯಾಂಡ್ ಆಗದೇ ವಾಪಸ್ಸಾದ ಹೆಲಿಕಾಪ್ಟರ್.


ಧೂಳಿನಿಂದಾಗಿ ಪರದಾಡಿದ ವಾಹನ ಸವಾರರು.

ಮೈಸೂರು, ಏ.12(ಎಂಟಿವೈ)–ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಏ.14ರಂದು ಮೈಸೂರಿಗೆ ಆಗಮಿಸುತ್ತಿದ್ದಾರೆ. ಪ್ರಧಾನಿ ಈ ಪ್ರಚಾರ ಸಭೆಗೆ ಆಗಮಿಸುವ ಹೆಲಿಕಾಪ್ಟರ್‌ಗೆ ಓವೆಲ್ ಮೈದಾನದಲ್ಲಿ ಲ್ಯಾಂಡಿಂಗ್ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪೂರ್ವ ತಯಾರಿಗೆ ಎಸ್‌ಪಿಜಿ ತಂಡವಿದ್ದ ಭಾರತೀಯ ವಾಯುಸೇನೆಯ ಹೆಲಿಕಾಪ್ಟರ್ ಇಂದಿಲ್ಲಿ ಲ್ಯಾಂಡ್ ಮಾಡಲು ಸಾಧ್ಯವಾಗಲಿಲ್ಲ. ಈ ಮೈದಾನದಲ್ಲಿ ಭಾರೀ ಪ್ರಮಾಣದಲ್ಲಿ ಧೂಳು ಆವರಿಸಿದ್ದರಿಂದ ಸುರಕ್ಷತೆ ದೃಷ್ಟಿಯಿಂದ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಮಾಡಲಾಯಿತು.

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಏ.14ರಂದು ಸಂಜೆ ಮೈಸೂರು ಭಾಗದ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಸಭೆ ಆಯೋಜಿಸಲಾಗಿದೆ. ಆ ಸಭೆಯಲ್ಲಿ ಪ್ರಧಾನಿ ಮೋದಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಗುರುವಾರದಿಂದ ಎಸ್‌ಪಿಜಿ ಅಧಿಕಾರಿಗಳ ತಂಡ ಸುರಕ್ಷತಾ ಮೇಲ್ವಿಚಾರಣೆ ನಡೆಸುತ್ತಿದೆ.

ಹೆಲಿಪ್ಯಾಡ್ ನಿರ್ಮಾಣ: ಪ್ರಧಾನಿ ಮೋದಿ ಆಗಮಿಸುವ ಹೆಲಿಕಾಪ್ಟರ್ ಲ್ಯಾಂಡಿಂಗ್‌ಗೆ ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಿಸಲಾಗುತ್ತಿದೆ. ಇಂದು ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಹೆಲಿಪ್ಯಾಡ್ ನಿರ್ಮಾಣ ಕಾರ್ಯದಲ್ಲಿ ಪಾಲಿಕೆಯ 10ಕ್ಕೂ ಹೆಚ್ಚು ಸಿಬ್ಬಂದಿ ತೊಡಗಿದ್ದರು. ಎಸ್‌ಪಿಜಿ ಅಧಿಕಾರಿಗಳ ಸಲಹೆ–ಸೂಚನೆ ಮೇರೆಗೆ ಈ ಹೆಲಿಪ್ಯಾಡ್ ನಿರ್ಮಿಸಲಾಯಿತು. ಓವೆಲ್ ಮೈದಾನದಲ್ಲಿ ಕಲ್ಲುಗಳನ್ನು ಆಯ್ದು, ಗಿಡ–ಗಂಟಿಗಳನ್ನು ತೆರವುಗೊಳಿಸಲಾಯಿತು. ಬಳಿಕ ಮೈದಾನದಲ್ಲಿ ಧೂಳು ಮೇಲೇಳದಂತೆ ನೀರು ಸಿಂಪಡಿಸಲಾಯಿತು. ಆ ನಂತರ ಎಸ್‌ಪಿಜಿ ಅಧಿಕಾರಿಗಳ ಸೂಚನೆ ಮೇರೆಗೆ 3 ಹೆಲಿಕಾಪ್ಟರ್ ಲ್ಯಾಂಡ್ ಆಗಲು ನಿಗದಿತ ಸ್ಥಳ ಗುರುತು ಮಾಡಿ, ಸಗಣಿ ನೀರನ್ನು ಹಾಕಲಾಯಿತು.

ಲ್ಯಾಂಡ್ ಆಗದ ಹೆಲಿಕಾಪ್ಟರ್: ಹೆಲಿಪ್ಯಾಡ್ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಸಂಜೆ 4 ಗಂಟೆಗೆ ಭಾರತೀಯ ವಾಯುಸೇನೆಗೆ ಸೇರಿದ ಹೆಲಿಕಾಪ್ಟರ್‌ನಲ್ಲಿ ಎಸ್‌ಪಿಜಿ ಅಧಿಕಾರಿಗಳ ತಂಡ ಆಗಮಿಸಿತು. ಓವೆಲ್ ಮೈದಾನದಲ್ಲಿ ಹೆಲಿಕಾಪ್ಟರ್ ಲ್ಯಾಂಡ್ ಮಾಡಲು ಮುಂದಾಗುತ್ತಿದ್ದಂತೆ ಭಾರೀ ಪ್ರಮಾಣದ ಧೂಳು ಮೇಲೇಳಲಾರಂಭಿಸಿತು. ಸುರಕ್ಷತೆ ದೃಷ್ಟಿಯಿಂದ ಪೈಲಟ್ ಹೆಲಿಕಾಪ್ಟರ್ ಅನ್ನು ಮೈದಾನದಲ್ಲಿ ಒಂದು ಸುತ್ತು ಹಾಕಿದರು. ಬಳಿಕ ಮತ್ತೆ ಓವೆಲ್ ಮೈದಾನದಲ್ಲಿ ಲ್ಯಾಂಡ್ ಮಾಡಲು ಪ್ರಯತ್ನಿಸಿದರು. ಆಗಲೂ ಧೂಳೆದ್ದಿತು. ಇದನ್ನು ಗಮನಿಸಿದ ಎಸ್‌ಪಿಜಿ ಅಧಿಕಾರಿಗಳು ಹೆಲಿಕಾಪ್ಟರ್ ಅನ್ನು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಕೊಂಡೊಯ್ದು ಲ್ಯಾಂಡ್ ಮಾಡಿದರು.

ನೀರು ಸಿಂಪಡಣೆ: ಹೆಲಿಕಾಪ್ಟರ್ ಲ್ಯಾಂಡ್ ಆಗುವ ವೇಳೆ ಧೂಳು ಎದ್ದ ಹಿನ್ನೆಲೆಯಲ್ಲಿ ಓವೆಲ್ ಮೈದಾನದಲ್ಲಿ ಮತ್ತೆ ನೀರು ಹಾಕಲಾಯಿತು. ಕತ್ತಲು ಆವರಿಸುತ್ತಿದ್ದ ಹಿನ್ನೆಲೆಯಲ್ಲಿ ಮತ್ತೆ ಹೆಲಿಕಾಪ್ಟರ್ ಲ್ಯಾಂಡ್ ಮಾಡುವ ಪ್ರಯತ್ನ ಮಾಡಲಿಲ್ಲ.

ವಾಹನ ಸವಾರರಿಗೆ ಬಡಿದ ಧೂಳು: ಹೆಲಿಕಾಪ್ಟರ್ ಲ್ಯಾಂಡ್ ಮಾಡಲು ಪ್ರಯತ್ನಿಸಿದಾಗ ಓವೆಲ್ ಮೈದಾನದಿಂದ ಮಣ್ಣು ಮಿಶ್ರಿತ ಧೂಳು ಮೇಲೆದ್ದು, ಸುತ್ತ ಗಾಳಿಯಲ್ಲಿ ಹರಡಿ ಕ್ರಾಫರ್ಡ್ ಭವನದ ಮುಂಭಾಗದ ರಸ್ತೆಯಲ್ಲಿ ಸಂಚರಿಸುತ್ತಿದ್ದ ದ್ವಿಚಕ್ರ ವಾಹನ ಸವಾರರು ಪರದಾಡುವಂತಾಯಿತು. ಏಕಾಏಕಿ ಭಾರೀ ಪ್ರಮಾಣದ ಧೂಳು ರಸ್ತೆಯಲ್ಲಿ ಹರಡಿದ್ದರಿಂದ ವಾಹನ ಸವಾರರು ಅದರಿಂದ ಪಾರಾಗಲು ವಾಹನಗಳನ್ನು ರಸ್ತೆ ಮಧ್ಯದಲ್ಲೇ ನಿಲ್ಲಿಸಿದರು. ಇದರಿಂದ 4–5 ನಿಮಿಷ ರಸ್ತೆಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತು. ಭದ್ರತಾ ಕಾರ್ಯಕ್ಕಾಗಿ ಮೈದಾನದ ಸುತ್ತಲೂ ನಿಂತಿದ್ದ ಪೊಲೀಸರೂ ಧೂಳಿನಿಂದ ಮಿಂದೆದ್ದು ಕಾಂಪೌಂಡ್ ಗೋಡೆಗಳ ಮರೆಯಲ್ಲಿ ನಿಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಯಿತು.

ಪರ್ಯಾಯ ಮಾರ್ಗ: ಪ್ರಧಾನಿ ಮೋದಿ ಆಗಮನದ ತಾಲೀಮು ನಡೆಸಲು ಶನಿವಾರ ಎಸ್‌ಪಿಜಿ ತಂಡದ ಅಧಿಕಾರಿಗಳು ಹೆಲಿಕಾಪ್ಟರ್‌ನಲ್ಲಿ ಬರಲಿದ್ದು, ಮತ್ತೆ ಧೂಳು ಎದ್ದರೆ ಓವೆಲ್ ಮೈದಾನಕ್ಕೆ ಬದಲಾಗಿ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ರಸ್ತೆ ಮಾರ್ಗವಾಗಿ ಪ್ರಧಾನಿಗಳ ಕರೆತರಲು ಉದ್ದೇಶಿಸಲಾಗಿದೆ. ಬೇಸಿಗೆ ಹಿನ್ನೆಲೆಯಲ್ಲಿ ಓವೆಲ್ ಮೈದಾನದಲ್ಲಿ ನೀರು ಹಾಕಿದರೂ ಧೂಳು ಏಳುತ್ತಲೇ ಇರುವುದು ಎಸ್‌ಪಿಜಿ ಅಧಿಕಾರಿಗಳನ್ನು ಚಿಂತೆಗೀಡು ಮಾಡಿದೆ. ಈ ಹಿನ್ನೆಲೆಯಲ್ಲಿ ಶನಿವಾರ ಅಂತಿಮ ನಿರ್ಧಾರ ಮಾಡಲು ಎಸ್‌ಪಿಜಿ ಅಧಿಕಾರಿಗಳು ನಿರ್ಧರಿಸಿದ್ದಾರೆ ಎಂದು ತಿಳಿದು ಬಂದಿದೆ.

ಶಿವಮೊಗ್ಗದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕೆ.ಎಸ್. ಈಶ್ವರಪ್ಪ ನಾಮಪತ್ರ ಸಲ್ಲಿಕೆ


ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ನಾಮಪತ್ರ ಸಲ್ಲಿಸಿದರು.

ಶಿವಮೊಗ್ಗ: ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಶುಕ್ರವಾರ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು, ಜನ ಬೆಂಬಲದೊಂದಿಗೆ ತಮ್ಮ ಶಕ್ತಿ ಪ್ರದರ್ಶನ ಮಾಡಿ ಚುನಾವಣಾಧಿಕಾರಿಗಳ ಕಚೇರಿಗೆ ಆಗಮಿಸಿದ ಅವರು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿಯಾಗಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಶಿವಮೊಗ್ಗ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಈ ರೀತಿ ಬೃಹತ್ ಸಂಖ್ಯೆಯಲ್ಲಿ ನಮಗೆ ಬೆಂಬಲಕ್ಕೆ ನಿಂತ ಮತದಾರರಿಗೆ ಧನ್ಯವಾದಗಳು, ಇಂದು ಎಲ್ಲಾ ಜಾತಿ, ಧರ್ಮದ ಜನರು ನನಗೆ ಬೆಂಬಲ ನೀಡುತ್ತಿದ್ದಾರೆ. ಅವರೆಲ್ಲರ ಆಸೆ ನಾನು ಗೆಲ್ಲಬೇಕೆಂದು ಆಗಿದೆ ಎಂದರು.

ಇದಕ್ಕೂ ಮುನ್ನ ಶಿವಮೊಗ್ಗದ ಕೋಟೆ ಆಂಜನೇಯ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಬಳಿಕ ನಗರದಲ್ಲಿರುವ ಕೋಟೆ ಮಾರಿಕಾಂಬ ದೇವಸ್ಥಾನಕ್ಕೂ ತೆರಳಿ ವಿಶೇಷ ಪೂಜೆ ಸಲ್ಲಿಸಿತು. ಹಾವೇರಿ ಲೋಕಸಭಾ ಕ್ಷೇತ್ರದಿಂದ ತಮ್ಮ ಮಗ ಕಾಂತೇಶ್‌ಗೆ ಟಿಕೆಟ್ ನೀಡದಿರುವ ಕಾರಣ ರಾಜ್ಯ ಬಿಜೆಪಿ ನಾಯಕತ್ವದ ವಿರುದ್ಧ ಬಂಡಾಯವೆದ್ದಿರುವ ಈಶ್ವರಪ್ಪ ಖುದ್ದು ತಾವೇ ಶಿವಮೊಗ್ಗ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಬಿಜೆಪಿಯ ಬಿವೈ ರಾಘವೇಂದ್ರ ಮತ್ತು ಕಾಂಗ್ರೆಸ್ ನ ಗೀತಾ ಶಿವರಾಜ ಕುಮಾರ್ ಈಶ್ವರಪ್ಪನವರ ಎದುರಾಳಿ ಯಾಗಿದ್ದಾರೆ.

ಒಂದು ಕುಟುಂಬದ ಕೈಯಲ್ಲಿ ಪಕ್ಷ ಇರಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳುತ್ತಿದ್ದಾರೆ, ಆದರೆ ಕರ್ನಾಟಕದಲ್ಲಿ ಬಿಎಸ್ ಯಡಿಯೂರಪ್ಪ ಅವರ ಮಗ ಬಿಜೆಪಿ ಅಧ್ಯಕ್ಷ ಮತ್ತು ಇನ್ನೊಬ್ಬರು ಸಂಸದರಾಗಿದ್ದಾರೆ. ಕುಟುಂಬ ರಾಜಕೀಯದ ವಿರುದ್ಧ ಸ್ಪರ್ಧಿಸುತ್ತಿದ್ದೇನೆ. ಎರಡನೆಯದಾಗಿ ಸಿ.ಟಿ.ರವಿ, ಅನಂತಕುಮಾರ್ ಹೆಗಡೆ, ನಳಿನ್ ಕುಮಾರ್ ಕಟೀಲ್, ಪ್ರತಾಪ್ ಸಿಂಹ ಮುಂತಾದ ಹಿಂದುತ್ವವಾದಿ ನಾಯಕರನ್ನು ಹೊರಹಾಕಲಾಗಿದೆ. ಹಿಂದುತ್ವವಾದಿಗೆ ಸ್ಥಾನ ಸಿಗಲಿ ಎಂದು ಹೀಗೆ ಮಾಡುತ್ತಿದ್ದೇನೆ. ಕರ್ನಾಟಕದ ಕಾರ್ಯಕರ್ತರು ಬಿಜೆಪಿ ನಾಯಕರ ಮೇಲೆ ಕೋಪಗೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಈಶ್ವರಪ್ಪ ಹೇಳಿದರು.

ಕೆರಗೋಡುನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಶಕ್ತಿ ಪ್ರದರ್ಶನ

ಕಾರ್ಯಕರ್ತರಿಂದ ಬೈಕ್ ರ್‍ಯಾಲಿ, ಗ್ಯಾರಂಟಿ ಕಾರ್ಡ್ ವಿತರಣೆ


ಮಂಡ್ಯ ತಾಲೂಕು ಕೆರಗೋಡು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ಭರ್ಜರಿ ಪ್ರಚಾರ ನಡೆಸಿದರು.

ಮಂಡ್ಯ, ಏ.12– ಮಂಡ್ಯ ಜಿಲ್ಲೆಯ ಕೆರಗೋಡು ಗ್ರಾಮದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಅಬ್ಬರದ ಪ್ರಚಾರ ನಡೆಸಿ, ಕಾಂಗ್ರೆಸ್‌ನ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾದರು. ಗ್ರಾಮಕ್ಕೆ ಅವರು ಆಗಮಿಸುತ್ತಿದ್ದಂತೆ ಮಹಿಳೆಯರು ಪೂರ್ಣ ಕುಂಭ ಹೊತ್ತು ಸ್ವಾಗತಿಸಿದರೆ, ಕಾರ್ಯಕರ್ತರು ಪಟಾಕಿ ಸಿಡಿಸಿ, ಜೈಕಾರ ಕೂಗುವ ಮೂಲಕ ಬರಮಾಡಿಕೊಂಡರು. ನೂರಾರು ಕಾರ್ಯಕರ್ತರು ಸರ್ಕಲ್‌ನಲ್ಲಿ ಜಮೆಯಾಗಿ ಕಾಂಗ್ರೆಸ್‌ನ ಬಲ ಪ್ರದರ್ಶಿಸಿದರು.

ಮಂಡ್ಯದ ಚಿಕ್ಕಮಂಡ್ಯ, ಗೋಪಾಲಪುರ, ಸಾತನೂರು, ಹುಲಿವಾನ, ಕೆರಗೋಡು, ಬಿಳಿದೇಗಲು, ಉಪ್ಪರಕನಹಳ್ಳಿ, ದೊಡ್ಡ ಗರುಡನಹಳ್ಳಿ, ಬೇಬಿ, ಮುತ್ತೇಗೆರೆ, ಬಸರಾಳು, ಕುಬದಹಳ್ಳಿ, ಶಿವಪುರ, ಚಂದಗಾಲು, ಹಲ್ಲೇಗೆರೆ, ಮಾರಗೌಡನಹಳ್ಳಿ, ಹೊಡಘಟ್ಟ, ಕೀಲಾರ, ಅಲಕೆರೆ, ಹನಕೆರೆ, ಗೌಡಗೆರೆ, ಕನ್ನಲಿ, ಬೂದನೂರು ಗ್ರಾಮ ಪಂಚಾಯತಿಗಳಲ್ಲಿ ಪ್ರಚಾರ ನಡೆಸಿ, ಮಾತನಾಡಿದ ಅವರು, ರಾಜ್ಯದಲ್ಲಿ ಅನುಷ್ಠಾನಗೊಂಡಿರುವ ಗ್ಯಾರಂಟಿಗಳು ದೇಶದೆಲ್ಲೆಡೆ ಮನೆಮಾತಾಗಿದೆ. ಈ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬರಲಿದ್ದು, ನಮ್ಮ ರಾಷ್ಟ್ರೀಯ ನಾಯಕರು ಘೋಷಣೆ ಮಾಡಿರುವ 25 ಭರವಸೆಗಳನ್ನು ಈಡೇರಿಸಿ ಬಡ ಜನರ ಬದುಕನ್ನು ಮೇಲಕ್ಕೆತ್ತುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ ಎಂದರು.

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಜನರ ಬದುಕನ್ನು ಬದಲಿಸುತ್ತಿವೆ ಎಂಬುದಕ್ಕೆ ಗೃಹಲಕ್ಷ್ಮಿ ಹಣದಿಂದ ಟಿವಿ, ಫ್ರಿಡ್ಜ್ ಕೊಂಡುಕೊಳ್ಳುತ್ತಿರುವುದು, ವಿದ್ಯಾಭ್ಯಾಸಕ್ಕೆ ಅನುಕೂಲ ಆಗುತ್ತಿರುವುದೇ ನಿದರ್ಶನ. ಗ್ಯಾರಂಟಿಗಳು ಜನರನ್ನು ಆರ್ಥಿಕವಾಗಿ ಸದೃಢರನ್ನಾಗಿ ಮಾಡುತ್ತಿದೆ ಎಂದರು. ಕಾಂಗ್ರೆಸ್‌ನ ಅತಿ ದೊಡ್ಡ ಶಕ್ತಿ ಅಂದರೆ ಕಾರ್ಯಕರ್ತರು. ಬೂತ್ ಮಟ್ಟದಲ್ಲಿ ಪಕ್ಷ ಸಂಘಟಿಸುವುದರ ಜೊತೆಗೆ ಪಕ್ಷದ ಜನಪರ ಕಾರ್ಯಕ್ರಮಗಳನ್ನು ಪ್ರತಿ ಮನೆಗೆ ತಲುಪಿಸುವ ಕೆಲಸ ಮಾಡುತ್ತಿದ್ದಾರೆ. ಅವರ ಶ್ರಮ ಮತ್ತು ಜನರ ಆಶೀರ್ವಾದದಿಂದ ಗೆಲುವಿನ ದಡ ಮುಟ್ಟುತ್ತೇನೆ. ಇದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಿದರು.

ಪ್ರಚಾರದಲ್ಲಿ ಮಂಡ್ಯ ಶಾಸಕ ರವಿಕುಮಾರ್, ಮನ್‌ಮೂಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ, ಜಿಪಂ ಮಾಜಿ ಅಧ್ಯಕ್ಷ ಯೋಗೇಶ್, ಕೆಪಿಸಿಸಿ ಜಿಲ್ಲಾ ಕಾರ್ಯದರ್ಶಿ ಚಿದಂಬರಂ, ಕಾಂಗ್ರೆಸ್ ಮುಖಂಡ ಕಿಲಾರ ರಾಧಾಕೃಷ್ಣ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಅಂಜನಾ ಶ್ರೀಕಾಂತ್ ಸೇರಿದಂತೆ ಹಲವರು ಜೊತೆಯಲ್ಲಿದ್ದರು.

ಸ್ಟಾರ್ ಚಂದ್ರು ಅವರು ಮಂಡ್ಯದಲ್ಲಿ ಚುನಾವಣಾ ಪ್ರಚಾರ ಕೈಗೊಂಡಿದ್ದ ವೇಳೆ ನೂರಾರು ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿ ಮತದಾರರ ಗಮನ ಸೆಳೆದರು. ಚಿಕ್ಕಮಂಡ್ಯದಿಂದ ಆರಂಭವಾದ ಬೈಕ್ ರ್‍ಯಾಲಿ ನಾನಾ ಗ್ರಾಮ ಪಂಚಾಯತಿಗಳಲ್ಲಿ ಸಾಗಿತು.

ಚುನಾವಣಾ ಪ್ರಚಾರದ ಜೊತೆಗೆ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಅವರ ಸಹಿಯುಳ್ಳ ಗ್ಯಾರಂಟಿ ಕಾರ್ಡ್‌ಗಳನ್ನು ಕಾರ್ಯಕರ್ತರು ಗ್ರಾಮದ ಪ್ರತಿ ಮನೆಗಳಿಗೆ ವಿತರಣೆ ಮಾಡಿದರು.

ಈಶ್ವರಪ್ಪ ನಾಮಪತ್ರ ಹಿಂದಕ್ಕೆ ಪಡೆಯಲು ಇನ್ನೂ ಅವಕಾಶವಿದೆ, ಕಾದು ನೋಡಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ



ಬಳ್ಳಾರಿ: ಈಗಲೇ ಅಂತಿಮ ತೀರ್ಮಾನ ಮಾಡಬೇಡಿ, ಇನ್ನೂ ಸಮಯವಿದೆ. ಈಶ್ವರಪ್ಪ ನಾಮಪತ್ರ ಹಿಂದಕ್ಕೆ ಪಡೆಯಲು ಇನ್ನೂ ಅವಕಾಶ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಶುಕ್ರವಾರ ಹೇಳಿದ್ದಾರೆ.

ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಶ್ರೀರಾಮುಲು ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ನಗರಕ್ಕೆ ಆಗಮಿಸಿರುವ ಬಿ.ವೈ. ವಿಜಯೇಂದ್ರ ಸುದ್ದಿಗಾರರೊಂದಿಗೆ ಮಾತನಾಡಿದರು.

ಕಾಂಗ್ರೆಸ್ ಏನೇ ಹಾರಾಟ ಮಾಡಿದರೂ ಬಿಜೆಪಿಯ ಗೆಲುವು ಖಚಿತ. ಶ್ರೀರಾಮುಲು ದಾಖಲೆಯ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ. ಬಳ್ಳಾರಿಗೆ ಯಡಿಯೂರಪ್ಪ ಸೇರಿದಂತೆ ಇತರ ನಾಯಕರು ಪ್ರಚಾರಕ್ಕೆ ಆಗಮಿಸಲಿದ್ದಾರೆ. ರಾಜ್ಯದ 30 ಜನ ಸಚಿವರನ್ನು ಕರೆ ತಂದರೂ ಬಳ್ಳಾರಿಯಲ್ಲಿ ಬಿಜೆಪಿ ಗೆಲುವು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರಮುಖ ಲಿಂಗಾಯತ ಮುಖಂಡರ ಸಭೆ ವಿಚಾರವಾಗಿ ಮಾತನಾಡಿ, ನಾನೀಗ ಯಾವುದೇ ಲಿಂಗಾಯತ ಮುಖಂಡರ ಸಭೆ ಮಾಡಿಲ್ಲ. ಕೆಲಕಾಲ ಮಾತನಾಡಿದ್ದೇನಷ್ಟೇ. ಮುಂದಿನ ದಿನಗಳಲ್ಲಿ ಸಭೆ ಕರೆಯಲಾಗಿದೆ. ವಿಧಾನಸಭೆ ಚುನಾವಣೆಯಲ್ಲಿ ಹಿನ್ನಡೆ ಆಗಲು ಕಾರಣಗಳು ಬಹಳಷ್ಟಿವೆ. ಅದರ ಬಗ್ಗೆ ಈಗ ಚರ್ಚೆ ಮಾಡಲು ಹೋಗುವುದಿಲ್ಲ. ಎಲ್ಲವನ್ನೂ ಮರೆತು, ನರೇಂದ್ರ ಮೋದಿಯವರು ಮತ್ತೆ ಪ್ರಧಾನಿ ಆಗುವ ನಿಟ್ಟಿನಲ್ಲಿ ಭಾರತೀಯ ಜನತಾ ಪಕ್ಷದವರು ಒಂದಾಗಿ ಕೆಲಸ ಮಾಡಬೇಕಿದೆ ಎಂದು ಕರೆ ನೀಡಿದರು.

ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಯತೀಂದ್ರ ಪ್ರಚಾರ


ವರುಣಾ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಮಾಜಿ ಶಾಸಕ ಡಾ.ಯತೀಂದ್ರ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಪ್ರಚಾರ ನಡೆಸಿದರು.

ಮೈಸೂರು, ಏ.12(ಎಂಟಿವೈ)– ಕೇಂದ್ರದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಬಡವರಿಗೆ ಡಬ್ಬಲ್ ಗ್ಯಾರಂಟಿ ಯೋಜನೆಗಳು ದೊರಕಲಿದ್ದು, ವಚನ ಭ್ರಷ್ಟ ಬಿಜೆಪಿ ಅಭ್ಯರ್ಥಿ ಸೋಲಿಸಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಗೆಲ್ಲಿಸುವಂತೆ ಮಾಜಿ ಶಾಸಕ, ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಮನವಿ ಮಾಡಿದರು.

ವರುಣಾ ವಿಧಾನಸಭಾ ಕ್ಷೇತ್ರದ ಮೊಸಂಬಾಯನಹಳ್ಳಿ, ದೇವಲಾಪುರ, ವರುಣಾ ಗ್ರಾಮಗಳಲ್ಲಿ ಶುಕ್ರವಾರ ನಡೆದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ನುಡಿದಂತೆ ನಡೆಯದೆ ವಚನ ಭ್ರಷ್ಟ ಸರ್ಕಾರವಾಗಿದ್ದು, ಭಾರತದ ಇತಿಹಾಸದಲ್ಲಿಯೇ ನುಡಿದಂತೆ ನಡೆದು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ 5 ಗ್ಯಾರಂಟಿ ಭರವಸೆಗಳನ್ನು ಈಡೇರಿಸಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಪ್ರತಿಯೊಬ್ಬರು ಬೆಂಬಲಿಸಬೇಕು. ನಿಮ್ಮ ಮತ ದೇಶದ ಭವಿಷ್ಯವನ್ನು ರೂಪಿಸುವ ಮತವಾಗಿದ್ದು, ಮೋದಿ ಮುಖ ನೋಡಿ ಓಟು ಹಾಕಿದರೆ ನಿಮ್ಮ ಹೊಟ್ಟೆ ತುಂಬುವುದಿಲ್ಲ. ಜನ ಎದುರಿಸುತ್ತಿರುವ ಸಮಸ್ಯೆ ಬಗೆ ಹರಿಯುವುದೂ ಇಲ್ಲ. ಇದರಿಂದ ಯೋಚನೆ ಮಾಡಿ ಮತ ಚಲಾಯಿಸಿ. ನಿಮ್ಮ ಅಭಿವೃದ್ಧಿಗೆ ಯಾರು ಬದ್ಧರಾಗಿದ್ದಾರೆ ಅವರಿಗೆ ಮತ ನೀಡಿ ಎಂದು ಸಲಹೆ ನೀಡಿದರು.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬಂತೆ ನಿಮ್ಮ ಹಣವನ್ನು ನಿಮ್ಮ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷ ನೀಡುತ್ತಿದೆ. ಬಡತನ ನಿರ್ಮೂಲನೆಗೆ ಕಾಂಗ್ರೆಸ್ ಪಕ್ಷ ಬದ್ಧವಾಗಿದ್ದು, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಬಡ ಕುಟುಂಬದ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ಸಹಾಯಧನ ನೀಡಲಾಗುವುದು. ರೈತರ ಸಾಲ ಮನ್ನಾ ಮಾಡಲಾಗುವುದು. ಆದ್ದರಿಂದ ಪ್ರತಿಯೊಬ್ಬರೂ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್‌ಗೆ ಮತವನ್ನು ಚಲಾಯಿಸುವ ಮೂಲಕ ಆಯ್ಕೆ ಮಾಡಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ತಾಪಂ ಮಾಜಿ ಸದಸ್ಯರಾದ ಶಾಂತಮ್ಮ ಗುರುಸ್ವಾಮಿ, ಮಹದೇವಮ್ಮ, ನಂಜನಗೂಡು ತಾಲೂಕು ಎಪಿಎಂಸಿ ಅಧ್ಯಕ್ಷ ದಕ್ಷಿಣಾಮೂರ್ತಿ, ಮುಖಂಡರುಗಳಾದ ಮಾಕನಹುಂಡಿ ಶಿವು, ರಾಯನಹುಂಡಿ ರವಿ, ಮಹೇಶ್, ಶಿವಸ್ವಾಮಿ, ವಾಸುದೇವ, ಜಂತಗಳ್ಳಿ ಜಗದೀಶ್, ಕುಂಬ್ರಳ್ಳಿಮಠ ಮಹದೇವು, ಜಲಜಾಕ್ಷಿ, ಪಾಲಾಕ್ಷ ಎಲ್. ಮಹೇಶ, ರಾಜಣ್ಣ ಕನಕಮೂರ್ತಿ, ಶಿವಸ್ವಾಮಿ, ಮಂಜಪ್ಪ ಪೂರ್ಣಚಂದ್ರ, ಛಾಯ, ಚನ್ನಾಜಮ್ಮ ಉಪಸ್ಥಿತರಿದ್ದರು.

ಮೈಸೂರು–ಕೊಡಗು ಲೋಕಸಭಾ ಚುನಾವಣೆ

ಇಂದಿನಿಂದ 17ರವರೆಗೆ ಮನೆಯಲ್ಲಿಯೇ ಮತದಾನಕ್ಕೆ ಅವಕಾಶ

ಮೈಸೂರು, ಏ.12– ಲೋಕಸಭಾ ಸಾರ್ವತ್ರಿಕ ಚುನಾವಣೆ ಸಂಬಂಧ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕ ಮತದಾರರು ಹಾಗೂ ಶೇ.40 ಕ್ಕಿಂತ ಹೆಚ್ಚಿನ ಅಂಗವಿಕಲತೆ ಇರುವ ವಿಶೇಷ ಚೇತನ ಮತದಾರರ ಮಾಹಿತಿಯನ್ನು ಸಂಗ್ರಹಿಸಿ ಎಲೆಕ್ಟ್ರಾನ್ ತಂತ್ರಾಂಶದಲ್ಲಿ ಮಾಹಿತಿಯನ್ನು ದಾಖಲಿಸಿ ಸದರಿ ಮತದಾರರಿಗೆ ಮನೆಯಲ್ಲಿಯೇ ಮತದಾನ ಮಾಡುವ ವ್ಯವಸ್ಥೆ ಏ.13 ರಿಂದ 17 ರವರೆಗೆ ಮಾಡಲಾಗಿದೆ.

ವಿಧಾನಸಭಾ ಕ್ಷೇತ್ರವಾರು ಹೋಂ ವೋಟಿಂಗ್ ನಡೆಯುವ ದಿನಾಂಕಗಳು: ಮಡಿಕೇರಿಯಲ್ಲಿ(208) ಏ.15 ರಿಂದ 17 ರವರೆಗೆ, ವಿರಾಜಪೇಟೆ(209) ಏ.15 ರಿಂದ 17ರವರೆಗೆ, ಪಿರಿಯಾಪಟ್ಟಣ(210) ಏ.14 ರಿಂದ 15ರವರೆಗೆ, ಹುಣಸೂರು(212) ಏ.15 ರಿಂದ 16ರವರೆಗೆ, ಚಾಮುಂಡೇಶ್ವರಿ(215) ಏ.13 ರಿಂದ 14ರವರೆಗೆ, ಕೃಷ್ಣರಾಜ(216) ಏ.13 ರಿಂದ 14ರವರೆಗೆ, ಚಾಮರಾಜ(217) ಏ.14 ರಿಂದ 15 ಹಾಗೂ ನರಸಿಂಹರಾಜ(218)ದಲ್ಲಿ ಏ.13 ರಿಂದ 14 ರವರೆಗೆ ಹೋಮ್ ವೋಟಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮೈಸೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ.ಕೆ.ವಿ ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.16ರಿಂದ ಮಂಡ್ಯದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಪ್ರಚಾರ




ಮಂಡ್ಯ: ರಣ ಬಿಸಿಲಿನ ಕಾವು ಹೆಚ್ಚಾದ್ದಂತೆ ಮಂಡ್ಯ ಲೋಕ ಅಖಾಡದ ಕಾವು ಜೋರಾಗ್ತಿದೆ. ಮೈತ್ರಿ ಅಭ್ಯರ್ಥಿಯನ್ನು ಸೋಲಿಸಲೇಬೇಕೆಂದು ಪಣ ತೊಟ್ಟಿರುವ 'ಕೈ' ಪಡೆ ಹಳ್ಳಿ ಹಳ್ಳಿಗಳಲ್ಲಿ ಭರ್ಜರಿ ಪ್ರಚಾರ ನಡೆಸುತ್ತಿದೆ. ಕಾಂಗ್ರೆಸ್‌ನ ಕ್ಯಾಂಪೇನ್ ಸ್ಪೀಡ್ ಹೆಚ್ಚಾಗ್ತಿದ್ದಂತೆ ಅಲರ್ಟ್ ಆಗಿರುವ ಮೈತ್ರಿ ಅಭ್ಯರ್ಥಿ ದೋಸ್ತಿ ನಾಯಕರೊಂದಿಗೆ ಮತ್ತೆ ಮಂಡ್ಯ ಪ್ರಚಾರ ಅಖಾಡಕ್ಕೆ ಧುಮುಕಲು ರೆಡಿಯಾಗಿದ್ದಾರೆ. ಆ ಮೂಲಕ ಕೈ ಅಭ್ಯರ್ಥಿ ಮಣಿಸುವ ಪ್ಲ್ಯಾನ್ ಮಾಡಿದ್ದಾರೆ.

ಮಂಡ್ಯ ಲೋಕಸಭಾ ಅಖಾಡ ದಿನೇ ದಿನೇ ರಂಗೇರುತ್ತಿದೆ. ಅದರಲ್ಲಿಯೂ ಮಾಜಿ ಸಿಎಂ ಕುಮಾರಸ್ವಾಮಿ ಮೈತ್ರಿ ಅಭ್ಯರ್ಥಿಯಾಗಿ ಅಖಾಡಕ್ಕೆ ಧುಮುಕಿರುವುದರಿಂದ ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಕೈ ಪಡೆ, ಹೆಚ್ಡಿಕೆ ಸೋಲಿಸಿ, ಮಣ್ಣು ಮುಕ್ಕಿಸಲೇಬೇಕೆಂದು ಪಣ ತೊಟ್ಟಿದೆ. ಜಿಲ್ಲೆಯಾದ್ಯಂತ ಭರ್ಜರಿ ಕ್ಯಾಂಪೇನ್ ನಡೆಸುತ್ತಿರುವ ಕೈ ಅಭ್ಯರ್ಥಿ ಸ್ಟಾರ್ ಚಂದ್ರು ಈಗಾಗಲೇ 3ನೇ ಸುತ್ತಿನ ಪ್ರಚಾರ ಆರಂಭಿಸಿದ್ದಾರೆ. ಮತ್ತೊಂದೆಡೆ ಸಚಿವರು, ಶಾಸಕರು ಸೇರಿದಂತೆ ಕೈ ನಾಯಕರು ಕ್ಯಾಂಪೇನ್‌ನಲ್ಲಿ ತೊಡಗಿದ್ದಾರೆ. ಇದೀಗ ಕೈ ಪಡೆಯ ಪ್ರಚಾರದ ವೇಗ ಅರಿತಿರುವ ದೋಸ್ತಿ ಅಭ್ಯರ್ಥಿ ಹೆಚ್‌ಡಿಕೆ ಖುದ್ದು ತಾವೇ ಕ್ಯಾಂಪೇನ್ ಅಖಾಡಕ್ಕೆ ಧುಮುಕಲು ಸಜ್ಜಾಗಿದ್ದಾರೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ 8 ದಿನ 8 ವಿಧಾನಸಭಾ ಕ್ಷೇತ್ರಗಳಲ್ಲಿ ಮಿಂಚಿನ ವೇಗದಲ್ಲಿ ಪ್ರಚಾರ ನಡೆಸಲು ಡೇಟ್ ಕೂಡ ಫಿಕ್ಸ್ ಮಾಡಿಕೊಂಡಿದ್ದಾರೆ.

ಮಂಡ್ಯ ಲೋಕಸಭಾ ಕ್ಷೇತ್ರ 8 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, 8 ಕ್ಷೇತ್ರದಲ್ಲಿಯೂ ಸಮಾವೇಶ ನಡೆಸಿ ಮತದಾರರ ಗಮನ ಸೆಳೆಯಲು, ಮತದಾರರ ಮನೆ, ಮನ ತಲುಪಲು ಹೆಚ್‌ಡಿಕೆ ಮುಂದಾಗಿದ್ದಾರೆ. ಆದ್ದರಿಂದ ಏ.16 ರಿಂದ ಏ.24ರ ವರೆಗೆ ಪ್ರಚಾರ ಸಮಾವೇಶ ನಡೆಸಲು ರೆಡಿಯಾಗಿದ್ದಾರೆ. ಏ.16 ಮಳವಳ್ಳಿ, 17 ಕೆ.ಆರ್. ಪೇಟೆ, 18 ಕೆಆರ್. ನಗರ, 19 ಮೇಲುಕೋಟೆ, 21 ಶ್ರೀರಂಗಪಟ್ಟಣ, 22 ನಾಗಮಂಗಲ, 23 ಮದ್ದೂರು, 24 ರಂದು ಮಂಡ್ಯದಲ್ಲಿ ಬೃಹತ್ ಸಮಾವೇಶದ ಮೂಲಕ ಶಕ್ತಿ ಪ್ರದರ್ಶನಕ್ಕೆ ಸಜ್ಜಾಗಿದ್ದಾರೆ.

ಹೆಚ್‌ಡಿಕೆ ಒಂದು ಕಡೆ ತಾಲೂಕು ಮಟ್ಟದಲ್ಲಿ ಬೃಹತ್ ಸಮಾವೇಶದ ಮೂಲಕ ಕ್ಯಾಂಪೇನ್ ಮಾಡಿದರೆ, ಇತ್ತ ಪುತ್ರ ನಿಖಿಲ್ ತಂದೆ ಗೆಲುವಿಗಾಗಿ ಜಿಲ್ಲೆಯ ಎಲ್ಲ ಕ್ಷೇತ್ರದಲ್ಲಿಯೂ ಹೋಬಳಿವಾರು ಸಭೆ ರೋಡ್ ಶೋಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಶನಿವಾರದಿಂದಲೇ ನಿಖಿಲ್ ಅಖಾಡಕ್ಕೆ ಧುಮುಕಲಿದ್ದಾರೆ. ಅದರ ಜೊತೆ ಆಯಾ ವಿಧಾನಸಭಾ ಕ್ಷೇತ್ರದ ಶಾಸಕ, ಮಾಜಿ ಶಾಸಕರು ಸ್ಥಳೀಯ ಮೈತ್ರಿ ನಾಯಕರು, ಕಾರ್ಯಕರ್ತರೊಂದಿಗೆ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸಲಿದ್ದಾರೆ. ಇಂದಿನಿಂದಲೇ ಶಾಸಕ, ಮಾಜಿ ಶಾಸಕರು ತಮ್ಮ ನಾಯಕ, ಮೈತ್ರಿ ಅಭ್ಯರ್ಥಿ ಹೆಚ್ಡಿಕೆ ಪರ ಕ್ಯಾಂಪೇನ್‌ನಲ್ಲಿ ತೊಡಗುತ್ತಿದ್ದಾರೆ.







ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವಿಶ್ವಾಸಾರ್ಹ ಸರ್ಕಾರ ರಚನೆಗೆ ಮತ ಚಲಾಯಿಸಿ

• ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮನವಿ • ಕಾಲ್ನಡಿಗೆ ಜಾಥಾ ಮೂಲಕ ಮತದಾನ ಜಾಗೃತಿ

ಮಡಿಕೇರಿ, ಏ.12– ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ವಿನಾಕಾರಣ ದೂಷಿಸುವ ಬದಲು, ಚುನಾವಣೆಯಲ್ಲಿ ಮತದಾನ ಮಾಡಿ ವಿಶ್ವಾಸಾರ್ಹ ಸರ್ಕಾರ ರಚನೆಯಲ್ಲಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದರು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿ(ಸ್ವೀಪ್) ಹಾಗೂ ವಿವಿಧ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ವ್ಯವಸ್ಥೆಯ ಸುಭದ್ರಕ್ಕಾಗಿ ಮತದಾನದ ಮಹತ್ವವನ್ನು ನಾವೆಲ್ಲರೂ ಅರಿಯಬೇಕು. ಉತ್ತಮ ವ್ಯಕ್ತಿಗಳ ಆಯ್ಕೆಗೆ ಪ್ರಜಾಪ್ರಭುತ್ವ ನಮಗೆ ನೀಡಿದ ಮತದಾನ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.



ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ವೆಂಕಟ್‌ರಾಜಾ ನೇತೃತ್ವದಲ್ಲಿ ಕಾಲ್ನಡಿಗೆ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು.

ಪ್ರತಿಯೊಬ್ಬ ಪ್ರಜೆಯು ವಿವೇಚನೆಯಿಂದ ಅರ್ಹ ವ್ಯಕ್ತಿಗೆ ಮತ ನೀಡುವ ಮೂಲಕ ಸದೃಢ ಪ್ರಜಾಪ್ರಭುತ್ವ ನಿರ್ಮಾಣಕ್ಕೆ ಮುಂದಾಗಬೇಕು. ಈ ಚುನಾವಣೆಯಲ್ಲಿ ಮತದಾನ ಪ್ರಕ್ರಿಯೆಯಿಂದ ದೂರವುಳಿಯದೆ ಉಜ್ವಲ ಭವಿಷ್ಯಕ್ಕಾಗಿ ತಪ್ಪದೇ ಮತದಾನ ಮಾಡಬೇಕು. ಚುನಾವಣೆಯ ಪ್ರಜಾಪ್ರಭುತ್ವದ ಹಬ್ಬದಲ್ಲಿ ಎಲ್ಲರೂ ಭಾಗವಹಿಸಿ ತಮ್ಮ ಮತದಾನ ಹಕ್ಕು ಚಲಾಯಿಸಬೇಕು ಎಂದರು.

ಜಿಪಂ ಸಿಇಓ ವರ್ಣಿತ್ ನೇಗಿ ಮಾತನಾಡಿ, ಮನೆಯಿಂದ ಹೊರಬಂದು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಪ್ರಜಾತಂತ್ರ ವ್ಯವಸ್ಥೆಯನ್ನು ಭದ್ರಪಡಿಬೇಕು. ಕೊಡಗು ಜಿಲ್ಲಾ ಸ್ವೀಪ್ ಸಮಿತಿಯಿಂದ ಮತದಾನ ಪ್ರಮಾಣವನ್ನು ಅಧಿಕಗೊಳಿಸಲು ಈಗಾಗಲೇ ಹಲವಾರು ಚಟುವಟಿಕೆಗಳನ್ನು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಬೀದಿ ನಾಟಕ: ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಕಾಲ್ನಡಿಗೆ ಜಾಥಾ ಮೂಲಕ ಆಗಮಿಸಿದ ಗಣ್ಯರು, ಸಾರ್ವಜನಿಕರು, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳ ಸಮ್ಮುಖದಲ್ಲಿ ಕಲಾವಿದರಿಂದ ಬೀದಿನಾಟಕ ಪ್ರದರ್ಶನ ಜರುಗಿತು.

ಮತ ಮಾರಾಟಕ್ಕಿಲ್ಲ, ಯಾವುದೇ ಆಮಿಷಗಳಿಗೆ ಮತ ನೀಡದೆ ಮಕ್ಕಳ ಹಾಗೂ ಪ್ರಜಾಪ್ರಭುತ್ವದ ಉತ್ತಮ ಭವಿಷ್ಯಕ್ಕಾಗಿ ಮತವನ್ನು ಅರ್ಹರಿಗೆ ಚಲಾಯಿಸೋಣ ಎಂಬ ಸಂದೇಶದ ನಾಟಕ ಪ್ರದರ್ಶನ ಉತ್ತಮವಾಗಿ ಪ್ರದರ್ಶನಗೊಂಡಿತು.

ಪ್ರತಿಜ್ಞಾವಿಧಿ ಬೋಧನೆ: ಮುಕ್ತ, ನ್ಯಾಯಸಮ್ಮತ ಮತ್ತು ಶಾಂತಿಯುತ ಚುನಾವಣೆಗಳ ಘನತೆಯನ್ನು ಎತ್ತಿ ಹಿಡಿಯುತ್ತೇವೆಂದು ಪ್ರತಿಜ್ಞಾವಿಧಿಯನ್ನು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಬೋಧಿಸಿದರು.

ಜಾಥಾ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಆರಂಭವಾಗಿ ಜನರಲ್ ವೃತ್ತದ ಮಾರ್ಗವಾಗಿ ಕಾವೇರಿ ಕಲಾಕ್ಷೇತ್ರದಲ್ಲಿ ಅಂತಿಮಗೊಂಡಿತು.

ತಾಯಿಯಿಂದ ಬೇರ್ಪಟ್ಟಿದ್ದ ಮರಿ ಆನೆ

ದುಬಾರೆ ಶಿಬಿರಕ್ಕೆ ಸ್ಥಳಾಂತರ



ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟ ಮರಿ ಆನೆಗೆ ಚಿಕಿತ್ಸೆ ನೀಡಲಾಯಿತು.

ಸಿದ್ದಾಪುರ, ಏ.12– ಕಾಡಾನೆಗಳ ಹಿಂಡಿನಿಂದ ಬೇರ್ಪಟ್ಟಿದ್ದ ಮರಿ ಆನೆಯನ್ನು 25 ದಿನವಾದರೂ ತಾಯಿ ಆನೆ ಪತ್ತೆಯಾಗದ ಹಿನ್ನೆಲೆಯಲ್ಲಿ ಶುಕ್ರವಾರ ದುಬಾರೆ ಶಿಬಿರಕ್ಕೆ ಸ್ಥಳಾಂತರಿಸಲಾಯಿತು.

ಇತ್ತೀಚೆಗೆ ಕಾಡಾನೆಗಳ ಗುಂಪಿನಿಂದ ಬೇರ್ಪಟ್ಟಿದ್ದ 5 ತಿಂಗಳ ಗಂಡು ಮರಿಯಾನೆ ಅವರೆಗುಂದ ಬಸವನಹಳ್ಳಿಯ ಸುಶೀಲಾ ಎಂಬುವರ ಮನೆಯ ಬಳಿ ಆಹಾರ ತ್ಯಜಿಸಿ ನಿಂತ್ರಾಣ ಕಳೆದುಕೊಂಡು ಮಲಗಿತ್ತು. ದುಬಾರೆ ಅರಣ್ಯ ವಲಯದ ಆರ್‌ಎಫ್‌ಓ ರತನ್ ಕುಮಾರ್, ವನ್ಯಜೀವಿ ವೈದ್ಯ ಡಾ.ಚೆಟ್ಟಿಪ್ಪ ಅವರು ಮರಿಯಾನೆಗೆ ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡಿದ್ದರು.

ನಂತರ ವಿರಾಜಪೇಟೆ, ತಿತಿಮತಿ ಭಾಗದ ಅರಣ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿ 25 ದಿನಗಳಿಂದ ತಾಯಿಯಾನೆಯ ಪತ್ತೆಗಾಗಿ ಹುಡುಕಾಟ ನಡೆಸಿದ್ದರು. ಆದರೆ, ತಾಯಿ ಆನೆ ಪತ್ತೆಯಾಗದ ಹಿನ್ನೆಲೆಯಲ್ಲಿ ಚಿಕಿತ್ಸೆ ನೀಡಲಾಯಿತು. ನಂತರ ಸ್ವಲ್ಪಮಟ್ಟಿಗೆ ಚೇತರಿಸಿಕೊಂಡ ಮರಿ ಆನೆಯನ್ನು ಕಾಫಿ ತೋಟದಲ್ಲಿ ಕಂಡು ಬಂದ ಕಾಡಾನೆಗಳ ಎರಡು ಗುಂಪಿಗೆ ಸೇರಿಸಲು ಪ್ರಯತ್ನಿಸಲಾಯಿತು. ಕಾಡಾನೆಗಳು ಮರಿಯನ್ನು ಗುಂಪಿಗೆ ಸೇರಿಸಿಕೊಳ್ಳದ ಹಿನ್ನೆಲೆಯಲ್ಲಿ ವಾಹನದಲ್ಲಿ ದುಬಾರೆ ಶಿಬಿರಕ್ಕೆ ಬಿಡಲಾಗಿತ್ತು. ಈ ಸಂದರ್ಭ ಉಪವಲಯ ಅರಣ್ಯಾಧಿಕಾರಿ ಮಂಜುನಾಥ್ ಗೂಳಿ, ಅರಣ್ಯ ರಕ್ಷಕ ಮಣಿಕಂಠ, ಸಿಬ್ಬಂದಿ ಹಾಜರಿದ್ದರು.

ನಾಪೋಕ್ಲು ವ್ಯಾಪ್ತಿ ಸಾಧಾರಣ ಮಳೆ



ಮಡಿಕೇರಿ: ನಾಪೋಕ್ಲು ವ್ಯಾಪ್ತಿಯ ಕೆಲ ಪ್ರದೇಶಗಳಲ್ಲಿ ಶುಕ್ರವಾರ ಸಾಧಾರಣ ಮಳೆಯಾಗಿದ್ದು, ಬಿಸಿಲ ಬೇಗೆಯಲ್ಲಿ ಕಾದ ಭುವಿಗೆ ತಂಪೆರೆದಂತಾಗಿದೆ.

ನಾಪೋಕ್ಲು ಸುತ್ತಮುತ್ತಲಿನ ಬೇತು, ಚೆರಿಯಪರಂಬು, ಕೊಳಕೇರಿ ಎಮ್ಮೆಮಾಡು, ನೆಲಜಿ ಬಲ್ಲಮಾವಟಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಸಾಧಾರಣ ಮಳೆಯಾಗಿದೆ. ಪಾರಾಣೆ, ಕೈಕಾಡು ಹೊದ್ದೂರು, ಮೂರ್ನಾಡು ವ್ಯಾಪ್ತಿಯಲ್ಲಿ ಇದು ವರ್ಷದ ಮೊದಲ ಮಳೆಯಾಗಿದ್ದು, ಈ ವ್ಯಾಪ್ತಿಯ ಜನರಲ್ಲಿ ಸಂತಸ ಮೂಡಿಸಿದೆ. ಇನ್ನು ಮಳೆಯಿಲ್ಲದೇ ಕೊರಗುತ್ತಿದ್ದ ಕಾಫಿ ಬೆಳೆಗಾರರಿಗೆ ಇದೀಗ ಮಳೆ ತುಸು ನೆಮ್ಮದಿ ಮೂಡಿಸಿದೆ.

ಹೊದ್ದೂರು ಗ್ರಾಮದ ಭಗವತಿ ಕಾಲೋನಿಯ ಶ್ರೀ ಮಾರಿಯಮ್ಮ ಹಾಗೂ ಕೊರಗಜ್ಜ ದೇವರ ವಾರ್ಷಿಕ ಉತ್ಸವ ನಡೆಯುವ ಸಂದರ್ಭ ಗ್ರಾಮಕ್ಕೆ ವರ್ಷದ ಮೊದಲ ಮಳೆಯಾಗಿದ್ದು, ಭಕ್ತರು ಮಳೆಯಲ್ಲೇ ಕುಣಿದು ಸಂಭ್ರಮಿಸಿದರು. ಶುಕ್ರವಾರ ಸುರಿದ ಮಳೆ ಜನರ ಸಮಸ್ಯೆಯನ್ನು ಬಗೆಹರಿಸದಿದ್ದರೂ ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗುವ ನಿರೀಕ್ಷೆ ಮೂಡಿಸಿದೆ.

ಕಾಡುಕೋಣ ಹತ್ಯೆ: ಇಬ್ಬರ ಬಂಧನ

ಸಿದ್ದಾಪುರ: ಮೈಸೂರು–ಕೊಡಗು ಚೈನ್ ಗೇಟ್ ಅರಣ್ಯ ಪ್ರದೇಶದಲ್ಲಿ ಕಾಡಕೋಣೆ ಹತ್ಯೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ನಾಪೋಕು ಕುಂಜಿಲ ಗ್ರಾಮದ ಮಹಮ್ಮದ್ ಜಾಬೀರ್ (29) ಹಾಗೂ ನೌಫಲ್ (24) ಬಂಧಿತ ಆರೋಪಿಗಳು. ಬಂಧಿತರಿಂದ ಒಂದು ಓಮಿನಿ, 2 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಉಳಿದ 6 ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.

ಇತ್ತೀಚೆಗೆ 8 ಬೇಟೆಗಾರರ ತಂಡ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೈಸೂರು–ಕೊಡಗು ಚೈನ್‌ಗೇಟ್ ಅರಣ್ಯ ಪ್ರದೇಶದಲ್ಲಿ ಕಾಡಕೋಣೆ ಹತ್ಯೆ ಮಾಡಿ, ಮಾಂಸ ಕತ್ತರಿಸಿ ಪರಾರಿಯಾಗಿತ್ತು. ಈ ಸಂಬಂಧ ಆನೆಚೌಕೂರು ವನ್ಯಜೀವಿ ವಿಭಾಗದಲ್ಲಿ ಪ್ರಕರಣ ದಾಖಲಾಗಿತ್ತು.




ಕಾಡಕೋಣೆ ಹತ್ಯೆ ಮಾಡಿದ ಇಬ್ಬರು ಕಳ್ಳರನ್ನು ಅರಣ್ಯಾಧಿಕಾರಿಗಳು ಬಂಧಿಸಿರುವುದು.

ನಂತರ ಅರಣ್ಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಿದರು. ಮಡಿಕೇರಿ ವಿಭಾಗದ ಉಪಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಹಾಗೂ ಸಿಬ್ಬಂದಿ ಇಬ್ಬರು ಆರೋಪಿಗಳನ್ನು ಬಂಧಿಸಿ, ವಿರಾಜಪೇಟೆ ನ್ಯಾಯಾಲಯ ವಶಕ್ಕೆ ನೀಡಿದ್ದಾರೆ.

ಹೃದಯಾಘಾತದಿಂದ ಪೇದೆ ಸಾವು

ವಿರಾಜಪೇಟೆ, ಏ.12– ವಿರಾಜಪೇಟೆ ಡಿವೈಎಸ್‌ಪಿ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆ ಹೃದಯಾಘಾತದಿಂದ ಶುಕ್ರವಾರ ಬೆಳಗ್ಗೆ ಮೃತಪಟ್ಟಿದ್ದಾರೆ.



ಆನಂದ ಡೊಳ್ಳಿನ್

ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಸಂಗೊಳ್ಳಿ ಗ್ರಾಮದ ಆನಂದ ಡೊಳ್ಳಿನ್ (35) ಮೃತಪಟ್ಟ ಪೊಲೀಸ್ ಪೇದೆ. ಡಿವೈಎಸ್‌ಪಿ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದ ಆನಂದ ಡೊಳ್ಳಿನ್ ಅವರಿಗೆ ಬೆಳಗ್ಗೆ ಸುಮಾರು 6.30ರಲ್ಲಿ ಎದೆನೋವು ಕಾಣಿಸಿಕೊಂಡಿದೆ. ತಕ್ಷಣ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದಾರೆ. ನಂತರ ನಗರ ಠಾಣೆ ಪೊಲೀಸರು ಸರ್ಕಾರಿ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ, ಪೊಲೀಸ್ ವಸತಿ ಗೃಹದಲ್ಲಿ ಸರ್ಕಾರಿ ಗೌರವ ಸಲ್ಲಿಸಿ ಅವರ ಸಹೋದರ ಮಹೇಶ್ ಕುಮಾರ್ ಬಸವರಾಜ್ ಡೊಳ್ಳಿನ್ ಅವರಿಗೆ ಶವವನ್ನು ಹಸ್ತಾಂತರ ಮಾಡಿದರು.

ಆನಂದ ಡೊಳ್ಳಿನ್ ಅವರು 2015ನೇ ಬ್ಯಾಚ್‌ನಲ್ಲಿ ಆಯ್ಕೆಯಾಗಿ, 9 ವರ್ಷಗಳಿಂದ ವಿರಾಜಪೇಟೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೃತ ಆನಂದ ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು, ಅಪಾರ ಬಂಧು–ಬಳಗ ಇದ್ದಾರೆ.

ಈ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಶಿವರುದ್ರ, ವಿರಾಜಪೇಟೆ ಠಾಣಾಧಿಕಾರಿಗಳಾದ ರವಿಂದ್ರ, ಮಂಜುನಾಥ್, ಗೋಣಿಕೊಪ್ಪ ಠಾಣೆಯ ರೂಪಾದೇವಿ, ಶಿವರಾಜ್ ಹಾಗೂ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಕುಶಾಲನಗರದಲ್ಲಿ 3 ಮನೆಗಳಲ್ಲಿ ಕಳ್ಳತನ



ಕುಶಾಲನಗರದಲ್ಲಿ ಕಳ್ಳತನವಾದ ಮನೆಯನ್ನು ಪೊಲೀಸರು ಪರಿಶೀಲಿಸಿ, ಮಾಲೀಕರಿಂದ ಮಾಹಿತಿ ಪಡೆದರು.


ಕುಶಾಲನಗರ: ಕುಶಾಲನಗರ ವ್ಯಾಪ್ತಿಯ 3 ಮನೆಗಳಲ್ಲಿ ಸರಣಿ ಕಳ್ಳತನವಾಗಿರುವ ಘಟನೆ ಗುರುವಾರ ರಾತ್ರಿ ನಡೆದಿದೆ. ಕುಶಾಲನಗರ ಗ್ರಾಮಾಂತರ ಠಾಣೆ ವ್ಯಾಪ್ತಿಯ ಗೊಂದಿಬಸವನಹಳ್ಳಿಯ ವಿಮಲಾ ವೀರಪ್ಪ ಬಡಾವಣೆಯ ಸೈನಿಕ ಪೂರ್ಣಯ್ಯ ಹಾಗೂ ಪೊಲೀಸ್ ಸಿಬ್ಬಂದಿ ಚಿಣ್ಣಪ್ಪ ಅವರ ಮನೆಗಳ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ಬೆಳ್ಳಿಯ ದೀಪಗಳು, ಕುಂಕುಮ ಡಬ್ಬಿ, ಮಕ್ಕಳ ಬೆಳ್ಳಿ ಆಭರಣಗಳನ್ನು ಕದ್ದೊಯ್ದಿದ್ದಾರೆ.

ಸ್ವಾಮಿ ಬಡಾವಣೆಯ ಮನೆಯೊಂದಕ್ಕೆ ಕಳ್ಳರು ಕನ್ನ ಹಾಕಿದ್ದಾರೆ. ಮಾಲೀಕರು ಆಸ್ಪತ್ರೆಗೆ ತೆರಳಿದ ಸಂದರ್ಭ ಮನೆಗೆ ನುಗ್ಗಿ ನಗದು ಕಳ್ಳತನ ಮಾಡಿದ್ದಾರೆ. ಶ್ವಾನ ದಳ, ಬೆರಳಚ್ಚು ತಜ್ಞರು ಭೇಟಿ ನೀಡಿ, ಪರಿಶೀಲಿಸಿದರು. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೆರುಂಬಾಡಿಯಲ್ಲಿ 95,500 ರೂ. ವಶ

ವಿರಾಜಪೇಟೆ: ಯಾವುದೇ ದಾಖಲೆಗಳಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ 95,500 ರೂ. ಅನ್ನು ವಿರಾಜಪೇಟೆಯ ಪೆರುಂಬಾಡಿ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೇರಳದ ಇರಿಟಿಯಿಂದ ವಿರಾಜಪೇಟೆ ಮಾರ್ಗವಾಗಿ ಮೈಸೂರಿಗೆ ಹೋಗುತ್ತಿದ್ದ ಕಾರನ್ನು ಪೆರುಂಬಾಡಿ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ತಪಾಸಣೆ ನಡೆಸಿದಾಗ ಯಾವುದೇ ದಾಖಲೆಗಳಿಲ್ಲದೆ ಹಣ ಸಾಗಿಸುತ್ತಿರುವುದು ಪತ್ತೆಯಾಗಿದೆ.

ಆಕಸ್ಮಿಕ ಬೆಂಕಿಗೆ ಜೋಳದ ಕಡ್ಡಿ ಮೆದೆ ಭಸ್ಮ



ಬೇಗೂರು ಸಮೀಪದ ನಿಟ್ರೆ ಗ್ರಾಮದಲ್ಲಿ ಜೋಳದ ಕಡ್ಡಿ ಮೆದೆಗಳಿಗೆ ಬೆಂಕಿ ಬಿದ್ದಿರುವುದು.

ಬೇಗೂರು (ಗುಂಡ್ಲುಪೇಟೆ), ಏ.12–ಸಮೀಪದ ನಿಟ್ರೆ ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಬಿದ್ದು ಜೋಳದ ಕಡ್ಡಿ ಮೆದೆಗಳು ಭಸ್ಮವಾಗಿವೆ. ನಿಟ್ರೆ ಗ್ರಾಮದ ಮಹೇಶ್, ಮಹದೇವ ಶೆಟ್ಟಿ, ಸಿದ್ದಶೆಟ್ಟಿ ಎಂಬವರ ಜೋಳದ ಕಡ್ಡಿ ಮೆದೆಗಳು ಭಸ್ಮವಾಗಿವೆ. ಜಾನುವಾರುಗಳ ಮೇವಿಗಾಗಿ ಜೋಳದ ಕಡ್ಡಿಗಳನ್ನು ಸಂಗ್ರಹಿಸಲಾಗಿತ್ತು. ಆದರೆ, ಆಕಸ್ಮಿಕ ಬೆಂಕಿ ಬಿದ್ದು ಮೆದೆಗಳು ಸಂಪೂರ್ಣವಾಗಿ ಭಸ್ಮವಾಗಿವೆ.

ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ಬೇರೆಡೆ ಹರಡದಂತೆ ನಂದಿಸಿದರು. ಹೈನುಗಾರಿಕೆಯನ್ನೇ ನಂಬಿ ಜೀವನ ನಡೆಸುವ ಈ ಮೂವರು ಬಡರೈತರಿಗೆ ಅಪಾರ ನಷ್ಟ ಉಂಟಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮದ ರೈತರು ಆಗ್ರಹಿಸಿದ್ದಾರೆ.

ಉಮ್ಮತ್ತೂರು ಚಂದ್ರುಗೆ ಸಿದ್ದಗಂಗಾ ಸಿರಿ ಪ್ರಶಸ್ತಿ ಪ್ರದಾನ



ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಉಮ್ಮತ್ತೂರು ಚಂದ್ರು ಅವರಿಗೆ ಸಿದ್ದಗಂಗಾ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಾಮರಾಜನಗರ, ಏ.12– ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ಉಮ್ಮತ್ತೂರು ಚಂದ್ರು ಅವರಿಗೆ ಶ್ರೀ ಸಿದ್ದಗಂಗಾ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಕೃಷ್ಣಮೂರ್ತಿ ಪುರಂನ ನಮನ ಕಲಾ ಮಂಟಪದಲ್ಲಿ ನಡೆದ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರ 117ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು, ಸಿದ್ದಗಂಗಾಶ್ರೀಗಳ ಸೇವೆಯ ಗುಣಗಾನ ಮಾಡಿದರು. ಸಮಾಜ ಸೇವಕ ಡಾ.ಕೆ.ರಘರಾಂ ವಾಜಪೇಯಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಮಾಜ ಸೇವೆಯಿಂದ ಚಾ.ನಗರ ಉಮ್ಮತ್ತೂರು ಚಂದ್ರು, ಶಿಕ್ಷಣ ಕ್ಷೇತ್ರದಿಂದ ಎಚ್.ವಿ.ಮುರುಳೀಧರ್, ಸಾರ್ವಜನಿಕ ಸೇವಾ ಕ್ಷೇತ್ರದಿಂದ ರಾಮದಾಸ್, ಉದ್ಯಮ ಕ್ಷೇತ್ರದಿಂದ ಟಿ.ಎಂ.ರವಿಕುಮಾರ್, ಕಲಾ ಕ್ಷೇತ್ರದಿಂದ ಸುರೇಶ್‌ಗೌಡ, ಸಮಾಜ ಸೇವಾ ಕ್ಷೇತ್ರದಿಂದ ರುಕ್ಮಿಣಿ ಅವರಿಗೆ ಸಿದ್ದಗಂಗಾ ಸಿರಿ ಪ್ರಶಸ್ತಿ ನೀಡಲಾಯಿತು.

ಪ್ರತಿಷ್ಠಾನ ಅಧ್ಯಕ್ಷ ಬಸವ ರಾಜೇಂದ್ರಸ್ವಾಮಿ, ಮಹಾಸಭಾದ ಕೋಶಾಧ್ಯಕ್ಷ ವರುಣ ಮಹೇಶ್, ಚಿತ್ರನಟ ಸುಪ್ರೀತ್, ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್, ಉದ್ಯಮಿ ಮಣಿಕಂಠ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಹಾಗೂ ಪ್ರತಿಷ್ಠಾನದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕೈ ಮುಗಿಯುವೇ ಬಿಜೆಪಿಗೆ ಮತ ಹಾಕಬೇಡಿ

• ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ • ಕೊಳ್ಳೇಗಾಲದಲ್ಲಿ ಕಾಂಗ್ರೆಸ್ ಪ್ರಚಾರ ಸಭೆ

ಕೊಳ್ಳೇಗಾಲ, ಏ.12– ಕೈ ಮುಗಿದು ಬೇಡುವೆ ಯಾವುದೇ ಕಾರಣಕ್ಕೂ ಬಿಜೆಪಿ ಮತ ಹಾಕಬೇಡಿ. ಬಿಜೆಪಿಯವರಿಗೆ ಸುಳ್ಳೇ ಮನೆದೇವರು, ಬಿಜೆಪಿಯವರಿಗೆ ಬಡವರ ಕಂಡರೆ ಆಗಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಪಟ್ಟಣದ ಎಂಜಿಎಸ್‌ವಿ ಕಾಲೇಜು ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಂಗ್ರೆಸ್ ಪ್ರಚಾರ ಸಭೆಗೆ ಚಾಲನೆ ನೀಡಿ ಮಾತನಾಡಿದ ಅವರು, ಹಿಂದುಳಿದವರು, ಬಡವರು, ಅಲ್ಪಸಂಖ್ಯಾತರು, ಮಹಿಳೆಯರ ಅಭ್ಯುದಯಕ್ಕಾಗಿ ಶಕ್ತಿ ನೀಡಿದ್ದೆ ಕಾಂಗ್ರೆಸ್. ಇದನ್ನ ಜನತೆ ಅರ್ಥ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಯೋಜನೆ ಜಾರಿಗೊಳಿಸಿದ್ದು ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಹೊರತು, ಬಿಜೆಪಿ ಸರ್ಕಾರವಲ್ಲ ಎಂದರು.

ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳನ್ನು ಸಹಿಸಲಾಗದೆ ಬಿಜೆಪಿ ನನ್ನ ವಿರುದ್ಧ ಅಪಪ್ರಚಾರ ನಡೆಸಲಾಗುತ್ತಿದೆ. ನನ್ನನ್ನು ಹಿಂದೂ ವಿರೋಧಿ, ಹಿಂದುಗಳ ಮತ ಬೇಡ ಎಂದಿದ್ದೇನೆ ಎಂದು ನನ್ನ ವಿರುದ್ಧ ಪ್ರಚಾರ ನಡೆಸಲಾಗುತ್ತಿದೆ ಅಂತಹ ಅಪಪ್ರಚಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಸಿದರು.

ಲೋಕಸಭೆ ಚುನಾವಣೆ ಬಳಿಕ ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ಸ್ಥಗಿತಗೊಳಿಸಲ್ಲ. ಅದಕ್ಕಾಗಿ ಎಷ್ಟೇ ಹಣ ಖರ್ಚಾದರೂ ಭರಿಸಲು ಸರ್ಕಾರ ಸಿದ್ಧವಿದೆ. ಇಂತಹ ಅಪಪ್ರಚಾರಕ್ಕೆ ರಾಜ್ಯದ ಜನತೆ ಕಿವಿಗೊಡಬಾರದು. ಸಂವಿಧಾನದ ಹಕ್ಕನ್ನು ಮೊಟಕುಗೊಳಿಸಲು ಬಿಜೆಪಿ ಮುಂದಾಗಿದೆ. ಹಾಗಾಗಿ ಜನರ ಭಾವನೆ ಜೊತೆ ಆಟವಾಡುತ್ತಿರುವ ಬಿಜೆಪಿಯನ್ನು ಮತದಾರರು ತಿರಸ್ಕರಿಸಬೇಕು ಎಂದು ಮನವಿ ಮಾಡಿದರು.



ಕೊಳ್ಳೇಗಾಲದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಂಬೇಡ್ಕರ್ ಪ್ರತಿಮೆಗೆ ನಮನ ಸಲ್ಲಿಸಿದರು.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮನುವಾದಿಗಳ ಸರ್ಕಾರವಾಗಿದೆ. ಕೇಂದ್ರ ಸರ್ಕಾರ ಪ್ರಜಾಪ್ರಭುತ್ವವನ್ನು ನಾಶ ಮಾಡಲು ಹೊರಟಿದೆ. ಜೊತೆಗೆ ಸಂವಿಧಾನ ಬದಲಾವಣೆಯಂತಹ ವಿಚಾರವನ್ನು ಪ್ರಸ್ತಾಪಿಸುತ್ತಿದ್ದು, ಕಾಂಗ್ರೆಸ್ ಕಾರ್ಯಕರ್ತರು ಜನತೆಗೆ ಇದನ್ನು ತಿಳಿಸುವ ಕೆಲಸ ಮಾಡಬೇಕು. 2ನೇ ಸ್ವಾತಂತ್ರ್ಯ ಸಂಗ್ರಾಮದ ಚುನಾವಣೆ ಎಂದು ಭಾವಿಸಿ ಮತದಾರರು ಈ ಬಾರಿ ಕಾಂಗ್ರೆಸ್ ಬೆಂಬಲಿಸಬೇಕು.

> "ಕಾಂಗ್ರೆಸ್ ದೇಶಕ್ಕೆ ತನ್ನದೇ ಕೊಡುಗೆ ನೀಡಿದ್ದು, ಮತದಾರರು ನಮ್ಮ ಸಾಧನೆ ಮನಗಂಡು ಕಾಂಗ್ರೆಸ್ ಅಭ್ಯರ್ಥಿಗೆ ಆಶೀರ್ವಾದ ಮಾಡಬೇಕು. ದೇಶದಲ್ಲಿ ಸಮಗ್ರ ಬದಲಾವಣೆಗಾಗಿ ಸಾಮಾಜಿಕ ನ್ಯಾಯದಿಂದ ಕೂಡಿದ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು.
> –ಸತೀಶ್ ಜಾರಕಿಹೊಳಿ, ಸಚಿವ

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್‌ನನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಬೇಕು. ಬಿಜೆಪಿ–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡು ನಮ್ಮ ವಿರುದ್ಧ ಚುನಾವಣೆ ನಡೆಸುತ್ತಿವೆ. ಬಿಜೆಪಿ–ಜೆಡಿಎಸ್‌ಗೆ ಯಾವುದೇ ತತ್ವ ಸಿದ್ಧಾಂತಗಳಿಲ್ಲ. ನಮ್ಮ ಗ್ಯಾರಂಟಿ ಯೋಜನೆ ಕಂಡು ಭಯ ಬಂದು ಮೈತ್ರಿ ಮಾಡಿಕೊಂಡಿದ್ದಾರೆ ಎಂದು ಟೀಕಿಸಿದರು.

ಸಭೆಯಲ್ಲಿ ಸಚಿವ ಕೆ.ವೆಂಕಟೇಶ್, ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಸಚಿವರಾದ ಕೋಟೆ ಎಂ. ಶಿವಣ್ಣ, ಸೋಮಶೇಖರ್,ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಎಸ್.ಜಯಣ್ಣ, ವಿಧಾನ ಪರಿಷತ್ ಸದಸ್ಯ ಮರಿತಿಬ್ಬೆಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಬ್ಲಾಕ್ ಅಧ್ಯಕ್ಷ ಚಂದ್ರು ತೋಟೇಶ್ ಮತ್ತಿತರರು ಹಾಜರಿದ್ದರು.

ಇಂದಿನಿಂದ ಮನೆಯಲ್ಲೇ ಮತದಾನಕ್ಕೆ ಅವಕಾಶ

ಚಾಮರಾಜನಗರ, ಏ.12– ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರಿಗೆ ಮನೆಯಲ್ಲೇ ಏ.13ರಿಂದ 18ರ ವರೆಗೆ ಅಂಚೆ ಮತದಾನಕ್ಕೆ ಅವಕಾಶ ನೀಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಕೆಸ್ವಾನ್ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷದ ಅಭ್ಯರ್ಥಿಗಳು, ಪ್ರತಿನಿಧಿಗಳೊಂದಿಗೆ ನಡೆದ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗದ ನಿರ್ದೇಶನದನ್ವಯ 85 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರಿಗೆ ಅನುಕೂಲವಾಗುವಂತೆ ಮನೆಯಲ್ಲೇ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಕ್ಷೇತ್ರ ವ್ಯಾಪ್ತಿಯ ಹಿರಿಯ ನಾಗರಿಕರು ಹಾಗೂ ವಿಶೇಷಚೇತನರ ಮಾಹಿತಿಯನ್ನು ಎಲೆಕ್ಟ್ರೋನ್ ತಂತ್ರಾಂಶದಲ್ಲಿ ದಾಖಲಿಸಲಾಗಿದೆ. ಸದರಿ ಮತದಾರರಿಗೆ ಅಂಚೆ ಮತದಾನಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.



ಚಾಮರಾಜನಗರದ ಜಿಲ್ಲಾಡಳಿತ ಭವನದ ಕೆಸ್ವಾನ್ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಹೆಚ್.ಡಿ.ಕೋಟೆ, ನಂಜನಗೂಡು, ವರುಣ, ತಿ.ನರಸೀಪುರ, ಹನೂರು, ಕೊಳ್ಳೇಗಾಲ, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 85 ವರ್ಷ ಮೇಲ್ಪಟ್ಟ 26,019 ಹಿರಿಯ ನಾಗರಿಕರು ಹಾಗೂ 25,589 ವಿಶೇಷಚೇತನರನ್ನು ಗುರುತಿಸಲಾಗಿದೆ. ಈ ಪೈಕಿ 982 ಹಿರಿಯ ನಾಗರಿಕರು ಹಾಗೂ 445 ವಿಶೇಷಚೇತನರು ಮನೆಯಲ್ಲೇ ಮತದಾನ ಮಾಡಲು ನೋಂದಾಯಿಸಿಕೊಂಡಿದ್ದಾರೆ. ಉಳಿದವರು ಮತಗಟ್ಟೆಗೆ ಬಂದು ಮತ ಚಲಾಯಿಸಲಿದ್ದಾರೆ ಎಂದು ತಿಳಿಸಿದರು.

ಎರಡನೇ ಹಂತದ ಮತಗಟ್ಟೆ ಅಧಿಕಾರಿಗಳ ತರಬೇತಿಯನ್ನು ಏ.20 ಮತ್ತು 21ರಂದು ನಿಗದಿಪಡಿಸಲಾಗಿದೆ. ಅಲ್ಲದೇ ಪೋಸ್ಟಲ್ ಬ್ಯಾಲೆಟ್ ಸಿಸ್ಟಮ್ (ಇಟಿಪಿಬಿಎಸ್) ವ್ಯವಸ್ಥೆಯಡಿ ಕ್ಷೇತ್ರ ವ್ಯಾಪ್ತಿಯಲ್ಲಿ 357 ಸೇವಾ ಮತದಾರರಿಗೆ ಅಂಚೆ ಮತದಾನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಪಕ್ಷೇತರ ಅಭ್ಯರ್ಥಿಗಳಾದ ಜಿ.ಡಿ. ರಾಜಗೋಪಾಲ, ಎಚ್.ಕೆಸ್ವಾಮಿ, ವಿವಿಧ ರಾಜಕೀಯ ಪಕ್ಷಗಳ ಚುನಾವಣಾ ಏಜೆಂಟರು ಸಭೆಯಲ್ಲಿ ಉಪಸ್ಥಿತರಿದ್ದರು.



ಕೊಳ್ಳೇಗಾಲ ತಾಲೂಕಿನ ಮುಳ್ಳೂರು ಗ್ರಾಮ ಪಂಚಾಯಿತಿಯಲ್ಲಿ ಅಲಂಕರಿಸಿದ ಎತ್ತಿನಗಾಡಿ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು. ಜಿಲ್ಲಾ ಸ್ವೀಪ್ ಸಮಿತಿಯ ನೋಡಲ್ ಅಧಿಕಾರಿ ಪಿ.ಲಕ್ಷ್ಮೀ, ಲಿಂಗತ್ವ ಅಲ್ಪಸಂಖ್ಯಾತ ದೀಪಾ ಬುದ್ಧೆ, ತಾಪಂ ಇಓ ಶ್ರೀನಿವಾಸ, ಸಹಾಯಕ ನಿರ್ದೇಶಕ ಗೋಪಾಲ್ ಕೃಷ್ಣ, ಪಿಡಿಓ, ಸಂಜೀವಿನಿ ಯೋಜನೆ ಒಕ್ಕೂಟದ ಸದಸ್ಯರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ
30x40 E/F
ಮೂರು ಅಂತಸ್ತಿನ
35 ಚದರುಳ್ಳ ಕಾರ್
ಪಾರ್ಕಿಂಗ್ ಸೇರಿ ಜೆಪಿ ನಗರ,
'ಬಿ' ಬ್ಲಾಕ್ ಮೈಸೂರು
9449175644

ಹೊಸ ಮನೆ ಮಾರಾಟಕ್ಕಿದೆ
30x40 ಪೂರ್ವದಿಕ್ಕು
3BHK Allteak
ಕಲ್ಪವೃಕ್ಷ ನಗರ, ಕೆಸರೆ
3ನೇ ಹಂತ, ಮೈಸೂರು
8095673991

SITE FOR SALE
30x40 site for sale in Bogadi Road, near Martikya-thanahalli Circle.
Mob: 9740088990

ಬೇಕಾಗಿದ್ದಾರೆ
ಹನುಮಂತು ಹೋಟೆಲ್‌ಗೆ
ಹುಡುಗರು ಬೇಕಾಗಿದ್ದಾರೆ.
ಸಂಬಳ: 12000 ದಿಂದ 14000
ಬಿ.ಎನ್. ಸ್ಟ್ರೀಟ್, ಮಾರ್ಕೆಟ್ ಬಿಲ್ಡಿಂಗ್,
ಮಂಡಿಮೊಹಲ್ಲಾ, ಮೈಸೂರು.
ಸಂದರ್ಶನಕ್ಕೆ ಸಂಪರ್ಕಿಸಿ:
Mob: 9611431188

WANTED
HELPER BOYS
Sslc, puc pass or fail
9742215777 | 9739569260

WANTED
Male Delivery Boys
Part Time Work
Morning 2 hours & Evening 2 Hours
9901364556

HOUSE FOR SALE
ಮನೆ ಮಾರಾಟಕ್ಕಿದೆ
30x40 ಅಳತೆಯಲ್ಲಿ ಉತ್ತರದಿಕ್ಕಿನ
ವಾಸ್ತುವುಳ್ಳ ಹೊಸ ಮನೆ
ಚಾಮುಂಡೇಶ್ವರಿ ರೈಲ್ವೆ ಲೇಔಟ್‌ನಲ್ಲಿ
(ಕೆ.ಆರ್.ಎಸ್ ಮುಖ್ಯರಸ್ತೆ) ಮಾರಾಟಕ್ಕಿದೆ
9845199932
9482746287

WANTED
1) 3 Sales Representative Compulsary 2 Wheeler & DL
2) 2 Female Accountant Experienced in Tally
3) 1 Male Helper. Sapthagiri Enterprises, Hootgalli Industrial Area, Mysore
9986680843

WANTED
Full Time Female for ICE Cream / Chat Centre with Experience at Anegundi Road Mysore
9632831272

ARE YOU LOOKING FOR A PLOT? CALL US NOW
30 x 50 East Facing, Corner Site
MUDA APPROVED
4500 Per Sqft, Balaji Nagara, Varuna Hobli, Lalithadripura
with Clean Documents
Ready for Registration & Construction
67.5 Lakhs
NORTH EAST CONSTRUCTIONS "Turn your Dream into Address" 98800 65122 98459 84587

SITE FOR SALE
MUDA Approved 30x40, 30x50 at prime location near H.D. Kote Ring Road junction and near MIT College. Contact:
9483358399, 6381779015

Job Opportunity Seminar for Retired officials
Reputed Banking Co., invites application for the position of officers. Education: 1) SSLC & above any Degree, (2) Age 30 years and above. Place: Sharadha Plantina, 1st Floor, Near Big Clock Tower, Mysore-01. Seminar date: 13-4-2024. Time: 11 am followed by lunch. Training date: 16-4-2024. Time: 10.30 am to 4 pm. Documents & other details
9449068132, 9483499132

ARE YOU LOOKING FOR A PLOT? CALL US NOW
40 x 60 North Facing, Corner Site
MUDA APPROVED
Odd Dimensions 2020 Sqft & 2470 Sqft @ Nadanahalli Kasaba Hobli Mysore
with Clean Documents
Ready for Registration & Construction
82 Lakhs & 1 Crore
NORTH EAST CONSTRUCTIONS "Turn your Dream into Address" 98800 65122 98459 84587

Pay Just 3 Lakhs
& Own Your Dream Sites
- Balance through Bank Loan
- Location -Yelwala & TVS Factory road
- 600 to 1200 Sqft Area
- Starts from 9 Lakhs

NIDHI ESTATES 78991 28100 99018 48182

MYSORE LAND MART
For Purchase or Sale of Sites in MUDA Developed and MUDA Approved Layouts @ Mysore
7483656875
9448447035

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ 15000
ಸೆಕ್ಯೂರಿಟಿ ಗಾರ್ಡ್ಸ್ 14000
ಕೂರ್ಗಳ್ಳಿ ಇಂಡಸ್ಟ್ರೀಯಲ್
ಏರಿಯ ಮತ್ತು
ಬನ್ನಿ ಮಂಟಪದಲ್ಲಿ ಹೌಸ್
ಕೀಪಿಂಗ್ ಕೆಲಸಕ್ಕಾಗಿ ಮಹಿಳೆಯರು
9035367083

ರೋಗ ಯಾವುದೇ ಇರಲಿ
ಯಾವುದೇ ನಿಶ್ಶಕ್ತಿ, ಸೋರಿಯಾಸಿಸ್,
ಬಿಳಿಮಚ್ಚೆ, ನವೆ, ವೀರ್ಯದಲ್ಲಿ ಅಣು ಕಡಿಮೆ
ಇದ್ದು ಮಕ್ಕಳಿಲ್ಲದಿರುವಿಕೆ, ಮೂತ್ರ ಉರಿ,
ಯಾವುದೇ ಸಮಸ್ಯೆಗೆ ಸಂಪರ್ಕಿಸಿ:
ಪರಸ್ಥಳದವರು ಕರೆ ಮಾಡಿ ಔಷಧಿ
ತರಿಸಿಕೊಳ್ಳಬಹುದು
ಡಾ. ಆರ್.ತ್ಯಾಗರಾಜು
Govt.Reg. No. 7358
9902505474

ಬೋಳು ತಲೆಯ ಸಮಸ್ಯೆಯೇ?

ಕಿನೊತರಹಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಶ್ರಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Arikethana Road, kuvempunagar, Mysuru
MYSURU 9611028523 MANGALORE 9343142258

ಬೇಕಾಗಿದ್ದಾರೆ
Captain, Cashier, Room Boys, Receptionist, Waiters, Asst. Waiters, KT/Asst.,
Part Time / Full Time
Attractive Salary, PF & ESI with food and accommodation
ಸಂಪರ್ಕಿಸಿ
ಪಾರ್ಕ್‌ಲೇನ್ ಹೋಟೆಲ್
2720, ಹರ್ಷ ರಸ್ತೆ, ಮೈಸೂರು

RENT - HOUSE / OFFICE
Semi furnished - 3 BHK + 1 Lounge, Sitout, 15x35 Hall, attached Toilet, Solar, Geyser, UPSV Windows, Pooja, Dining, Cup Boards at J.P.Nagar.
Call : 78997 78459
Next to Karnataka Bank

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಮನೆ ಮಾರಾಟಕ್ಕಿದೆ
20x30 (E/F) ಡ್ಯೂಪ್ಲೆಕ್ಸ್
3BHK- ಗ್ರಾನೈಟ್+ಟೀಕ್
ಕನಕದಾಸ ನಗರ – 79 ಲಕ್ಷ
9448425692
9480379977

FOR LEASE/RENT
2 BHK, F F, NR Mohalla
3 BHK GF, N R Mohalla
3+1 BHK Udayagiri, KEB Colony Separate ENT., Opp Park
Brokers Excuse
Direct Owner
7760107867

HOUSE FOR SALE
- 50x80 North Face 15 square Building, MUDA site Vijayanagar 4th Stage, 2nd Phase.
- 30x40 G/F, 20 square Building, R.K.Nagar, Srirampura.

WANTED MUDA Sites & House
Seller Please Contact :
94489 38989 / 78920 35789
Brokers Excuse

ಜ್ಯೋತಿಷ್ಯ, ಮಾಂತ್ರಿಕ,
ವೈದ್ಯ ಸಂಬಂಧಪಟ್ಟ
ಓಲೆಗಳು (ಗರಿ) ಕೈಬರಹ
ಪುಸ್ತಕಗಳು ಇದ್ದರೆ
ಕೂಡಲೇ ಸಂಪರ್ಕಿಸಿ:
9902505474
9066585814

SITE FOR SALE
30x80; West Face Between KSRTC and Nandini Layout Alanahalli T.Narasipura Road
9686831338

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ,
ಎಕ್ಸ್‌ಚೇಂಜ್ ಹಾಗೂ
ಬಿಡಿ ಭಾಗಗಳಿಗಾಗಿ
ಸಂಪರ್ಕಿಸಿ
Vinaykrishna
9611648636

FOR SALE
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 100x100 Farm House @ KRS Back Water Attach 20L
5. 40x72, 35x45 House Vidyaranyapuram
6. 20x30 House Giridarshini Layout
7. 30x45 New House Near JP Nagar

PRAKRUTHI PROPERTIES
95386 90359, 90359 90359

KSHATRIYA MOTORS
WE ARE HIRING / Job Positions
Marketing Team Leaders/ Sales Executives
Location: MYSORE, KODAGU, MANDYA, CHAMARAJANAGARA, RAMANAGARA
Send Your CV To: kshatriyaforcesales@gmail.com
0821-2404555
9632263202

30x50 Newly Construction HOUSE For Sale East Facing 3 BHK Near J P Nagar Ring Road
9611537157
9986919694

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

Star Solar Renewable Energy

JUST 19,499/- 200 ltr
Easy EMI
7/15 Years Guranty
Limited Period Offer
Old system Exchange offer available
Manufacturing: Belawadi Industrial Sub,Mysore
9945616293 / 9449966293

SITES FOR SALE
30x40, North & South facing, Hale Kesare Main Road, Near to Bangalore-Mysore Express Way.
Bank loan available. Contact:
Mob: 9900375763

SITES FOR SALE
30x40, 30x50, 40x60
Near Srirampura Ring Road Junction.
MUDA Approved Sites.
Mob: 9900375763

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

PAY 4 LAKH, BUY 30X40 SITE IN CITY BUS ROUTE
80% LOAN RS.13 TO 16.18 LAKH
* ಹುಣಸೂರು ರಸ್ತೆ –ಇಲವಾಲ
* MIT COLLEGE ಪಕ್ಕ–ಹಳೆ ಕೆಸರೆ
* TVS COMPANY –ಸಿಂಧುವಳ್ಳಿ ರಸ್ತೆ
* ಟಿ.ಎನ್.ಪುರ ರಸ್ತೆ– ,ಸಪ್ತಮಾತೃಕ ಲೇಔಟ್
*ಬೋಗಾದಿ ರಸ್ತೆ @ 26 ಲಕ್ಷ
(BROKER EXCUSE)
8123075038

ಸೈಟ್ ಮಾರಾಟಕ್ಕಿದೆ
40x60 (W/F)
40 ft Road ಬಾಪುಜಿ
ಬಡಾವಣೆ ಬೋಗಾದಿ
9480379977
9448425692

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಸೂಪರ್‌ವೈಸರ್ಸ್
ಸಂಬಳ 17,000 + ಇಎಸ್‌ಐ & ಪಿಎಫ್
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

ಬೈಕ್ ಬೇಕಾಗಿದೆ
Yamaha RX 135
ಅಥವಾ Rx-z
ನೇರ ಮಾಲೀಕರು ಸಂಪರ್ಕಿಸಿ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9880952365

Pay Just 3 Lakhs
& Own Your Dream Sites
- Balance through Bank Loan
- Location -Yelwala & TVS Factory road
- 600 to 1200 Sqft Area
- Starts from 9 Lakhs

NIDHI ESTATES 99808 21777 99005 69400

ಮೊಬೈಲ್‌ನಲ್ಲಿ ಕೆಲಸ
ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ
ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

20x30 Newly Construction HOUSE For Sale West Facing North door G+2 3 BHK Triplex Dattagalli
9900251194
9738884777

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್, ಸೆಕ್ಯೂರಿಟಿ ಸೂಪರ್ ವೈಸರ್ ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, Any Degree, ವೇತನ: ಸೆಕ್ಯೂರಿಟಿ ಗಾರ್ಡ್ 15,000 ಸೆಕ್ಯೂರಿಟಿ ಸೂಪರ್ ವೈಸರ್ –16000, ಕೆಲಸದ ಸಮಯ 8 ಗಂಟೆಯ ಪಾಳಿ, ಸೌಲಭ್ಯಗಳು ESI & PF, 4 Week Off ದೊರೆಯುತ್ತದೆ. ಕೆಲಸ ಮಾಡುವ ಸ್ಥಳ: ಜೆಎಸ್‌ಎಸ್ ಹಾಸ್ಪಿಟಲ್ ಮೈಸೂರು.
ಮಹದೇವ್ ಬಿ.ಎಸ್ 9980456048, 9513341861
ದಿನೇಶ್ ವೈ.ಎಸ್: 8884431722, 7760097320

Aquaguard & Kent Sales and Service
Service Charge: 300/-
9901200444


V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಕೈಗಾರಿಕಾ ಪ್ರದೇಶ,
ಯಾದವಗಿರಿ, ಮೈಸೂರು
ಮಹಿಳೆಯರು: 10,000
ಹುಡುಗರು: 15,000
ಕೆಲಸದ ಸಮಯ: 9 ರಿಂದ 6.30
Mob: 9448664411

2 BHK HOME INTERIORS
Starting @ ₹2.5 Lacs*
Home Space Mart™
TALK TO OUR DESIGN TEAM
9108923123

30x40 Site @ Rs 16 Lakhs
DTCP Approved Layout Ready to Registration Bank Loan Available Next to Marashetti halli Behind Chamundi hill
9538583377

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್
ಸರ್ವಿಸ್ ಹೋಟೆಲ್‌ಗೆ ಕಿಚನ್ ಹೆಲ್ಪರ್ಸ್
ತರಕಾರಿ ಕಟಿಂಗ್ ಮಾಡುವವರು ಮತ್ತು
ಹಿಟ್ಟು ಕಲಸುವವರು ಬೇಕಾಗಿದ್ದಾರೆ.
10 ರಿಂದ 12 ಸಾವಿರ ಸಂಬಳದೊಂದಿಗೆ
ಊಟ–ವಸತಿ ಉಚಿತ
7204404170

ಬೇಕಾಗಿದ್ದಾರೆ
ಕುವೆಂಪುನಗರ ಹೋಟೆಲ್‌ಗೆ
ಈ ಕೆಳಕಂಡ ಅಭ್ಯರ್ಥಿಗಳು
ಬೇಕಾಗಿದ್ದಾರೆ. ಕ್ಯಾಪ್ಟನ್, ಸಪ್ಲೈಯರ್,
ರುಬ್ಬುವುದು ಮತ್ತು ಹಚ್ಚುವವರು,
ದೋಸೆ ಮಾಸ್ಟರ್, ಚಾಟ್ ಮಾಸ್ಟರ್,
ಅಸಿಸ್ಟೆಂಟ್ ಕುಕ್ ಹೌಸ್ ಕೀಪಿಂಗ್
(ಮಹಿಳೆಯರಿಗು ಆದ್ಯತೆ)
7676111390

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY* ISI
9845426862
9901291267

SAI NALANDA CENTRAL SCHOOL,
KR NAGAR, IS CURRENTLY RECRUITING TO FILL THE FOLLOWING POSITIONS FOR THE ACADEMIC YEAR 2024-25
1. PRINCIPAL (3 to 5 experience in CBSE school)
2. B.A. B.Sc./M.A. MSc. With B.Ed. Social Science, English, Mathematics & Hindi)
3. ADMISSION COUNSELOR (4) BCA, MCA, NTT, DANCE, KARATE, MUSIC, YOGA & SWIMMING COACHES. *GOOD ENGLISH FLUENCY PREFERRED *FREE ACCOMMODATION *SALARY UPTO 15000/-
CONTACT: 8722073456, 8722093456
nalandakrn@gmail.com, Web: www.sainalanda.com

ಮೂಡಾ ಖಾತಾ ಸೈಟ್ ಸೇಲ್
ಈಸ್ಟ್ ಫೇಸಿಂಗ್ ಕಾರ್ನರ್ ಸೈಟ್
1124 ಚದರಅಡಿ, ಜ್ಞಾನಭಾರತಿ
ಲೇಔಟ್, ದಡದಹಳ್ಳಿ,
ಏರ್‌ಪೋರ್ಟ್ ಹಿಂಭಾಗದ ರಸ್ತೆ,
ಬೆಲೆ: 34 ಲಕ್ಷ, ಡೈರೆಕ್ಟ್ ಓನರ್
9342123373

WANTED
Teaching staff for Reputed Institution (Experience Preferred) for all subjects. Transport facilities available. Drop your resume through Whatsapp or Contact
8971577685, 9980631121

HOUSE FOR RENT
2 BHK Ground Floor West facing in Agrahara
9071256559

ಮನೆ ಬಾಡಿಗೆಗೆ
ರಾಮಕೃಷ್ಣನಗರ 'H' Block ನಲ್ಲಿ
30x40 ಅಳತೆಯುಳ್ಳ 4 Bed
room ಅಟ್ಯಾಚ್ಡ್ Bath room
ಡ್ಯೂಪ್ಲೆಕ್ಸ್ ಇಂಡಿಪೆಂಡೆಂಟ್ ಮನೆ
ಸೋಲಾರ್ ವ್ಯವಸ್ಥೆ ಹಾಗೂ
Parking ವ್ಯವಸ್ಥೆ ಹೊಂದಿದೆ
9380681006

GSS DEVELOPERS SITE FOR SALE
ತರೂರು Vasthava
Manasa ಲೇಔಟ್‌ನಲ್ಲಿ
30x50 ಅಳತೆಯ West
ಫೇಸಿಂಗ್ MUDA ಸೈಟ್
ಬೆಲೆ : 24 ಲಕ್ಷ
(Negotiable)
9886048471

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ
ಕೆಲಸ ಮಾಡಲು ಪುರುಷರು/
ಮಹಿಳೆಯರು / ಹುಡುಗಿಯರು
ಬೇಕಾಗಿದ್ದಾರೆ. ಸಮಯ:
ಬೆಳಿಗ್ಗೆ 8 ರಿಂದ ಸಂಜೆ 5ರವರೆಗೆ
ಸಂಬಳ: 12000/–
9591135324

ಮೈಸೂರು ಪ್ರಾಪರ್ಟೀಸ್
0% ಕಮೀಷನ್
(ಮನೆ ಮಾಲೀಕರಿಗೆ ಮಾತ್ರ)
ಮನೆ ಬಾಡಿಗೆಗೆ,ಲೀಸ್‌ಗೆ,
ಸೈಟು ಮತ್ತು ಮನೆ ಮಾರಾಟಕ್ಕೆ
ಹೆಚ್ಚಿನ ವಿವರಗಳಿಗೆ
9169113399
7676538135

FOR RENT
1) First Floor - 4BHK (18 squares)
2) Second Floor 4 BHK (18 squares) Sutable for N-V Hotel /Service Apart (Existing & Adjacent Bar Available)
1555, Vijayanagar 2nd Stage, Near Canara Bank H T Double Road.
9663604699

ನಿವೇಶನ ಮಾರಾಟಕ್ಕಿದೆ
ಹುಣಸೂರು ತಾಲ್ಲೂಕು
ಬಿಳಿಕೆರೆಯಲ್ಲಿ
5 ಗುಂಟೆ ನಿವೇಶನ
ಜಾಗ ಮಾರಾಟಕ್ಕಿದೆ
9448889127

ನಿವೃತ್ತ ನೌಕರರಿಗೆ ಉದ್ಯೋಗ
ನಿವೃತ್ತ ನೌಕರರಿಗೆ ಉದ್ಯೋಗ ವಿದ್ಯಾರ್ಹತೆ SSLC ಉತ್ತೀರ್ಣ. ವೇತನ 10 ರಿಂದ 30 ಸಾವಿರ. ಸಂದರ್ಶನಕ್ಕೆ
ಹಾಜರುಪಡಿಸಬೇಕಾದ ದಾಖಲೆಗಳು
1) ವಿದ್ಯಾರ್ಹತೆ ಅಂಕ ಪತ್ರ 2) ಆಧಾರ್ ಕಾರ್ಡ್ 3) ಪಾನ್‌ಕಾರ್ಡ್ 4) ಬ್ಯಾಂಕ್ ಪಾಸ್ ಪುಸ್ತಕ 5) ಪಾಸ್‌ಪೋರ್ಟ್ ಸೈಜ್ ಫೋಟೋ–1
9886647852

E/F 30x40
ಸೈಟು ಮಾರಾಟಕ್ಕಿದೆ
DTCP 'A' ಖಾತೆ
15 ಲಕ್ಷದ 50 ಸಾವಿರಗಳು
ನಂಜುಂಡೇಶ್ವರ ನಗರ TVS
ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ಮನೆ ಬಾಡಿಗೆಗೆ ಇದೆ
ಒಂದನೇ ಮತ್ತು ಎರಡನೇ
ಮಹಡಿಯಲ್ಲಿ 2 ಬೆಡ್ ರೂಂನ
ಮನೆ, ಶ್ರೀರಾಂಪುರ ಮುಖ್ಯ
ರಸ್ತೆ, ವಿವೇಕಾನಂದ ಸರ್ಕಲ್
ಬಳಿ ವಾಣಿಜ್ಯೋದ್ದೇಶಕ್ಕೂ
ಸೂಕ್ತವಾಗಿದೆ.
9448047419

WANTED
Female Store Keeper for MEDICAL Distributor Near City bus stand Timings 10.00 to 7.30
7022345675
9739377827

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ
ವಸಂತನಗರ, ಶಾಂತವೇರಿ
ಗೋಪಾಲಗೌಡ ನಗರ,
ಸಪ್ತ ಮಾತೃಕ ಲೇಔಟ್,
ಪೊಲೀಸ್ ಲೇಔಟ್
ಜೆ.ಎಸ್.ಎಸ್.ಲೇಔಟ್
9844436672

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ (ಮಹಿಳೆ/ಪುರುಷರು)
ಭದ್ರತಾ ಸಿಬ್ಬಂದಿ (ರಾತ್ರಿ/ಹಗಲು
ಪಾಳೆಯ)ಸೂಪರ್‌ವೈಸರ್
(ವಯಸ್ಸು 20 ರಿಂದ 45) ಸಿಟಿ, ಸಿದ್ದಾರ್ಥ
ನಗರ, ಹೆಬ್ಬಾಳ್, ಮೇಟಗಳ್ಳಿ
ಸುತ್ತಮುತ್ತ ಉತ್ತಮ ಸಂಬಳ ವಿರುತ್ತದೆ.
9036745292
9900749104

BSNL LAYOUT SITE FOR SALE
ವಾಜಮಂಗಲ BSNL
ಲೇಔಟ್‌ನಲ್ಲಿ
50x80 ಅಳತೆಯ East
ಫೇಸಿಂಗ್ ಸೈಟ್
ಬೆಲೆ : 2300/–
9886048471

SITE FOR SALE
40x60 North Site Opp. Park Suvarna Layout Bogadi Bharthi Monarch
9880273834

ಸ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು
ವಯಸ್ಸು : 25 ರಿಂದ 45 ಒಳಗೆ
ಸ್ಥಳ: ಹೆಬ್ಬಾಳ್ ಇಂಡಸ್ಟ್ರೀಯಲ್ ಏರಿಯಾ
ಸೌಲಭ್ಯಗಳು: PF, ESI, Bonus, W/o, EL - Free Uniform.
ವೇತನ: ರೂ. 19000/–
9008794218
9538014456

ಮನೆ ಬಾಡಿಗೆಗೆ ಇದೆ
ರಾಜಶೇಖರ ಆಸ್ಪತ್ರೆ ಹಿಂಭಾಗ ಮನೆ
ನಂ.172, ರಾಗಿಮಿಲ್ 2ನೇ ಅಡ್ಡ ರಸ್ತೆ,
ಮೊದಲನೇ ಮಹಡಿ, 3 ಬೆಡ್ ರೂಂ.
ಹಾಲ್, ಅಡುಗೆ ಮನೆ, ಊಟದ
ಹಾಲ್, ದೇವರ ಮನೆ, ಸ್ನಾನದ ಮನೆ,
ಸೋಲಾರ್ ಗೀಸರ್,
ನೀರಿನ ಸೌಕರ್ಯ ಉತ್ತರ ಬಾಗಿಲು
7975023201
7815812948

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್
ಬಂಕಿನಲ್ಲಿ ಕೆಲಸ ಮಾಡಲು
ಪುರುಷರು/ಮಹಿಳೆಯರು
ಬೇಕಾಗಿದ್ದಾರೆ.
ಸಂಬಳ: 12000/–
9148187290

ಮನೆ ಭೋಗ್ಯಕ್ಕೆ
30x40, 2BHK ವಾರ್ಡ್ರೋಬ್,
ಸೋಲಾರ್ ಹಾಗೂ ಗೀಜರ್
ಉತ್ತಮವಾದ ನೀರಿನ
ಸೌಕರ್ಯದೊಂದಿಗೆ, ಪ್ರಕೃತಿ ಬಡಾವಣೆ
ಟಿ.ನರಸೀಪುರ ರಸ್ತೆ, ಮೈಸೂರು
ಛಾಯಾಸುತನ್ : ಮನೆ ನಂ. 275
7406743381

ಸುವರ್ಣಾವಕಾಶ
ಮೈಸೂರಿನಲ್ಲಿ ನೂತನವಾಗಿ ಶುರುವಾಗಿರುವ ಕಂಪನಿಗಳಿಗೆ ಮತ್ತು ಆಫೀಸ್‌ಗಳಿಗೆ Packing, Helper, Quality, Telephone attender, Receptionist, Typing, Drivers etc ಮುಂತಾದ ಕೆಲಸಗಳಿಗೆ 7th, SSLC, PUC, ITI, Any Degree, Pass/Fail, ಆದ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಬಳ 14,500 ರಿಂದ 39,500 (ESI+PF+OT) ಸೇರಿ.
6364103418, 9513829246

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ



ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮಾಜಿ ಶಾಸಕ ಡಾ.ಯತೀಂದ್ರ ವರುಣ ವಿಧಾನಸಭಾ ಕ್ಷೇತ್ರದ ಮೆಲ್ಲಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಮತಯಾಚನೆ ಮಾಡಿದರು. ಈ ವೇಳೆ ಅವರನ್ನು ಕಾಂಗ್ರೆಸ್ ಮುಖಂಡರಾದ ರವಿ ಎನ್.ಗೌಡ, ಟಿ.ಹರೀಶ್, ಅನುಕುಮಾರ್ ಗೌಡ, ರಾಜೇಶ್, ಬೋರೇಗೌಡ ಜೆ.ಬಿ.ರಕ್ಷಿತ್ ಮತ್ತಿತರರು ಅಭಿನಂದಿಸಿದರು.

ಒಂದನೇ ಪುಟದಿಂದ

ಮಾಜಿ ಪ್ರಧಾನಿ ದೇವೇಗೌಡರು

ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿರುವರು. ಮೈಸೂರು ಪ್ರವಾಸ ಮುಗಿಸಿ ಪ್ರಧಾನಿ ಅವರು, ಮಂಗಳೂರಿನಲ್ಲಿ ಬೃಹತ್ ರೋಡ್ ಶೋ ನಡೆಸಿ ಬಿಜೆಪಿ ಅಭ್ಯರ್ಥಿಗಳ ಪರ ಮತ ಯಾಚಿಸಲಿದ್ದಾರೆ. ಲೋಕಸಭಾ ಚುನಾವಣಾ ವೇಳಾಪಟ್ಟಿ ಪ್ರಕಟಕ್ಕೂ ಮುನ್ನವೇ ಮೋದಿ ಅವರು, ಶಿವಮೊಗ್ಗದಲ್ಲಿ ಬೃಹತ್ ರ್ಯಾಲಿ ಉದ್ದೇಶಿಸಿ ಮಾತನಾಡಿದ್ದರು. ಅಂದು ಐದು ಕ್ಷೇತ್ರಗಳ ಸಂಭಾವ್ಯ ಅಭ್ಯರ್ಥಿಗಳನ್ನು ವೇದಿಕೆ ಮೇಲೆ ಪಕ್ಕದಲ್ಲಿ ನಿಲ್ಲಿಸಿಕೊಂಡು ಮತದಾರರಿಗೆ ಪರಿಚಯ ಮಾಡಿಸಿದ್ದರು. ಇದಾದ ನಂತರ ಮೋದಿ ಎರಡನೇ ಬಾರಿಗೆ ರಾಜ್ಯದಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳುತ್ತಿದ್ದಾರೆ. ಮೋದಿ ಅವರು ಹಿಂತಿರುಗುತ್ತಿದ್ದಂತೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಏಪ್ರಿಲ್ 16ರಂದು ಚಿತ್ರದುರ್ಗ ಹಾಗೂ ತುಮಕೂರಿನಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚಿಸಲಿದ್ದಾರೆ.

ಬಿಜೆಪಿಗರಿಗೆ ಯಾವ ಹಕ್ಕಿಲ್ಲ

ಸೇರಿದಂತೆ ಆರ್‌ಎಸ್‌ಎಸ್ ಅಥವಾ ಬಿಜೆಪಿ ಗರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿ ಯಾಗಿದ್ದಲ್ಲಿ ನಾನು ರಾಜಕೀಯದಿಂದಲೇ ನಿವೃತ್ತಿ ಪಡೆಯುತ್ತೇನೆ. ಕಾಂಗ್ರೆಸ್ ಪಕ್ಷದ ಅನೇಕರು ಮಹಾತ್ಮ ಗಾಂಧಿ ನೇತೃತ್ವದಲ್ಲಿ ತಮ್ಮ ಪ್ರಾಣತ್ಯಾಗ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಆದ್ದರಿಂದ ಭಾರ ತಾಂಬೆಯ ಹೆಸರು ಹೇಳಲು ಹಕ್ಕಿರುವುದು ಕಾಂಗ್ರೆಸ್ ಪಕ್ಷದವರಿಗೆ ಹೊರತು ಬಿಜೆಪಿ ಪಕ್ಷದವರಿಗಲ್ಲ ಎಂದು ಕುಟುಕಿದರು.

ಪ್ರಧಾನಿ ಮೋದಿ ಭ್ರಷ್ಟರನ್ನು ಜೈಲಿಗೆ ಕಳುಹಿಸುವುದು ನನ್ನ ಕರ್ತವ್ಯವೆಂದು ಹೇಳಿಕೆ ನೀಡಿದ್ದಾರೆ. ಕಾನೂನು ಉಲ್ಲಂಘಿಸಿದವರನ್ನು ಜೈಲಿಗೆ ಹಾಕಲಿ ನಮ್ಮ ಅಭ್ಯಂತರವಿಲ್ಲ. ಆದರೆ ಚುನಾವಣಾ ಬಾಂಡ್ ಮೂಲಕ 7600 ಕೋಟಿ ರೂ.ಗಳನ್ನು ಬಿಜೆಪಿ ಪಕ್ಷಕ್ಕೆ ದೇಣಿಗೆ ಪಡೆದಿದ್ದಾರೆ. ಈ ಹಣಕ್ಕೆ 1 ರೂ. ತೆರಿಗೆ ಕಟ್ಟಿಲ್ಲ. ಈಗ ಯಾರನ್ನು ಜೈಲಿಗೆ ಕಳುಹಿಸಬೇಕು? ಎಂಬುದನ್ನು ನೀವೇ ಹೇಳಿ ಎಂದು ಜನರನ್ನು ಪ್ರಶ್ನಿಸಿದರು. ಇಡಿ, ಐಟಿ ಸಂಸ್ಥೆಗಳನ್ನು ತಮ್ಮ ಕೈಕೆಳಗೆ ಇಟ್ಟುಕೊಂಡಿರುವ ಬಿಜೆಪಿಗರು ಯಾವ ಸಾಕ್ಷಿ, ಆಧಾರವಿಲ್ಲದಿದ್ದರೂ ಸಹ ದೆಹಲಿ ಸಿಎಂ ಕೇಜ್ರಿವಾಲ್, ಜಾರ್ಖಂಡ್ ಸಿಎಂ ಹೇಮಂತ್ ಸೂರೈನ್ ಅವರನ್ನು ಜೈಲಿಗೆ ಕಳುಹಿಸಿದ್ದಾರೆ. ಎಷ್ಟು ಜನ ಬಿಜೆಪಿ ಪಕ್ಷದವರನ್ನು ಜೈಲಿಗೆ ಕಳುಹಿಸಿದ್ದಾರೆ? ಬಿಜೆಪಿಗರಿಗೆ ಪ್ರಜಾತಂತ್ರದಲ್ಲಿ ನಂಬಿಕೆಯಿಲ್ಲ. ಸರ್ವಾಧಿಕಾರದಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಇಂತವರಿಗೆ ನೀವು ಮತ ನೀಡಬೇಡಿ ಎಂದು ಹರಿಹಾಯ್ದರು.

ಅಚ್ಛೆದಿನ್ ಕಬ್ ಆಯೇಗಾ?: ಮೋದಿ ಕಳೆದ 10 ವರ್ಷದಲ್ಲಿ ಬಡವರ, ರೈತರ, ಮಹಿಳೆಯರ, ದಲಿತರ ಸಮಸ್ಯೆ, ನಿರುದ್ಯೋಗ, ಬೆಲೆ ಏರಿಕೆ ಬಗ್ಗೆ ಮಾತನಾಡಿಲ್ಲ. ನಡೆಸಿಲ್ಲ, ಅವರ ಸಮಸ್ಯೆಯನ್ನೂ ಆಲಿಸಿಲ್ಲ, ಸುದ್ದಿಗೋಷ್ಠಿಯನ್ನೂ ನಡೆಸಿಲ್ಲ, ಉದ್ಯೋಗ ಸೃಷ್ಟಿಸುತ್ತೇವೆ. ಅಚ್ಛೆದಿನ್ ಬರುತ್ತದೆ ಎಂದು ಸುಳ್ಳು ಹೇಳಿದ್ದಾರೆ. ಅಚ್ಛೆದಿನ್ ಕಬ್ ಆಯೇಗಾ, ಕಿಸುಕೋ ಆಯೇಗಾ, ನರೇಂದ್ರ ಮೋದಿ ಕ್ಯೂ ಜೂಟ್ ಬೋಲ್ದಿಯಾ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಎಂದಮು ಟೋಪಿ, ಬುರ್ಕಾ ಹಾಕಿರುವವರನ್ನು ಹತ್ತಿರ ಸೇರಿಸಿಕೊಳ್ಳುವುದಿಲ್ಲ ಎಂದು ಮೂದಲಿಸಿದರು.

ಸಮ್ಮಿಶ್ರ ಸರ್ಕಾರ ಬೀಳಿಸಿದ್ದು ಬಿಎಸ್‌ವೈ ಅಂಡ್ ಟೀಮ್: ಸಿದ್ದರಾಮಯ್ಯ ಸಮ್ಮಿಶ್ರ ಸರ್ಕಾರ ಬೀಳಿಸಿದ್ದಾರೆಂದು ಹೆಚ್‌ಡಿಕೆ ಆಪಾದಿಸುತ್ತಿದ್ದರು. ಇದೀಗ ಡಿ.ಕೆ.ಶಿವಕುಮಾರ್ ಬೀಳಿಸಿದ್ದಾರೆಂದು ಇಬ್ಬರ ಮಧ್ಯೆ ಜಗಳ ಶುರುವಾಗಿದೆ. ಸಮ್ಮಿಶ್ರ ಸರ್ಕಾರ ಬೀಳಿಸಿದ್ದು ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಕಂಪನಿಯೇ ಹೊರತು ಸಿದ್ದರಾಮಯ್ಯರಲ್ಲ. ಈಗ ಅವರೇ ಬಾಯಿ ಬಾಯಿ ಎನ್ನುತ್ತಿದ್ದಾರೆ ಎಂದರು.

ನುಡಿದಂತೆ ನಡೆದಿದ್ದೇನೆ: ನಾನು 2013ರಲ್ಲಿ ಮತ್ತು ಈಗ 5 ಗ್ಯಾರಂಟಿಗಳನ್ನೂ ಜಾರಿಗೊಳಿಸಿ ನುಡಿದಂತೆ ನಡೆದಿದ್ದೇನೆ. ಮೋದಿ ಅವರಂತೆ ಸುಳ್ಳು ಹೇಳಿಲ್ಲ. ಮೋದಿರವರು 5 ಗ್ಯಾರಂಟಿ ಜಾರಿ ಮಾಡಿದ್ದೇ ಆದಲ್ಲಿ ಸರ್ಕಾರ ದಿವಾಳಿಯಾಗುತ್ತದೆ ಎಂದಿದ್ದರು. ಆದರೆ ಗ್ಯಾರಂಟಿ ಯೋಜನೆಗಳಿಗೆ 52 ಸಾವಿರ ಕೋಟಿ ನಿಗದಿಪಡಿಸಿ ರಾಜ್ಯದ ಅಭಿವೃದ್ಧಿಗೂ 68 ಸಾವಿರ ಕೋಟಿ ಮೀಸಲಿಟ್ಟಿದ್ದೇವೆ ಎಂದರು.

ಬಿಜೆಪಿ ಅಭ್ಯರ್ಥಿ ಸೋಲಿಸಿ ಸುನೀಲ್ ಬೋಸ್ ಗೆಲ್ಲಿಸಿ: ಮುಖ್ಯಮಂತ್ರಿಯಾಗಿ ನಮ್ಮ ಪಕ್ಷದ ಅಭ್ಯರ್ಥಿ ಪರ ಮತ ನೀಡಿ ಎಂದು ಕೇಳುವುದು ನನ್ನ ಕರ್ತವ್ಯ. ಆದ್ದರಿಂದ ಬಿಜೆಪಿ ಅಭ್ಯರ್ಥಿ ಸೋಲಿಸಿ ನಮ್ಮ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಿ ಎಂದು ಕರೆ ನೀಡಿದರು. ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಜಾರಕಿಹೋಳಿ, ಪಶುಸಂಗೋಪನೆ ಸಚಿವ ವೆಂಕಟೇಶ್, ಶಾಸಕರಾದ ದರ್ಶನ್, ಗಣೇಶ್‌ಪ್ರಸಾದ್, ಡಾ.ತಿಮ್ಮಯ್ಯ, ಎ.ಆರ್.ಕೃಷ್ಣಮೂರ್ತಿ, ತನ್ವೀರ್ ಸೇಠ್, ಪುಟ್ಟರಂಗಶೆಟ್ಟಿ, ಮಾಜಿ ಶಾಸಕರಾದ ಕಳಲೆಕೇಶವಮೂರ್ತಿ, ನಂಜುಂಡಸ್ವಾಮಿ, ಧರ್ಮಸೇನಾ, ಮಾಜಿ ಸಚಿವ ಸೋಮಶೇಖರ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಪಂ ಮಾಜಿ ಸದಸ್ಯರಾದ ಲತಾಸಿದ್ದಶೆಟ್ಟಿ, ಕೆ.ಮಾರುತಿ, ದಯಾನಂದಮೂರ್ತಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಮುಖಂಡರಾದ ತಮ್ಮಣ್ಣೇಗೌಡ, ಬುಲೆಟ್ ಮಹದೇವಪ್ಪ, ಇಂಧನ್‌ಬಾಬು, ನಂದಕುಮಾರ್, ಎನ್.ಟಿ.ಗಿರೀಶ್, ಮೂಗಶೆಟ್ಟಿ, ಹಿರೇಹಳ್ಳಿ ಸೋಮೇಶ್ ಸೇರಿದಂತೆ ಹಲವರಿದ್ದರು.

ಆರೋಪಿಗಳ ಬಂಧನ

ಮತ್ತು ಪ್ರೈವೆಟ್ ಲಾಡ್ಜ್‌ಗಳಲ್ಲಿ ಮಾತ್ರ ತಂಗುತ್ತಿದ್ದರು, ಯಾಕೆಂದರೆ ಅಲ್ಲಿ ಹೆಚ್ಚಿನ ಮಾಹಿತಿಯನ್ನು ಮಾಲೀಕರು ಕೇಳುತ್ತಿರಲಿಲ್ಲ ಎಂಬುದು ತಿಳಿದುಬಂದಿದೆ. ಈ ಕಾರ್ಯಾ ಚರಣೆಯಲ್ಲಿ ಎನ್‌ಐಎಗೆ ಕೇಂದ್ರ ಗುಪ್ತಚರ ದಳ ಹಾಗೂ ಪಶ್ಚಿಮ ಬಂಗಾಳ, ತೆಲಂಗಾಣ, ಕರ್ನಾಟಕ ಮತ್ತು ಕೇರಳ ಪೊಲೀಸರು ಸಹಕಾರ ನೀಡಿದ್ದರು. ಉಗ್ರರ ಸುಳಿವನ್ನು ಮೊದಲು ಕ್ಯಾಪ್ ನೀಡಿತ್ತು. ಅದನ್ನು ಚೆನ್ನೈನ ಮಾಲ್‌ನಲ್ಲಿ ಖರೀದಿಸಿದ್ದರು. ಚೆನ್ನೈನಲ್ಲಿ ಒಂದಷ್ಟು ಸಮಯ ಲಾಡ್ಜ್‌ನಲ್ಲಿ ತಂಗಿದ್ದರು. ಸ್ಫೋಟದ ಬಳಿಕ ನಿರಂತರವಾಗಿ ತಮ್ಮ ಸ್ಥಳಗಳನ್ನು ಬದಲಾಯಿಸುತ್ತಾ ಪಶ್ಚಿಮ ಬಂಗಾಳಕ್ಕೆ ಬಂದು ಸೇರಿದ್ದರು ಎಂದಿರುವ ಹೆಸರು ಹೇಳಲಿ ಚ್ಛಿಸದ ಅಧಿಕಾರಿ, ವೆರಿಫಿಕೇಷನ್ ಮಾಡದೇ ಜನರಿಗೆ ಕೊಠಡಿ ಕೊಡುವ ಲಾಡ್ಜ್‌ಗಳಿರುವ ಸಣ್ಣ ಸಣ್ಣ ಪ್ರವಾಸೋದ್ಯಮ ಪಟ್ಟಣಗಳನ್ನು ನಾವು ಟ್ರ್ಯಾಕ್ ಮಾಡುತ್ತಾ ಸಾಗಿದೆವು. ಕೊನೆಗೆ ನಮಗೆ ಪಶ್ಚಿಮ ಮಿದನ್‌ಪುರದ ದಿಗಾದಲ್ಲಿ ಉಗ್ರರು ಸಿಕ್ಕಿಬಿದ್ದಿದ್ದಾರೆ ಎಂದು ಅವರು ಹೇಳಿದ್ದಾರೆ.

ಸುಳಿವು ನೀಡಿದ್ದ ಪ್ರೀಮಿಯಂ ಟೋಪಿ: ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇಟ್ಟಿದ್ದ ಶಂಕಿತ ಉಗ್ರನಿಗಾಗಿ ತನಿಖೆ ಶುರು ಮಾಡಿದಾಗ ಎನ್‌ಐಎ ಅಧಿಕಾರಿಗಳ ಬಳಿ ಸಿಸಿಟಿವಿ ದೃಶ್ಯಗಳು ಬಿಟ್ಟರೇ ಬೇರೇನು ಸುಳಿವು ಇರಲಿಲ್ಲ. ಆದರೆ, ಶಂಕಿತ ಉಗ್ರ ಧರಿಸಿದ್ದ ಟೋಪಿ ಎನ್‌ಐಎಗೆ ಸಿಕ್ಕ ತಕ್ಷಣ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿತ್ತು. ಬೆಂಗಳೂರಿನ ಹೂಡಿ ಬಳಿ ಬಟ್ಟೆ ಬದಲಾಯಿಸಿದ್ದ ಉಗ್ರ, ಟೋಪಿಯನ್ನು ಅಲ್ಲೇ ಬಿಸಾಡಿ ಹೋಗಿದ್ದ. ಆ ಟೋಪಿಯ ಜಾಡು ಹಿಡಿದು ಹೋದ ಪೊಲೀಸರು ಚೆನ್ನೈನಲ್ಲಿ ಬಂದು ನಿಂತಿದ್ದರು. ಬಾಂಬರ್ ಮುಸಾವೀರ್ ಹುಸೇನ್ ಶಜೀಬ್ ಹಾಗೂ ಮಾಸ್ಟರ್ ಮೈಂಡ್ ಅಬ್ದುಲ್ ಮತೀನ್ ತಹಾ ಚೆನ್ನೈನ ಆರ್‌ಕೆ ಸಲಾಂಯ್ ಮಾಲ್‌ನಲ್ಲಿ ಟೋಪಿಯನ್ನು ಖರೀದಿಸಿದ್ದರು.

ತಿಂಗಳಿಗೂ ಹೆಚ್ಚು ಕಾಲ ಇಬ್ಬರೂ ಚೆನ್ನೈನ ಟ್ರಿಪ್ಲಿಕೇನ್‌ನಲ್ಲಿ ತಂಗಿದ್ದರು. ಮುಸಾವೀರ್ ಧರಿಸಿದ್ದ ಟೋಪಿ ಪ್ರೀಮಿಯಂ ಬ್ರಾಂಡ್‌ನ ಟೋಪಿ ಆಗಿದ್ದು ಈ ಬ್ರಾಂಡ್ ಟೋಪಿಗಳು ಇಡೀ ದಕ್ಷಿಣ ಭಾರತದಲ್ಲಿ ಕೇವಲ 400 ಮಾತ್ರ ಮಾರಾಟವಾಗಿದ್ದರಿಂದ ಎನ್‌ಐಎಗೆ ಸುಲಭವಾಗಿ ಆರೋಪಿಯ ಮಾಹಿತಿ ಸಿಕ್ಕಿತ್ತು. ಅದಾದ ಬಳಿಕ ಸಿಸಿಟಿವಿ ದೃಶ್ಯಗಳನ್ನು ಗಮನಿಸಿದಾಗ ಎನ್‌ಐಎ ಅಧಿಕಾರಿಗಳಿಗೆ ಬಾಂಬರ್ ಇವನೇ ಎಂಬುದು ಗೊತ್ತಾಗಿತ್ತು.

ಬಾಂಗ್ಲಾದೇಶಕ್ಕೆ ಎಸ್ಕೇಪ್ ಪ್ಲಾನ್: ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇಟ್ಟಿದ್ದ ಬಾಂಬರ್ ಬಳಿಕ ತುಮಕೂರು, ಬಳ್ಳಾರಿ, ಬೀದರ್ ಮೂಲಕ ರಾಜ್ಯದಿಂದ ಪರಾರಿಯಾಗಿದ್ದ. ಮುಸಾವೀರ್ ಹುಸೇನ್ ಶಜೀಬ್ ಆಂಧ್ರ ಪ್ರದೇಶದ ಮೂಲಕ ಪಶ್ಚಿಮ ಬಂಗಾಳಕ್ಕೆ ತೆರಳಿದ್ದ ಎನ್ನಲಾಗಿದೆ. ಅಲ್ಲಿಂದ ಬಾಂಗ್ಲಾದೇಶಕ್ಕೆ ಪರಾರಿಯಾಗುವ ಯೋಚನೆಯಲ್ಲಿ ಅಬ್ದುಲ್ ಮತೀನ್ ತಹಾ ಹಾಗೂ ಮುಸಾವೀರ್ ಶಜೀಬ್ ಇದ್ದರು ಎನ್ನಲಾಗಿದೆ. ಪಶ್ಚಿಮ ಬಂಗಾಳದ ಪಕ್ಕವೇ ಬಾಂಗ್ಲಾದೇಶ ಇರುವುದರಿಂದ ಅಲ್ಲಿಂದ ಬೇರೆ ಕಡೆ ತಲೆಮರೆಸಿಕೊಳ್ಳುವ ಯೋಚನೆಯಲ್ಲಿ ಶಂಕಿತರು ಇದ್ದರು ಎಂದು ಹೇಳಲಾಗಿದೆ. ಆದರೆ, ಪಶ್ಚಿಮ ಬಂಗಾಳಕ್ಕೆ ಉಗ್ರರು ಎಂಟ್ರಿ ಕೊಟ್ಟ 2 ಗಂಟೆಯಲ್ಲೇ ಅವರನ್ನು ಅಲ್ಲಿನ ಪೊಲೀಸರ ಸಹಕಾರದಿಂದ ಉಗ್ರರನ್ನು ಬಂಧಿಸಲಾಗಿದೆ.

ಕಾಂಪೌಂಡ್ ಮೇಲೆ ಚಿತ್ತಾಕರ್ಷಕ ಸಂದೇಶಗಳ ಮೂಲಕ ಮತದಾನ ಜಾಗೃತಿ





ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿನ ನಗರ ಪಾಲಿಕೆ ವಲಯ ಕಚೇರಿ–6 ಕಾಂಪೌಂಡ್‌ನಲ್ಲಿರುವ ಗೋಡೆ ಬರಹದ ಬಳಿ ಚಾಮರಾಜ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಹಾಗೂ ಪಾಲಿಕೆ ಅಧಿಕಾರಿಗಳು ಮತದಾನ ಜಾಗೃತಿ ಮೂಡಿಸಿದರು. ಮತ್ತೊಂದು ಚಿತ್ರದಲ್ಲಿ ಚಿತ್ತಾಕರ್ಷಕ ಗೋಡೆ ಬರಹವನ್ನು ಕಾಣಬಹುದು.

ಮೈಸೂರು, ಏ.12(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ವಲಯ ಕಚೇರಿ 6ರ ಕಾಂಪೌಂಡ್‌ನಲ್ಲಿ ಮತದಾನದ ಮಹತ್ವ ಸಾರುವ ಚಿತ್ತಾರ ಎಲ್ಲರ ಗಮನ ಸೆಳೆಯುತ್ತಿದ್ದು, ಕಚೇರಿ ಆವರಣವೂ ಮತದಾನ ಜಾಗೃತಿ ಕೇಂದ್ರವಾಗಿ ರೂಪಾಂತರಗೊಂಡಿದೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ನಗರ ಪಾಲಿಕೆ ಸಹಯೋಗದಲ್ಲಿ ನಗರದ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಾಲಿಕೆ ವಲಯ ಕಚೇರಿ–6ರ ಆವರಣವನ್ನು ಅತ್ಯಾಕರ್ಷಕವಾಗಿ ಸಜ್ಜುಗೊಳಿಸಿ, ವಿಶಿಷ್ಟ ರೀತಿಯಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಕಾಂಪೌಂಡ್‌ನಲ್ಲಿ ವಿವಿಧ ಚಿತ್ತಾರಗಳೊಂದಿಗೆ ಮತದಾನದ ಮಹತ್ವ ಸಾರುವಂತಹ ಗೋಡೆ ಬರಹಗಳು ಮನ ಸೆಳೆಯುತ್ತವೆ. 'ನಮ್ಮ ಮತ ಅಮೂಲ್ಯವಾದುದು, ಬನ್ನಿ ಮತದಾನ ಕೇಂದ್ರಕ್ಕೆ', 'ಬನ್ನಿ ಮತ ಚಲಾಯಿಸಿ, ಚಲಾಯಿಸುವ ಹಕ್ಕು ನಿಮ್ಮ ಕೈಯ್ಯಲ್ಲಿದೆ' ಎಂಬಿತ್ಯಾದಿ ಘೋಷವಾಕ್ಯಗಳ ಮೂಲಕ ಜಾಗೃತಿ ಮೂಡಿಸಲಾಗಿದೆ. ವಲಯ ಕಚೇರಿಗೆ ಮತದಾನದ ದಿನಾಂಕದ ಜೊತೆಗೆ ತಪ್ಪದೇ ಮತ ಹಾಕುವಂತೆ ಮನವಿ ಮಾಡುವ ಸ್ವಾಗತ ಕಮಾನು ನಿರ್ಮಿಸಲಾಗಿದೆ. ಜೊತೆಗೆ ಇಲ್ಲಿರುವ ಸೆಲ್ಫೀ ಪಾಯಿಂಟ್ ಎಲ್ಲರ ಗಮನ ಸೆಳೆಯುತ್ತದೆ.

ಅಭಿಯಾನಕ್ಕೆ ಚಾಲನೆ: ಚಾಮರಾಜ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ವೆಂಕಟರಾಜು, ವಲಯ ಕಚೇರಿ–6ರ ಆವರಣದಲ್ಲಿ ಶುಕ್ರವಾರ ಮತದಾನದ ಸೆಲ್ಫೀ ಕೌಂಟರ್ ಉದ್ಘಾಟಿಸಿ, 'ನಾನು ಮತದಾನ ಮಾಡುತ್ತೇನೆ' ಎಂಬ ಹಸ್ತಾಕ್ಷರ ಸಂಗ್ರಹಣಾ ಅಭಿಯಾನಕ್ಕೆ ಚಾಲನೆ ನೀಡಿದರು. ಮತದಾನಕ್ಕಿಂತ ಮಹತ್ವದ ಕೆಲಸ ಬೇರೊಂದಿಲ್ಲ. ಏ.26ರಂದು ಎಲ್ಲಾ ಮತದಾರರು ತಪ್ಪದೇ ಮತದಾನ ಮಾಡುವ ಮೂಲಕ ತಮ್ಮ ಹಕ್ಕು ಚಲಾಯಿಸಬೇಕು ಎಂದು ಇದೇ ವೇಳೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ವಲಯ ಆಯುಕ್ತೆ ವಾಣಿ ವಿ.ಆಳ್ವ, ಅಭಿ ವೃದ್ಧಿ ಅಧಿಕಾರಿ ವೆಂಕಟೇಶ್, ಪರಿಸರ ಇಂಜಿನಿಯರ್ ಮೈತ್ರಿ, ಸಹಾಯಕ ಕಂದಾಯಾಧಿಕಾರಿಗಳಾದ ಸಿದ್ದರಾಜು ಮತ್ತು ಅಶೋಕ್, ಕಿರಿಯ ಇಂಜಿನಿಯರ್ ಕೃಷ್ಣಮೂರ್ತಿ, ಹಿರಿಯ ಆರೋಗ್ಯ ನಿರೀಕ್ಷಕರು, ಕಂದಾಯ ಪರಿಶೀಲಕರು, ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಬಸವಣ್ಣ ಮನುಕುಲ ಬಾಳುವ ಸಂವಿಧಾನ ನೀಡಿದ್ದಾರೆ

ಕಾಂಗ್ರೆಸ್ ಮುಖಂಡ ಪ್ರದೀಪ್ ಕುಮಾರ್ ಅಭಿಮತ



ಮೈಸೂರಿನ ಬೋಗಾದಿಯ ವಿಶ್ವ ವಚನ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಬಸವಣ್ಣನವರ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಏ.12(ಬಿಎಲ್‌ಯು)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಭಾರತಕ್ಕೆ ಸಂವಿಧಾನ ಕೊಟ್ಟರೆ, ಮನುಕುಲ ಬಾಳುವ ಸಂವಿಧಾನವನ್ನು ಸಾಮಾಜಿಕ ಕ್ರಾಂತಿಕಾರ ಬಸವಣ್ಣ ನೀಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡರೂ ಆದ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಪ್ರದೀಪ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಬೋಗಾದಿಯ ವಿಶ್ವ ವಚನ ಫೌಂಡೇಷನ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವಣ್ಣನವರ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಬಸವಣ್ಣನವರು ಕರ್ನಾಟಕಕ್ಕೆ ಮಾತ್ರವಲ್ಲದೆ ಇಡೀ ವಿಶ್ವಕ್ಕೆ ಮಾನವತಾವಾದಿಯಾಗಿ ಸಮಾನತೆಯ ಸಂದೇಶ ಸಾರಿದ್ದಾರೆ ಎಂದರು. ಬುದ್ಧ, ಬಸವ, ಅಂಬೇಡ್ಕರ್‌ರವರು ಮನುಕುಲದ ಸಮನ್ವಯತೆಯ ದಾರಿ ತೋರಿದವರು. ಇವರ ವಚನ, ತತ್ವ, ಸಿದ್ಧಾಂತ, ಬೋಧನೆಯಲ್ಲಿ ಭಾವಕ್ಯತೆಯ ಸಂದೇಶವಿದೆ ಎಂದು ಪ್ರದೀಪ್ ಕುಮಾರ್ ಹೇಳಿದರು.

ಬಸವಣ್ಣನವರ ಅನುಭವ ಮಂಟಪ ವಿಶ್ವದ ಪ್ರಜಾಪ್ರಭುತ್ವದ ಮೊದಲ ಸಂಸತ್ತಾಗಿದೆ. ಆದ ಕಾರಣ ಬಸವಣ್ಣನವರನ್ನು ವೀರಶೈವ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸದೆ ವಿಶ್ವನಾಯಕರಾಗಿ ನೋಡಬೇಕು ಎಂದು ಪ್ರದೀಪ್ ಕುಮಾರ್ ಸಲಹೆ ನೀಡಿದರು. ನಿವೃತ್ತ ಜಂಟಿ ನಿರ್ದೇಶಕ ಶಿವಮಾದಪ್ಪ, ನಿವೃತ್ತ ಉಪ ನಿರ್ದೇಶಕ ಸ್ವಾಮಿ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಮಲ್ಲಿಕಾರ್ಜುನ್, ಮರಿಮಲ್ಲಪ್ಪ ವಿದ್ಯಾ ಸಂಸ್ಥೆಯ ಶಿಕ್ಷಣಾಧಿಕಾರಿ ಮಂಗಳ, ಶರಣು ವಿಶ್ವ ವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ, ರೂಪ ಕುಮಾರಸ್ವಾಮಿ, ವೀರಭದ್ರ ಸ್ವಾಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿಮಾನ ನಿಲ್ದಾಣದಲ್ಲಿ 5.50 ಲಕ್ಷ ರೂ. ಜಪ್ತಿ

ಮೈಸೂರು, ಏ.12– ಮೈಸೂರು ವಿಮಾನ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬರ ಬಳಿ ಇದ್ದ ದಾಖಲೆಯಿಲ್ಲದ 5.50 ಲಕ್ಷ ರೂ. ಹಣವನ್ನು ಜಪ್ತಿ ಮಾಡಲಾಗಿದೆ.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ತೆರೆಯಲಾಗಿರುವ ಚೆಕ್‌ಪೋಸ್ಟ್‌ನಲ್ಲಿ ಪ್ರಯಾಣಿಕರ ತಪಾಸಣೆ ನಡೆಸುವಾಗ ಹೈದರಾಬಾದ್‌ಗೆ ತೆರಳುತ್ತಿದ್ದ ಮೊಹಮ್ಮದ್ ಜಾಸಿನ್ ಅವರ ಬಳಿ 5.50 ಲಕ್ಷ ರೂ. ಪತ್ತೆಯಾಗಿದೆ. ಆದರೆ ಆ ಹಣಕ್ಕೆ ಸೂಕ್ತ ದಾಖಲೆ ನೀಡಿಲ್ಲ. ಆದ್ದರಿಂದ ಆ ಹಣವನ್ನು ಎಸ್‌ಎಸ್‌ಟಿ ಅಧಿಕಾರಿ ಶಿವಕುಮಾರ್ ಹಾಗೂ ತಂಡದವರು ವಶಪಡಿಸಿಕೊಂಡಿದ್ದಾರೆ.

ಬಳಿಕ ಸಹಾಯಕ ಚುನಾವಣಾಧಿಕಾರಿ ನಂದೀಶ್ ಹಾಗೂ ತಹಶೀಲ್ದಾರ್ ಮಹೇಶ್ ಕುಮಾರ್ ನಿರ್ದೇಶನದಂತೆ ಜಪ್ತಿ ಮಾಡಲಾಗಿದ್ದ ಹಣವನ್ನು ನೋಡಲ್ ಅಧಿಕಾರಿ ವಿಶ್ವನಾಥ್ ತಂಡದ ಗುರು, ಚೇತನ್, ಸತೀಶ್ ಪಾಲ್ ಹಾಗೂ ಮಹೇಶ್ ಜಿಲ್ಲಾ ಖಜಾನೆ ಭದ್ರತಾ ಕೊಠಡಿಗೆ ತಲುಪಿಸಿದರು ಎಂದು ತಿಳಿದುಬಂದಿದೆ.

ಮೈಸೂರು ರಂಗಾಯಣದಲ್ಲಿ ಚಿಣ್ಣರ ಮೇಳಕ್ಕೆ ಚಾಲನೆ



'ಸಮರಸವೇ ಜೀವನ' ಶೀರ್ಷಿಕೆಯಡಿ ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ಚಿಣ್ಣರ ಮೇಳಕ್ಕೆ ಇಂಡಿಯಾ ಬುಕ್ ಆಫ್ ರೆಕಾರ್ಡ್ ದಾಖಲಿಸಿದ ಬೆಂಗಳೂರಿನ ಬಾಲ ಕಲಾವಿದ ಗೋಕುಲ ಸಹೃದಯ, ರಂಗಭೂಮಿ ಕಲಾವಿದೆ ಎಂ.ಎಸ್.ನುಡಿ ಸೇರಿದಂತೆ ಇತರೆ ಗಣ್ಯರು ಚಿಣ್ಣರ ಮೇಳದ 'ತೇರನ್ನು' ಎಳೆಯುವ ಮೂಲಕ ಶುಕ್ರವಾರ ಚಾಲನೆ ನೀಡಿದರು.

ಮೈಸೂರು, ಏ.12(ಎಸ್‌ಪಿಎನ್)– ಮೈಸೂರು ರಂಗಾಯಣ ಆವರಣದ ವನರಂಗದಲ್ಲಿ ರಂಗಾಯಣದ ವತಿಯಿಂದ 'ಸಮರಸವೇ ಜೀವನ' ಶೀರ್ಷಿಕೆಯಡಿ ಆಯೋಜಿಸಿರುವ ಚಿಣ್ಣರ ಮೇಳಕ್ಕೆ ಇಂಡಿಯಾ ಬುಕ್ ಆಫ್ ರೆಕಾರ್ಡ್ ದಾಖಲಿಸಿದ ಬೆಂಗಳೂರಿನ ಬಾಲ ಕಲಾವಿದ ಗೋಕುಲ ಸಹೃದಯ, ರಂಗಭೂಮಿ ಕಲಾವಿದೆ ಎಂ.ಎಸ್.ನುಡಿ ಸೇರಿದಂತೆ ಇತರೆ ಗಣ್ಯರು 2024ರ ಚಿಣ್ಣರ ಮೇಳದ 'ತೇರನ್ನು' ಎಳೆಯುವ ಮೂಲಕ ಶುಕ್ರವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಬಾಲ ಕಲಾವಿದ ಗೋಕುಲ ಸಹೃದಯ, ಎಳೆಯರು ಚಿಣ್ಣರ ಮೇಳಕ್ಕೆ ಬರುವ ಮೊದಲು ಆಟವಾಡಲಿಕ್ಕೆ ಈ ಶಿಬಿರ ಅಂದು ಕೊಂಡಿರುತ್ತಾರೆ. ಈ ಜಾಗದಲ್ಲಿ ಕೆಲ ದಿನಗಳು ಕಳೆದ ನಂತರ ಮಕ್ಕಳ ಮನಸ್ಸಿನಲ್ಲಿ ಸಾಕಷ್ಟು ಬದಲಾವಣೆ ಕಾಣುತ್ತದೆ. ಓದಿನಲ್ಲಿ ಏಕಾಗ್ರತೆ, ತನ್ಮಯತೆ ರೂಢಿಸಿಕೊಳ್ಳಲು ಚಿಣ್ಣರ ಮೇಳದ ಚಟುವಟಿಕೆಗಳು ಸಹಕಾರಿಯಾಗುತ್ತದೆ. ಇದು ಮಕ್ಕಳಲ್ಲಾಗುವ ಮಹತ್ವರ ಬದಲಾವಣೆ ಎಂದರು. ಪೋಷಕರು, ತಮ್ಮ ಮಕ್ಕಳನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸುವುದರಿಂದ ಮಕ್ಕಳ ಮನಸ್ಸಿನಲ್ಲಿ ಏನಾದರೂ ಸಾಧಿಸಬೇಕೆಂಬ ಛಲ ಬೆಳೆಯುತ್ತದೆ. ಮುಂದೆ ಅವರು, ಓದಿನಲ್ಲಿ ಹಾಗೂ ಪಠ್ಯೇತರ ಚಟುವಟಿಕೆ ಎರಡರಲ್ಲೂ ತೊಡಗಿಸಿಕೊಳ್ಳಲು ಬಯಸುತ್ತಾರೆ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು. ನಾನು, ಕಳೆದ ನಾಲ್ಕೈದು ವರ್ಷಗಳಿಂದ ಮಕ್ಕಳ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದೇನೆ. 'ಚಿಟ್ಟೆ' ನಾಟಕದಲ್ಲಿ ಪಾತ್ರವೊಂದರಲ್ಲಿ ಅಭಿನಯಿಸಿದ್ದೇನೆ. ಇದರಿಂದ ನನ್ನ ಓದಿನ ಮೇಲೆ ಯಾವುದೇ ಪರಿಣಾಮ ಬೀರಿಲ್ಲ. ಬದಲಾಗಿ, ಮತ್ತಷ್ಟು ಓದಿನಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ. ಕ್ಲಿಷ್ಟಕರ ಸಂದರ್ಭವನ್ನು ಸುಲಭವಾಗಿ ನಿರ್ವಹಿಸಲು ರಂಗಭೂಮಿ ನನಗೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ಬೆಂಗಳೂರಿನ ಹವ್ಯಾಸಿ ರಂಗಭೂಮಿ ಕಲಾವಿದೆ ಎಂ.ಎಸ್.ನುಡಿ ಮಾತನಾಡಿ, ನಾನು ಕಳೆದ ಹಲವು ವರ್ಷಗಳ ಹಿಂದೆ ರಂಗಾಯಣದ ಚಿಣ್ಣರ ಮೇಳದ ಶಿಬಿರಾರ್ಥಿಯಾಗಿದ್ದೆ. ಅಂದಿನ ಅನುಭವಗಳನ್ನು ಇಂದು ನೆನಪಿಸಿಕೊಂಡರೂ ಪುಳಕಿತಗೊಳ್ಳುತ್ತೇನೆ. ಇಲ್ಲಿನ ಹಿರಿಯ ಕಲಾವಿದೆ ಗೀತಾ ಮೋಂಟಡ್ಕ ವಿವಿಧ ಪ್ರಾಣಿ–ಪಕ್ಷಿಗಳ ಧ್ವನಿಯನ್ನು ಮಿಮಿಕ್ರಿ ಮಾಡಿ ರಂಜಿಸುತ್ತಿದ್ದರು. ಆ ಕಲೆಯನ್ನು ನಾನು ಕಲಿತುಕೊಳ್ಳಲು ಪ್ರಯತ್ನಿಸಿದ್ದೇನೆ. ಅಲ್ಲದೆ, ರಂಗಾಯಣ ಸಂಯೋಜಿಸುವ ಚಿಣ್ಣರ ಮೇಳ ವಿಶಿಷ್ಟವಾಗಿರುತ್ತದೆ. ಈ ಶಿಬಿರದಲ್ಲಿ ಭಾಗವಹಿಸಿದ್ದರಿಂದ ನನ್ನ ಮುಂದಿನ ಜೀವನ ರೂಪಿಸಿಕೊಳ್ಳಲು ಸಹಕಾರಿಯಾಗಿರುವುದು ಹೆಮ್ಮೆಯ ವಿಷಯ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ರಂಗಾಯಣ ಆಯೋಜಿಸುವ ಚಿಣ್ಣರ ಮೇಳ, ಮಕ್ಕಳಲ್ಲಿ ಸಮಾನತೆ, ಭ್ರಾತೃತ್ವ, ಸಹಬಾಳ್ವೆ ಕಲಿಸಿಕೊಡುವ ವೇದಿಕೆ. ಈ ವೇದಿಕೆಯನ್ನು ಪೋಷಕರು ಸಮರ್ಥವಾಗಿ ಬಳಸಿಕೊಳ್ಳಬೇಕು. ಮಕ್ಕಳನ್ನು ಸದಾ ಓದುವಂತೆ ಪೀಡಿಸುವ ಬದಲು ಆಟ–ಪಾಠದೊಂದಿಗೆ ಓದಿನಲ್ಲಿ ತೊಡಗಿಸುವುದು ಉತ್ತಮ. ಈ ಮಾದರಿಯನ್ನು ಚಿಣ್ಣರ ಮೇಳ ಕಲಿಸಿಕೊಡುತ್ತದೆ ಎಂದು ತಿಳಿಸಿದರು.

ಬಾಲ ಕಲಾವಿದ ಗೋಕುಲ ಸಹೃದಯ, ಕಲಾವಿದೆ ಎಂ.ಎಸ್.ನುಡಿ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಉತ್ತಮ ಜೀವನ ರೂಪಿಸಿಕೊಳ್ಳುತ್ತಿದ್ದಾರೆ. ಎಂ.ಎಸ್.ನುಡಿ ಅವರು, ಚಿಣ್ಣರ ಮೇಳದಲ್ಲಿ ಕಲಿತು ಈಗ ಹವ್ಯಾಸಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ವಿಷಯ ಎಂದರು. ಈ ವೇಳೆ ಚಿಣ್ಣರ ಮೇಳದ ಸಂಚಾಲಕಿ ಗೀತಾ ಮೋಂಟಡ್ಕ, ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಕೃಷ್ಣಮೂರ್ತಿ ಕವತ್ತಾರು ನಿರ್ದೇಶನದ ಬೇಲೂರು ರಘುನಂದನ ರಚಿತ, ಗೋಕುಲ ಸಹೃದಯ ಅಭಿನಯಿಸಿರುವ 'ಚಿಟ್ಟೆ' ನಾಟಕ ಪ್ರದರ್ಶನಗೊಂಡು ಪ್ರೇಕ್ಷರನ್ನು ಸೆಳೆಯಿತು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC ಮತ್ತು ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ:
(II Marriages Also)
9343175000

ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಚಿಕ್ಕಳ್ಳಿ, ಜೆಪಿ ನಗರ, ಶ್ರೀರಾಂಪುರ, ಕೋಟೆ ಹುಂಡಿ ಸುತ್ತ ಮುತ್ತ ಇರುವ ಪ್ರದೇಶಗಳಿಗೆ, ಎಸ್.ಎಸ್.ಎಲ್.ಸಿ ಪಾಸ್/ಫೇಲ್
7483962689

ಉಚಿತ ಭವಿಷ್ಯ
ಸಿಂಗಂದೂರು ಚೌಡೇಶ್ವರಿ ಜ್ಯೋತಿಷ್ಯ ದಂಪತಿ ಸಮಸ್ಯೆ ಸಾಲದ ಬಾದೆ ಕೋರ್ಟ್ ಕೇಸ್, ಮನೆಯಲ್ಲಿ ನೆಮ್ಮದಿ ಇಲ್ಲವಾ ಪ್ರೀತಿಯಲ್ಲಿ ಮೋಸ ನಿಮ್ಮ ಸಮಸ್ಯೆ ಯಾವುದೇ ಇದ್ದರೂ ಅತಿ ಶೀಘ್ರ ಪರಿಹಾರ ಕೊಳ್ಳೇಗಾಲದಿಂದ ಪರಿಹಾರ ಕೊಳ್ಳೇಗಾಲಕ್ಕೆ ನೇರವಾಗಿ ಬಂದು ಭೇಟಿ ಕೊಡಿ ನಿಮ್ಮ ಯಾವುದೇ ಸಮಸ್ಯೆ ಇದ್ದರೂ ಫೋನಿನ ಮೂಲಕ ಪರಿಹಾರ
ವಿಷ್ಣುಕಾಂತ ಜೋಶಿ, ಕೊಳ್ಳೇಗಾಲ
9148540496

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ 12 ಗಂಟೆ Duty ಹಗಲು ಮತ್ತು ರಾತ್ರಿ ಕೆಲಸ ಮಾಡಲು ವಿದ್ಯಾವಂತ, ಅನುಭವವಿರುವ 50 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ಮಾಸಿಕ 15000/– ಸಾವಿರ ESI & PF ಸೌಲಭ್ಯವಿರುತ್ತದೆ.
9731976148

ಆಕ್ಸಿನ್ಸ್ (ಔಟ್ ಲೇಟ್)
ನಮ್ಮಲ್ಲಿ * ತೆಂಗಿನ ಗೊಬ್ಬರ * ಎರೆಹುಳು ಗೊಬ್ಬರ * ಸಾವಯುವ ಗೊಬ್ಬರ * ತೆಂಗಿನ ನಾರಿನ ಉತ್ಪನ್ನಗಳು ಹಾಗೂ ಹೋಂ ಗಾರ್ಡನ್ ಕಿಟ್ ಮತ್ತು ಗ್ರೋಬ್ಯಾಗ್ಸ್ ದೊರೆಯುತ್ತದೆ.
ಸಂಪರ್ಕಿಸಿ: # 301, ಹೆಬ್ಬಾಳ್ ಕೈಗಾರಿಕ ಪ್ರದೇಶ ಭರತ್ ಕ್ಯಾನ್ಸರ್ ಆಸ್ಪತ್ರೆ ಹತ್ತಿರ ರಿಂಗ್ ರೋಡ್, ಮೈಸೂರು
9480640467

ಸೈಟು ಮಾರಾಟಕ್ಕಿದೆ
30x36 (1080 Sqft) N/F ದ್ವಾರಕ ನಗರ ಶ್ರೀರಾಂಪುರ ರಿಂಗ್ ರಸ್ತೆ ಹತ್ತಿರ ಬೆಲೆ 46 ಲಕ್ಷ (ನೆಗೋಷಿಯಬಲ್)
9986331438

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC
ಸಂಬಳ: 17500/- (26 days)
ESI & PF ಸೌಲಭ್ಯವಿರುತ್ತದೆ.
9620667819
9538567819

ಬೇಕಾಗಿದ್ದಾರೆ
ಮೈಸೂರಿನ ಕಾಂಟೂರ್ ರಸ್ತೆಯಲ್ಲಿರುವ ಎಸ್‌ಎಸ್ ಟೀ ಕಾರ್ನರ್ ನಂದಗೋಕುಲ ಬಡಾವಣೆ ಜಯದೇವ ಆಸ್ಪತ್ರೆ ಹಿಂಭಾಗ ಎಸ್ ಎಸ್ ಟೀ ಕಾರ್ನರ್‌ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ತಕ್ಷಣ ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ:
9591566927

ಸೈಟು ಬೇಕಾಗಿದೆ
ವರುಣ ಬಸವೇಶ್ವರ ಲೇಔಟ್ JSS ಲೇಔಟ್, ನಿರ್ಮಾಣ್ ನಗರ, ಮಹಾಲಕ್ಷ್ಮಿ ಲೇಔಟ್ ಹಾಗೂ ಸುತ್ತಮುತ್ತ ಇರುವ ಲೇಔಟ್‌ಗಳಲ್ಲಿ
9844436672

ಹೋಂ ನರ್ಸಿಂಗ್ ಕೆಲಸ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹೋಂ ನರ್ಸ್ ಹುಡುಗರು/ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ ಮತ್ತು ಅಡುಗೆ ಮನೆ ಕೆಲಸದವರು ಸಂಪರ್ಕಿಸಿ ಉಳಿದುಕೊಳ್ಳಲು ವ್ಯವಸ್ಥೆ ಲಭ್ಯ ಉತ್ತಮ ಸಂಬಳ Day Night ಅಥವಾ 24 hrs ಕೆಲಸ ಮಾಡುವವರು ಸಂಪರ್ಕಿಸಿ:
8123252840

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ
6361740552

SHRIRAM Life Insurance YOUR PARTNER FOR PROSPERITY
RECRUITING
Posting - Marketing Executive, Sales Manager,
Location: Chamarajanagar, Mysuru, Madikeri, Hunsur, Kushalanagar,
Eligibility: Any Graduates with 2-3 year Sales Experience. Age: 21-40
Remuneration: At par with the industry + Performance Based incentive
WALK IN INTERVIEW
On: 15th April 2024 B/W: 10.00 am - 04.00 PM in Mysore At: Shriram Life Insurance Co.Ltd No. 1111/115, 1st Floor, Siri, Vinobha Road, Opp. Rajakamal Theatre, Shivarampet, Devarajamohalla, Mysore-570001.
9980921064, 9686455625

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ದೇಶದ ಭದ್ರತೆ, ಅಭಿವೃದ್ಧಿಗೆ ಹೆಚ್‌ಡಿಕೆಗೆ ಮತ ನೀಡಿ

ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮನವಿ



ಕೆ.ಆರ್.ನಗರ, ಏ.12– ದೇಶದಲ್ಲಿ ರಾಜಕೀಯ ಧ್ರುವೀಕರಣ ಆಗುತ್ತಿದ್ದು, ದೇಶದ ಭದ್ರತೆ ಹಾಗೂ ಅಭಿವೃದ್ಧಿಗೆ ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ, ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಮನವಿ ಮಾಡಿದರು.

ತಾಲೂಕಿನ ಇತಿಹಾಸ ಪ್ರಸಿದ್ಧ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುವ ಮೂಲಕ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ನಾನು ಬಿಜೆಪಿಯ ವಿಧಾನ ಪರಿಷತ್ ಸದಸ್ಯನಾಗಿದ್ದು, ಮೈತ್ರಿ ಧರ್ಮ ಪಾಲಿಸುತ್ತಿದ್ದೇನೆ. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಋಣ ನಮ್ಮ ಮೇಲಿದ್ದು, ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಹೆಚ್ಚು ಮತಗಳನ್ನು ಕೊಡಿಸುವ ಮೂಲಕ ಆ ಋಣ ತೀರಿಸುತ್ತೇವೆ ಎಂದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸಚಿವರು ಹಾಗೂ ಮುಖಂಡರು ತಮ್ಮ ಅಭ್ಯರ್ಥಿ ಸಾಧನೆ ಹಾಗೂ ಕೇಂದ್ರದಲ್ಲಿ ಸರ್ಕಾರ ರಚಿಸುವ ಬಗ್ಗೆ ಮಾತನಾಡದೇ ಕೇವಲ ವೈಯಕ್ತಿಕ ಟೀಕೆ ಮಾಡುತ್ತಿರುವುದನ್ನು ನೋಡಿದರೆ ಈಗಾಗಲೇ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋತಿರುವ ಹಾಗೆ ಕಾಣುತ್ತಿದೆ. ರೈತರ ಹಾಗೂ ಸಾಮಾನ್ಯ ಜನರ ಬಗ್ಗೆ ಸದಾ ಚಿಂತಿಸುವ ಹೃದಯವಂತ ಅಭ್ಯರ್ಥಿ ಕುಮಾರಸ್ವಾಮಿ ಅವರನ್ನು 3 ಲಕ್ಷಕ್ಕೂ ಹೆಚ್ಚು ಮತಗಳಿಂದ ಗೆಲ್ಲಿಸುವ ಮೂಲಕ ಲೋಕಸಭೆಗೆ ಕಳುಹಿಸಿ ಕೊಡಬೇಕಾದ ಜವಾಬ್ದಾರಿ ಮಂಡ್ಯ ಜಿಲ್ಲೆ ಮಹಾಜನತೆ ಮೇಲಿದೆ ಎಂದರು.

ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಕೆ.ಆರ್.ಪೇಟೆಯಿಂದ 70 ಸಾವಿರಕ್ಕೂ ಹೆಚ್ಚು ಲೀಡ್ ಕೊಡುವ ಮೂಲಕ ಇತಿಹಾಸ ಬರೆಯುತ್ತೇವೆ. ಅದನ್ನು ತಡೆಯಲು ಮಂಡ್ಯ ಲೋಕಸಭಾ ವ್ಯಾಪ್ತಿಯ ಸಚಿವರು ಹಾಗೂ ಶಾಸಕರಿಗೆ ಇದೆಯೇ ಎಂದು ಪ್ರಶ್ನಿಸಿದ ಅವರು ಕೆ.ಆರ್.ನಗರದಲ್ಲಿ ಜೋಡಿ ಗೂಳಿಗಳು ಒಂದಾಗಿದ್ದು, ಇಬ್ಬರೂ ಪ್ರಚಾರಕ್ಕೆ ಹೋದರೆ ಕೆ.ಆರ್. ನಗರದಿಂದಲೂ ಕುಮಾರಸ್ವಾಮಿ ಅವರಿಗೆ 50 ಸಾವಿರ ಮತಗಳ ಲೀಡ್ ಸಿಗಲಿದೆ ಎಂದರು.

ಮಾಜಿ ಪ್ರಧಾನಿ ದೇವೇಗೌಡರ ಕುಟುಂಬ ಜನಸೇವೆಗೆ ಮೀಸಲಾಗಿದೆಯೇ ಹೊರತು ವೈಯಕ್ತಿಕ ಸಾಧನೆಗಾಗಿ ಅಲ್ಲ. ದೇವೇಗೌಡರು ನೀರಾವರಿ ಸಚಿವರಾಗಿದ್ದಾಗ ಕೆ.ಆರ್.ನಗರ, ಕೆ.ಆರ್.ಪೇಟೆ ಹಾಗೂ ನಾಗಮಂಗಲ ಭಾಗದ ರೈತರ ಬವಣೆ ಕಾಲುವೆ ನಿರ್ಮಿಸಿ ನೀರು ಹರಿಸಿದ ಮಣ್ಣಿನ ಮಗ ಎಂಬುದನ್ನು ಮರೆಯಬಾರದು. ಅವರ ಪುತ್ರ ಕುಮಾರಸ್ವಾಮಿ 2 ಬಾರಿ ಸಿಎಂ ಆಗಿ ಜನಮಾನಸದಲ್ಲಿ ಉಳಿಯುವಂತಹ ಕೆಲಸ ಮಾಡುವ ಮೂಲಕ ರೈತರ 28 ಸಾವಿರ ಕೋಟಿ ಸಾಲ ಮನ್ನಾ ಮಾಡಿದ ಏಕೈಕ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರಿಗೆ ಮತ ನೀಡುವ ನಾವೇ ಪುಣ್ಯವಂತರು ಎಂದು ವರ್ಣಿಸಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ರಾಜ್ಯ ಸರ್ಕಾರ ಒಂದೇ ಒಂದು ಅಕ್ಕಿ ಕಾಳು ನೀಡುತ್ತಿಲ್ಲ. ನೀಡುತ್ತಿರುವ 5 ಕೆಜಿ ಅಕ್ಕಿ ಕೇಂದ್ರ ಸರ್ಕಾರದ್ದು. ಪುಕ್ಕಟ್ಟೆ ಪ್ರಚಾರ ಪಡೆಯುತ್ತಿರುವ ರಾಜ್ಯ ಸರ್ಕಾರ ಪ್ರಚಾರಕ್ಕಾಗಿಯೇ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಿದೆ ಎಂದು ಆರೋಪಿಸಿದರು.

ಈ ಬಾರಿ ಮನೆ ಮನೆಗೆ ಬಂದು ಪ್ರಚಾರ ಮಾಡಲು ಸಾಧ್ಯವಾಗದೇ ಇರುವುದರಿಂದ ಪ್ರತಿಯೊಬ್ಬ ತಾಯಂದಿರು ಪ್ರತಿಯೊಬ್ಬ ಮತದಾರ ಬಂಧುಗಳು ಕಾಂಗ್ರೆಸ್ ಮುಖಂಡರು, ನಾಯಕರು ಮಾಡುವ ಅಪಪ್ರಚಾರಕ್ಕೆ ಕಿವಿಗೊಡದೆ ನಾವೇ ಕುಮಾರಸ್ವಾಮಿ ಎಂದು ಭಾವಿಸಿ ಮಾಜಿ ಸಚಿವ ವಿಶ್ವನಾಥ್ ಮತ್ತು ನಾನು ಸೇರಿದಂತೆ ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ಪ್ರತಿಯೊಬ್ಬರ ಮನೆಗೆ ಹೋಗಿ ತಿಳಿಸುವ ಮೂಲಕ ಜೆಡಿಎಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ಮತ ನೀಡುವಂತೆ ಮನವಿ ಮಾಡಿದರು.

ಈ ವೇಳೆ ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಮಾಜಿ ಜಿಪಂ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ ಸದಸ್ಯರಾದ ಅಮಿತ್ ವಿ ದೇವರಹಟ್ಟಿ, ದ್ವಾರಕೀಶ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ಕುಮಾರ್, ರಾಜಣ್ಣ, ಕೆ.ಎಲ್.ರಮೇಶ್, ದಾಕ್ಷಾಯಿಣಿ, ಕುಚೇಲ, ಗಣೇಶ, ಬಾಲಾಜಿ, ಮಹೇಶ, ಕಿಶೋರ, ಕೀರ್ತಿ, ಸೋಮಶೇಖರ್, ನಾಗಣ್ಣ ಇನ್ನಿತರರಿದ್ದರು.

ರವಿಶಂಕರ್ ವಿರುದ್ಧ ವಾಗ್ದಾಳಿ

ನಾನೇನು ಮಾಡಿಲ್ಲ ಎಂದು ನಮ್ಮೂರಿನ ಶಾಸಕರು ಹೇಳಿದ್ದಾರೆ. ಆದರೆ ನಿನ್ನ ಮತ್ತು ನಿಮ್ಮ ಅತ್ತೆಯನ್ನು ಜಿಪಂ ಸದಸ್ಯರಾಗಿ ಮಾಡಿದ್ದು ನಾನು. ಬಿಜೆಪಿಯಲ್ಲಿದ್ದ ನಿನ್ನ ಹಾಗೂ ನಿಮ್ಮಪ್ಪ ದೊಡ್ಡಸ್ವಾಮೀಗೌಡರನ್ನು ಕರೆ ತಂದು ಕಾಂಗ್ರೆಸ್‌ನಿಂದ ಟಿಕೆಟ್ ಕೊಡಿಸಿದೆ. ಕಾಂಗ್ರೆಸ್ ಪಕ್ಷದ ಟಿಕೆಟ್ ಕೊಡಿಸುವುದು ಸುಲಭದ ಮಾತಲ್ಲ. ಅವತ್ತೇ ನನ್ನ ಮಗ ಅಮಿತ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರೆ ಎಂಎಲ್‌ಎ ಆಗಿರುತ್ತಿದ್ದ. ತಾವು ಮಾಡಿದ ಉಪಕಾರವನ್ನು ಹೇಳಿ, ಸತ್ಯ ಎಲ್ಲರಿಗೂ ಗೊತ್ತಾಗಲಿ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಶಾಸಕ ಡಿ.ರವಿಶಂಕರ್ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಖರ್ಗೆ ಪ್ರಧಾನಿ

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ



ಸುನೀಲ್ ಬೋಸ್ ಪರ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮತಯಾಚಿಸಿದರು.

ತಿ.ನರಸೀಪುರ, ಏ.12– ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರಧಾನಿಯಾಗುವ ವಿಫುಲ ಅವಕಾಶವಿದೆ. ಹೀಗಾಗಿ ಮತದಾರರು ಕಾಂಗ್ರೆಸ್ ಬೆಂಬಲಿಸಬೇಕೆಂದು ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮನವಿ ಮಾಡಿದರು.

ತಾಲೂಕಿನ ಸೋಮನಾಥಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿ ಮಾತನಾಡಿದ ಅವರು, ಕ್ಷೇತ್ರದ ಇತಿಹಾಸದಲ್ಲೇ ಕಾಂಗ್ರೆಸ್ ಸೋತ ಉದಾಹರಣೆ ಇಲ್ಲ. ಕಾಂಗ್ರೆಸ್‌ನ ಒಳಜಗಳದಿಂದ ಒಮ್ಮೆ ಜೆಡಿಎಸ್ ಗೆದ್ದಿತ್ತು. ಇದೀಗ ನಮ್ಮ ಅಭ್ಯರ್ಥಿ ಸುನೀಲ್ ಬೋಸ್ ಸಹ ಗೆದ್ದಾಗಿದೆ. ಅಧಿಕೃತ ಘೋಷಣೆ ಮಾಡಬೇಕಿದೆ ಅಷ್ಟೇ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಈ ಭಾಗದ ಮತದಾರರು ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬಲ ತುಂಬಬೇಕೆಂಬ ಅಭಿಲಾಷೆ ಹೊಂದಿದ್ದಾರೆ. ಹಾಗಾಗಿ ಈ ಬಾರಿ ನಮ್ಮ ಅಭ್ಯರ್ಥಿ ಸುನೀಲ್ ಬೋಸ್ ಅವರಿಗೆ ಹೆಚ್ಚಿನ ಮತ ನೀಡಿ ಅವರನ್ನು ಗೆಲ್ಲಿಸಲಿದ್ದಾರೆ ಎಂದರು.

ತಿ.ನರಸೀಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚು ಅಂತರದಿಂದ ಗೆದ್ದರೆ ಸಚಿವ ಮಹದೇವಪ್ಪ, ಸಿಎಂ ಸಿದ್ದರಾಮಯ್ಯ ಅವರಿಗೆ ಗೌರವ ಸಿಕ್ಕಂತಾಗುತ್ತದೆ. ಅಲ್ಲದೇ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಖರ್ಗೆ ರಾಜ್ಯದ 2ನೇ ಪ್ರಧಾನಿಯಾಗುವ ಸಾಧ್ಯತೆ ಇರುವುದರಿಂದ ಕ್ಷೇತ್ರದ ಮತದಾರರು ಪಕ್ಷವನ್ನು ಬೆಂಬಲಿಸಬೇಕೆಂದು ಮನವಿ ಮಾಡಿದರು.

ಜಿಪಂ ಮಾಜಿ ಸದಸ್ಯೆ ಸುಧಾ ಮಹದೇವಯ್ಯ ಮಾತನಾಡಿ, ಕಾಂಗ್ರೆಸ್ 5 ಗ್ಯಾರಂಟಿಗಳನ್ನು ಜಾರಿಗೆ ತಂದು ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಗೃಹಲಕ್ಷ್ಮಿ ಯೋಜನೆಯಿಂದ ಎಷ್ಟೋ ಬಡ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದೆ. ಯುವ ನಿಧಿಯಿಂದ ನಿರುದ್ಯೋಗಿ ಯುವಕರಿಗೆ ಸಹಾಯವಾಗಿದೆ. ಶಕ್ತಿ ಯೋಜನೆ ಯಿಂದ ಲಕ್ಷಾಂತರ ಮಹಿಳೆಯರು ಸ್ವಾವಲಂಬನೆ ಸಾಧಿಸುವ ಕಡೆಗೆ ಹೆಜ್ಜೆ ಇಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ರಾಜ್ಯದ ಬಡ ಜನರ ಪರವಾಗಿ ಕೆಲಸ ಮಾಡುತ್ತಿದ್ದು ರಾಜ್ಯದಲ್ಲಿ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. ಚಾಮರಾಜನಗರ ಕ್ಷೇತ್ರದಲ್ಲಿ ಸುನೀಲ್ ಬೋಸ್ ಅತ್ಯಧಿಕ ಬಹುಮತಗಳ ಅಂತರದಿಂದ ಜಯ ಸಾಧಿಸಲಿದ್ದು, ಪಕ್ಷದ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಹೆಚ್ಚಿನ ಮತ ಕೊಡಿಸುವಲ್ಲಿ ಶ್ರಮವಹಿಸಿ ಕೆಲಸ ಮಾಡುವಂತೆ ಮನವಿ ಮಾಡಿದರು.

ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿದರು. ಮೈಮುಲ್ ನಿರ್ದೇಶಕ ಆರ್.ಚೆಲುವರಾಜ್, ಅನಿಲ್ ಬೋಸ್, ಮಾಜಿ ಜಿಪಂ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಂಜುನಾಥ, ಕೆಪಿಸಿಸಿ ಸದಸ್ಯ ಮಲ್ಲಿಕಾರ್ಜುನ ಸ್ವಾಮಿ, ತಾಪಂ ಸದಸ್ಯ ರಾಮಲಿಂಗಯ್ಯ, ಮಹದೇಶ್ವರ ಬಸ್ ಮಾಲೀಕ ಕೆ.ನಾಗೇಂದ್ರ, ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ಸಿದ್ದರಾಮ, ಕೆ.ಎಂ.ಮಧುಕುಮಾರ್, ಮಹಿಳಾ ಘಟಕದ ಅಧ್ಯಕ್ಷ ಲತಾ ಜಗದೀಶ್, ಬನ್ನೂರು ಪುರಸಭೆ ಮಾಜಿ ಅಧ್ಯಕ್ಷ ಡಿ.ಪದ್ಮನಾಭ, ಲಕ್ಷ್ಮಿ ನಾರಾಯಣ ಮತ್ತಿತರರಿದ್ದರು.

ಹುಣಸೂರು ಅಭಿವೃದ್ಧಿಗೆ ಯದುವೀರ್‌ಗೆ ಮತ ನೀಡಿ

ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ



ಹುಣಸೂರು, ಏ.12– ತಾಲೂಕಿನ ಸಮಗ್ರ ಅಭಿವೃದ್ಧಿಗೆ ಎನ್‌ಡಿಎ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಮತ ನೀಡಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಮನವಿ ಮಾಡಿದರು.

ನಗರದ ಆದಿನಾರಾಯಣ ಶೆಟ್ಟಿ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದಿನಕ್ಕೆ 20 ಗಂಟೆಗಳ ಕಾಲ ದೇಶಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡು ದುಡಿಯುತ್ತಿರುವ ಮಹಾನ್ ನೇತಾರ ಮೋದಿ ಅವರು ಮತ್ತೆ ಪ್ರಧಾನಿಯಾಗುವುದನ್ನು ಯಾರು ತಪ್ಪಿಸಲು ಸಾಧ್ಯವಿಲ್ಲ. ಎನ್‌ಡಿಎ ಮೈತ್ರಿಕೂಟ 400 ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೆ ಮೋದಿ ಪ್ರಧಾನಿಯಾಗಲಿದ್ದಾರೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈಸೂರು ಅರಸರ ಕುಡಿ ಯದುವೀರ್ ಸರಳತೆ ಕುರಿತು ಮಾತನಾಡುತ್ತಿದ್ದ ಟೀಕಾಕಾರರಿಗೆ ಉತ್ತರವಾಗಿದೆ. ಯದುವಂಶದ ರಾಜರ ಕೊಡುಗೆ ಅನನ್ಯ. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನರಿಗೆ ಬೇಸರ ತರಿಸಿದೆ. ರಸ್ತೆ ಗುಂಡಿಯನ್ನು ಮಣ್ಣು ಹಾಕಿ ಮುಚ್ಚಲೂ ಕೂಡ ಸರ್ಕಾರ ಅನುದಾನ ನೀಡುತ್ತಿಲ್ಲ. ನಗರದಲ್ಲಿ ಕಳೆದ 15 ವರ್ಷಗಳಿಂದ ಆಶ್ರಯ ಯೋಜನೆಯಡಿ ಬಡವರಿಗೆ ವಸತಿ ಸೌಲಭ್ಯ ಸಿಕ್ಕಿಲ್ಲ. ಇಂತಹ ಶಾಶ್ವತ ಕಾರ್ಯ ಮುಖ್ಯವೇ ಅಥವಾ ಗ್ಯಾರಂಟಿ ಯೋಜನೆ ಮುಖ್ಯವೇ ಎನ್ನುವುದನ್ನು ಮತದಾರರು ಯೋಚಿಸಬೇಕು. ನೂತನ ಟಿಸಿ ಅಳವಡಿಕೆಗೆ ಸರ್ಕಾರ 3 ಲಕ್ಷ ರೂ. ಭರಿಸಲು ರೈತರಿಗೆ ಸೂಚಿಸಿದೆ. ಇದು ನ್ಯಾಯವೇ? ಹಾಗಾಗಿ ಲೋಕಸಭಾ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಯದುವೀರ್ ಅವರನ್ನು ಆಯ್ಕೆ ಮಾಡುವ ಮೂಲಕ ಕೇಂದ್ರ ಪುರಸ್ಕೃತ ಯೋಜನೆಗಳ ಸಂಪೂರ್ಣ ಬಳಕೆ ಮಾಡಿಕೊಳ್ಳೋಣ. ಇಬ್ಬರೂ ಒಟ್ಟಾಗಿ ದುಡಿದು ತಾಲೂಕಿನ ಅಭಿವೃದ್ಧಿಗೆ ಶ್ರಮಿಸಲಿದ್ದೇವೆ. ಜನತೆ ಆಶೀರ್ವದಿಸಬೇಕು ಎಂದರು.

ಅಭ್ಯರ್ಥಿ ಯದುವೀರ್ ಮಾತನಾಡಿ, ಕಾಂಗ್ರೆಸ್ ಅವಧಿಯಲ್ಲಾದ ಅಭಿವೃದ್ಧಿ ಕಾರ್ಯಗಳ ಹತ್ತು ಪಟ್ಟು ಅಭಿವೃದ್ಧಿಯನ್ನು ಕಳೆದ 10 ವರ್ಷಗಳಲ್ಲಿ ಮೋದಿ ಸರ್ಕಾರ ಮಾಡಿದೆ. 40 ವಂದೇ ಭಾರತ್ ರೈಲು, ಸಾವಿರಕ್ಕೂ ಹೆಚ್ಚು ವಿಶ್ವವಿದ್ಯಾನಿಲಯಗಳು, 700ಕ್ಕೂ ಹೆಚ್ಚು ಮೆಡಿಕಲ್ ಕಾಲೇಜುಗಳು, ರೈತರಿಗಾಗಿ ಕಿಸಾನ್ ಸಮ್ಮಾನ್ ಯೋಜನೆ, ಹೀಗೆ ಮೋದಿಜಿಯವರ ಅಭಿವೃದ್ಧಿ ಕಾರ್ಯಗಳು ಮನೆ ಮಾತಾಗಿವೆ. 10 ವರ್ಷದಿಂದ ಒಂದು ದಿನವೂ ವಿಶ್ರಮಿಸದೇ ದುಡಿಯುತ್ತಿರುವ ನೇತಾರ ಮೋದಿ ಅವರ ಆಸೆಯಂತೆ ನಾನು ಚುನಾವಣೆಗೆ ಸ್ಪರ್ಧಿಸಿದ್ದೇನೆ. ವೈಯಕ್ತಿಕವಾಗಿ ನಾನು ಹುಣಸೂರಿನ ಮೊಮ್ಮಗನಾಗಿದ್ದೇನೆ. ಹಾಗಾಗಿ ನಾನು ನಿಮ್ಮೆಲ್ಲರ ಮನೆ ಮಗನಾಗಿ ತಾಲೂಕಿನ ಅಭಿವೃದ್ಧಿಗೆ ದುಡಿಯುತ್ತೇನೆ ಎಂದರು.

ಈ ವೇಳೆ ಮಾಜಿ ಸಚಿವ ರಾಮದಾಸ್, ಬಿಜೆಪಿ ನಗರಮಂಡಲ ಮಾಜಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ, ನಾರಾಯಣ, ಕಾಂತರಾಜು, ನಾಗಣ್ಣಗೌಡ, ಮಂಗಳಾ ಸೋಮಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ, ದೇವರಾಜ ಒಡೆಯರ್, ದೇವರಳ್ಳಿ ಸೋಮಶೇಖರ್, ಕೃಷ್ಣರಾಜ ಗುಪ್ತ, ಶರವಣ, ವಿವೇಕ್, ಸತೀಶ್‌ಕುಮಾರ್, ನಿಂಗರಾಜ ಮಲ್ಲಾಡಿ, ಶಿವಶೇಖರ್ ಇತರರಿದ್ದರು.

ತಂದೆ ಬಾಲರಾಜ್ ಪರ ಪುತ್ರ ಯೋಗಾಂಶು ಪ್ರಚಾರ



ಬಿದರಹಳ್ಳಿಯ ಮಾರಿಯಮ್ಮ ದೇವಾಲಯದಲ್ಲಿ ಬಿಜೆಪಿ ಅಭ್ಯರ್ಥಿ ಬಾಲರಾಜು ಅವರ ಪುತ್ರ ಯೋಗಾಂಶು ವಿಶೇಷ ಪೂಜೆ ಸಲ್ಲಿಸಿದರು.

ಹೆಚ್.ಡಿ.ಕೋಟೆ, ಏ.12– ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ನನ್ನ ತಂದೆ ಬಾಲರಾಜ್ ಅವರನ್ನು ಗೆಲ್ಲಿಸುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಅವಕಾಶ ಮಾಡಿಕೊಡಬೇಕು ಎಂದು ಬಿಜೆಪಿ ಅಭ್ಯರ್ಥಿ ಬಾಲರಾಜು ಅವರ ಪುತ್ರ ಯೋಗಾಂಶು ಮನವಿ ಮಾಡಿದರು.

ತಾಲೂಕಿನ ಬಿದರಹಳ್ಳಿ ಗ್ರಾಮದ ಮಾರಿಯಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬೀಚನಹಳ್ಳಿ ಹಾಗೂ ಬಿದರಹಳ್ಳಿ ಗ್ರಾಮಸ್ಥರಿಂದ 25 ಸಾವಿರ ದೇಣಿಗೆ ಸ್ವೀಕರಿಸಿ, ತಮ್ಮ ತಂದೆ ಪರ ಮತಯಾಚಿಸಿ ಮಾತನಾಡಿದ ಅವರು, ಗ್ರಾಮದ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿದ್ದೇವೆ. ಪ್ರಚಾರ ಕಾರ್ಯದಲ್ಲಿ ನನ್ನ ಜೊತೆ ಬಿಜೆಪಿ, ಜೆಡಿಎಸ್‌ನ ಎಲ್ಲಾ ಮುಖಂಡರು ಪಾಲ್ಗೊಂಡಿದ್ದಾರೆ. ಈ ಚುನಾವಣೆಯಲ್ಲಿ ನನ್ನ ತಂದೆ ಬಾಲರಾಜು ಅವರನ್ನು ಆಶೀರ್ವದಿಸಿ ಅವರನ್ನು ಅಧಿಕ ಮತಗಳಿಂದ ಜಯಶೀಲರನ್ನಾಗಿ ಮಾಡಬೇಕು. ಇದಕ್ಕಾಗಿ ನಾನು ಕೋಟೆ, ಸರಗೂರು ತಾಲೂಕಿನ ಜನತೆಗೆ ಚಿರಋಣಿಯಾಗಿರುತ್ತೇನೆ ಎಂದರು.

ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಮಾತನಾಡಿ, ಭಾರತವನ್ನು ಸುಭದ್ರ ದೇಶವನ್ನಾಗಿ ಮಾಡಲು ಹಾಗೂ ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಿ ಮಾಡುವ ಉದ್ದೇಶದಿಂದ ರಾಜ್ಯದಲ್ಲಿ ಬಿಜೆಪಿ, ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿವೆ. ಹೀಗಾಗಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲರಾಜ್ ಅವರನ್ನು ಅಧಿಕ ಮತಗಳಿಂದ ಗೆಲ್ಲಿಸಲು ಶ್ರಮಿಸಬೇಕು ಎಂದರು.

ಮುಖಂಡ ಎಂ.ಕೆ.ಗಣೇಶ್ ಮಾತನಾಡಿ, ಭಾರತ ಮತ್ತಷ್ಟು ಅಭಿವೃದ್ಧಿಯಾಗಲು ಮತ್ತೆ ಮೋದಿ ಅವರು ದೇಶದ ಪ್ರಧಾನಿಯಾಗಬೇಕು. ಕೋಟೆ, ಸರಗೂರು ತಾಲೂಕಿನ ಸಮಗ್ರ ಅಭಿವೃದ್ಧಿಗೆ ಈಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಾಲರಾಜ್ ಅವರನ್ನು ಬೆಂಬಲಿಸಬೇಕು ಎಂದು ತಿಳಿಸಿದರು.

ಈ ವೇಳೆ ಹಿರಿಯ ಮುಖಂಡ, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ದಿವಂಗತ ಎಂ.ಕೆ. ಕೃಷ್ಣ ಅವರ ಭಾವಚಿತ್ರಕ್ಕೆ ಮುಖಂಡರು ಪುಷ್ಪಾರ್ಚನೆ ನೆರವೇರಿಸಿದರು. ಮುಖಂಡರಾದ ಕಾಶಿಪತಿ, ಸತ್ಯ, ಕಾತುರಾಯನ್, ಬಾಲರಾಮು, ಸೋಮ, ಚಂದ್ರೇಗೌಡ, ಬಸವಣ್ಣ, ಪೊನ್ನಸ್ವಾಮಿ, ಧರ್ಮ, ರವಿ, ಅರವಿಂದ, ಶ್ರೀಧರ್, ನಾಗೇಂದ್ರ, ಸದಾನಂದ, ಮಾಂತೇಶ್, ಶಿವಣ್ಣ ಬಿಂದು, ರೇವಮ್ಮ, ವಿಜಯ, ದೊರೆಸ್ವಾಮಿ, ದೇವದಾಸ್, ಸೂರ್ಯ, ಮನೋಜ್ ಇತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಬಡೇ ಮಿಯಾನ್ ಚೋಟೆ ಮಿಯಾನ್ (ಕ)	2 ಪ್ರದರ್ಶನಗಳು
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಮುಕ್ತ ಮನಸ್ಸು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.15ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.25ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 2	ಅಪ್ಪ ಐ ಲವ್‌ಯು (ಕ): ಬೆ.10.20ಕ್ಕೆ, ಮುಕ್ತ ಮನಸ್ಸು (ಕ): ಮ.1.10ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ಸಂ.4.20ಕ್ಕೆ, ವರ್ಷನ್‌ಗಲ್ಲು ಶೇಷಂ (ಮ): ರಾ.7.10ಕ್ಕೆ, ಆವೇಶಂ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.55ಕ್ಕೆ, ರೊಮಿಯೋ (ತ): ಮ.1.25ಕ್ಕೆ, ಡಿಯರ್ (ತ): ಸಂ.4.15ಕ್ಕೆ, ಮೈದಾನ್ (ಹಿಂ): ಸಂ.6.55ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ವರ್ಷನ್‌ಗಲ್ಲು ಶೇಷಂ (ಮ): ಬೆ.10.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ಯುವ (ಕ): ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.50ಕ್ಕೆ, ಮ.3ಕ್ಕೆ, ರಾ.10ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (3ಡಿ) (ಹಿಂ): ಸಂ.6.30ಕ್ಕೆ.
ಸ್ಕ್ರೀನ್ 2	ಮೈದಾನ್ (ಹಿಂ): ಬೆ.9.50ಕ್ಕೆ, ಮ.1.40ಕ್ಕೆ, ಸಂ.5.30ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.9.40ಕ್ಕೆ, ಅಪ್ಪ ಐ ಲವ್‌ಯು (ಕ): ಮ.1.10ಕ್ಕೆ, ಅವತಾರ ಪುರುಷ 2 (ಕ): ಸಂ.4.15ಕ್ಕೆ, ಯುವ (ಕ): ಸಂ.6.55ಕ್ಕೆ, ಮೈದಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.40ಕ್ಕೆ, ಸಂ.4ಕ್ಕೆ, ರೋಮಿಯೋ (ತ): ಮ.12.55ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ರಾ.7.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮತದಾರನ ತೀರ್ಪು ದೇಶದ ಭವಿಷ್ಯ ನಿರ್ಧರಿಸುತ್ತದೆ

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ



ಹೆಚ್.ಡಿ.ಕೋಟೆಯ ಸಂತೆಮಾಳ ಮೈದಾನದಲ್ಲಿ ನಡೆದ ಬೃಹತ್ ಸಭೆಯಲ್ಲಿ ಪಾಲ್ಗೊಂಡಿರುವ ಸಿಎಂ ಮತ್ತು ಕಾಂಗ್ರೆಸ್ ಮುಖಂಡರು.

ಹೆಚ್.ಡಿ.ಕೋಟೆ, ಏ.12– ಮತದಾರ ನೀಡುವ ತೀರ್ಪು ದೇಶದ ಭವಿಷ್ಯ ನಿರ್ಧರಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಸಂತೆಮಾಳದ ಮೈದಾನದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರ ಬೃಹತ್ ಸಭೆ ಯಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ರಾಷ್ಟ್ರದ ಹಿತ ಕಾಪಾಡಲು ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸುವ ಹೊಣೆ ನಿಮ್ಮ ಮೇಲಿದೆ ಎಂದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಸುಮಲತಾ ಸೇರಿದಂತೆ ಒಟ್ಟು 27 ಅಭ್ಯರ್ಥಿಗಳನ್ನು ಗೆಲ್ಲಿಸಿ ಕಳುಹಿಸಲಾಯಿತ್ತಾದರೂ, ರಾಜ್ಯಕ್ಕೆ ಅನ್ಯಾಯವಾದಾಗ ಯಾರೊಬ್ಬರೂ ಬಾಯಿ ತೆರೆದು ಮಾತನಾಡಲಿಲ್ಲ. ದೇಶದಲ್ಲಿ ಹೆಚ್ಚು ತೆರಿಗೆ ನೀಡಿದ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೂ ಬಜೆಟ್‌ನಲ್ಲಿ ನಮಗೆ ಹೆಚ್ಚಿನ ಅನುದಾನ ನೀಡಲಿಲ್ಲ ಎಂದು ಆರೋಪಿಸಿದರು. ಪ್ರಧಾನಿ ಮೋದಿ ಹೇಳಿದ ಹಾಗೆ ರಾಜ್ಯ ಬಿಜೆಪಿ ಮುಖಂಡರು ಕೋಲೆ ಬಸವನ ರೀತಿ ತಲೆ ಅಲುಗಾಡಿಸುತ್ತಿದ್ದಾರೆಯೇ ಹೊರತು, ರಾಜ್ಯಕ್ಕೆ ಅನುದಾನ ಕೊಡಿ, ಬರ ಪರಿಹಾರ ಬಿಡುಗಡೆ ಮಾಡಿ ಎಂದು ಕೇಳಿದ್ದೇ ಇಲ್ಲ ಎಂದು ದೂರಿದರು.

ಕಳೆದ 10 ವರ್ಷದ ಹಿಂದೆ ಬೆಲೆ ಇಳಿಸುತ್ತಿದ್ದೇವೆ ಎಂದು ಭರವಸೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ ಬೆಲೆ ಏರುಸುತ್ತಲೇ ಇದೆ. ಗ್ಯಾಸ್ ಸಿಲಿಂಡರ್ ಅನ್ನು ಇತ್ತೀಚೆಗೆ ನೂರು ರೂ. ಇಳಿಸಿದ್ದಾರೆ. ಇದು ಚುನಾವಣಾ ಗಿಮಿಕ್ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ನನ್ನ ತಂದೆ ಶಾಸಕರಾಗಿ ಆಯ್ಕೆಯಾದಾಗ ಅಂದು ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರು ನಮ್ಮ ತಾಲೂಕಿಗೆ ಹೆಚ್ಚಿನ ಅನುದಾನ ನೀಡಿದ್ದರು. ನಾನು ಮತ್ತೊಮ್ಮೆ ಶಾಸಕನಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ. ನಮ್ಮ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಆದರೆ ಈ ಹಿಂದಿನ ಬಿಜೆಪಿ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ ಎಂದರು.

ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಜೊತೆಗೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರಧಾನಿ ಮಾಡಬೇಕು ಎಂದ ಅವರು, ನನಗೆ ನೀಡಿರುವ ಜಂಗಲ್ ಲಾಡ್ಜ್ ಮತ್ತು ವಿಹಾರಧಾಮಗಳ ಅಧ್ಯಕ್ಷ ಸ್ಥಾನದ ಬದಲಿಗೆ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿ ತೊಡೆದು ಹಾಕಲು ಹೆಚ್ಚಿನ ಅನುದಾನವನ್ನು ತಾಲೂಕಿಗೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಳಿ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಕಾಂಗ್ರೆಸ್ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ಶಾಸಕರಾದ ದರ್ಶನ್, ಗಣೇಶ್ ಪ್ರಸಾದ್, ಎಂಎಲ್‌ಸಿ ತಿಮ್ಮಯ್ಯ, ಮಾಜಿ ಸಚಿವ ಎಂ.ಶಿವಣ್ಣ, ಬಿ.ಸೋಮಶೇಖರ್, ಮಾಜಿ ಶಾಸಕ ನಂಜುಂಡಸ್ವಾಮಿ, ಭಾರತಿ ಶಂಕರ್, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಎಸ್.ಸಿ.ಬಸವರಾಜು, ನಟ ಸಾಧುಕೋಕಿಲ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಸತೀಶ್‌ಗೌಡ, ಈರೇಗೌಡ, ನಂದಿನಿ, ಏಜಾಜ್ ಪಾಷ, ಮನುಗನ ಹಳ್ಳಿ ಮಾದಪ್ಪ ಎಚ್.ಸಿ.ನರಸಿಂಹಮೂರ್ತಿ, ಪ್ರದೀಪ, ಸೋಮೇಶ್, ಚಾಮರಾಜು, ಹೆಚ್.ಸಿ. ಮಂಜುನಾಥ್, ಅಶೋಕ್, ಮಧುಕುಮಾರ್, ಬಸವರಾಜು, ಕೃಷ್ಣೇಗೌಡ, ಮಂಜುಳಾ ಮಾನಸ ಇದ್ದರು.

ರಾಜ್ಯ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಉಚಿತ ಬಸ್ ಮತ್ತು ಗೃಹಲಕ್ಷ್ಮಿ ಯೋಜನೆಗೆ 60 ಸಾವಿರ ಕೋಟಿ ಹಣ ವಿನಿಯೋಗ ಮಾಡಿದೆ. ಮಹಿಳೆಯರು ತಮ್ಮ ಮನೆಗಳನ್ನು ಸುಸ್ಥಿತಿಯಲ್ಲಿ ನಿಭಾಯಿಸಲು ಗೃಹಲಕ್ಷ್ಮಿ ಹಣ ಉಪಯೋಗವಾಗುತ್ತಿದೆ. ಮೋದಿ ಅವರ ಕಳೆದ 10 ವರ್ಷದ ಭಾಷಣಗಳು ಭಾಷಣವಾಗಿಯೇ ಉಳಿದಿವೆ. ಈ ಭಾಗದ ಅಭಿವೃದ್ಧಿಗೆ ಮೋದಿ ಸರ್ಕಾರ ಅನುದಾನ ಬಿಡುಗಡೆ ಮಾಡಿಲ್ಲ.

- ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಸಚಿವ.

ಇಂದು ಸಿಎಂ ಪ್ರಚಾರ

ಹುಣಸೂರು, ಏ.12– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಏ.13ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತಯಾಚಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಗೆ ಇಲ್ಲಿನ ನಗರಸಭಾ ಮೈದಾನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಕೆ.ವೆಂಕಟೇಶ್, ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದು, ಕಾರ್ಯಕರ್ತರು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮಾಜಿ ಶಾಸಕ ಮಂಜುನಾಥ್ ತಿಳಿಸಿದ್ದಾರೆ.

ಶಿವಮ್ಮ ನಿಧನ



ಮಲ್ಕುಂಡಿ, ಏ.12– ಇಲ್ಲಿಗೆ ಸಮೀಪದ ಅಂಬಳೆ ಗ್ರಾಮದ ನಿವಾಸಿ ಶಿವಮ್ಮ (99) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಐವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


STG Educational & Cultural Charitable Trust ®
ಎಸ್ ಟಿ ಜಿ ಪದವಿ ಪೂರ್ವ ಕಾಲೇಜು, ಚಿನಕುರಳಿ
ಕ್ವೆಸ್ಟ್ ಫಾರ್ ಎಕ್ಸೆಲೆನ್ಸ್
STG PRE-UNIVERSITY COLLEGE, CHINAKURALI
Quest for Excellence
PP0179
II PUC EXAMINATION RESULT 2023-24
RESULT 100%
ABOVE 98%
4 Student Higher than 588/600
ABOVE 95%
148 Students Higher than 570/600
ABOVE 90%
317 Students Higher than 540/600
ABOVE 85%
374 Students Higher than 510/600
374 DISTINCTION OUT OF 401
100 Out of 100 in Individual Subjects
Kannada 01
Mathematics 230
Chemistry 22
Biology 22
PRAGATHI B.R
592
District 1st Topper & State 7th Rank
JEEVAN GOWDA B.S
590
District 2nd Topper & State 9th Rank
Exclusive Coaching at STG Academy for
JEE Mains + Adv | NEET (UG) | K-CET
8951787788 / 9606980547
Chinakurali, Pandavapura Taluk, Mandya District - 571455
WWW.STGPUC.COM